# ಸೌರಸೂಕ್ತಭಾಷ್ಯ

ಪ್ರಕಾಶಕರು
ಆಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ
2002

ಸ್ಥಾಪನೆ : 1920 ದೂ. 08175-73820

# ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

## (ಪಬ್ಲಿಕ್ ಛಾರಿಟಬಲ್ ಟ್ರಸ್ಟ್)

ಹೊಳೆನರಸೀಪುರ - 573211

ವೇ॥ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳಿಂದ ರಚಿಸಲ್ಪಟ್ಟು
ಪ್ರಕಾಶನಗೊಂಡಿರುವ ಗ್ರಂಥಗಳು

### I. ವೇದಸಾಹಿತ್ಯಪ್ರಿಯರಿಗೆ : (ಕರ್ಮಕಾಂಡದಲ್ಲಿ ಶ್ರದ್ಧಾವಂತರಿಗೆ)

| | | ಪುಟಗಳು |
|---|---|---|
| 1. | ರುದ್ರಭಾಷ್ಯಪ್ರಕಾಶ : (ನಮಸ್ತೇ ರುದ್ರ - ಎಂಬ ವೇದಭಾಗದ ಲಲಿತವಾದ ಕನ್ನಡ ವಿವರಣೆ) | 156 |
| 2. | ಚಮಕಾಧ್ಯಾಯಭಾಷ್ಯ : (ಚ.ಮೇ- ಎಂಬ ವೇದಭಾಗಗಳ ಸರಳ ವ್ಯಾಖ್ಯಾನ) | 82 |
| 3. | ಪುರುಷಸೂಕ್ತಭಾಷ್ಯ : (ಸಹಸ್ರಶೀರ್ಷಾ - ಎಂಬ ಸೂಕ್ತದ ಅರ್ಥವಿವರಣೆ) | 107 |
| 4. | ಶ್ರೀಸೂಕ್ತಭಾಷ್ಯ : (ಹಿರಣ್ಯವರ್ಣಾಂ - ಎಂಬ ಸೂಕ್ತದ ಅರ್ಥ) | 62 |
| 5. | ವಿಷ್ಣುಸೂಕ್ತಭಾಷ್ಯ : (ಋಗ್ವೇದದ ವಿಷ್ಣುಸೂಕ್ತದ 45 ಋಕ್ಕುಗಳ ಅರ್ಥ ವಿವರಣೆ - ನಾರಾಯಣಸೂಕ್ತಭಾಷ್ಯ ಸಮೇತ) | 107 |
| 6. | ಸೌರಸೂಕ್ತಭಾಷ್ಯ :(ಋಗ್ವೇದದ ಸೌರಸೂಕ್ತದ 64 ಋಕ್ಕುಗಳ ಅರ್ಥವಿವರಣೆ) | 104 |

### II. ಪುರಾಣಸ್ತೋತ್ರಪ್ರಿಯರಿಗೆ (ಭಕ್ತಿಪ್ರಧಾನರಾದ ಸಾಧಕರಿಗೆ)

| | | |
|---|---|---|
| 7. | ಅಧ್ಯಾತ್ಮ ರಾಮಾಯಣ : (ಸಂಪೂರ್ಣ ಮೂಲ, ಭಾವಾರ್ಥ ಸಹಿತ) | 612 |
| 8. | ಅಧ್ಯಾತ್ಮ ಶಂಕರವಿಜಯ : (ಶಂಕರರ ಜೀವನಚರಿತ್ರೆ) | 188 |
| 9. | ಶ್ರೀಗುರುಚರಿತಾಮೃತ : (ಶ್ರೀ ಶ್ರೀಗಳವರ ಜೀವನ ಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ) | 234 |
| 10. | ಸ್ತೋತ್ರಮಾಲಾ - ಭಾಗ ೧, ಪಂಚರತ್ನಗಳು : 1). ಭೀಷ್ಮಸ್ತವರಾಜ 2). ಹರಿಶರಣಾಷ್ಟಕ 3). ಅನುಸ್ಮೃತಿ,4). ಗಜೇಂದ್ರಮೋಕ್ಷ, 5). ಆದಿತ್ಯಹೃದಯ | 103 |
| 11. | ಸ್ತೋತ್ರಮಾಲಾ - ಭಾಗ ೨ : 4 ಗಣಪತಿ ಸ್ತೋತ್ರಗಳು, 11 ಶಿವಸ್ತೋತ್ರಗಳು, 2 ವಿಷ್ಣುಸ್ತೋತ್ರಗಳು - ಪಾಂಡವಗೀತ ಸಹಿತ) | 84 |
| 12. | ಶಿವಾಪರಾಧಕ್ಷಮಾಪಣಾ ಸ್ತೋತ್ರ : (ವಿವರಣೆ ಸಹಿತ) | 38 |

ರಕ್ಷಾಕವಚ ಮೂರನೆಯ ಪುಟದಲ್ಲಿ ಮುಂದುವರೆದಿದೆ

# ಸೌರಸೂಕ್ತಭಾಷ್ಯ

(ಕನ್ನಡ ವಿವರಣೆ)

ಬರೆದವರು :

ಆಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ : ೧೯೩

ಪ್ರಕಾಶಕರು

**ಆಧ್ಯಾತ್ಮಪ್ರಕಾಶಕಾರ್ಯಾಲಯ**

ಹೊಳೆನರಸೀಪುರ,

ದೂರವಾಣಿ : 08175-73820

೨೦೦೨

ಮೊದಲನೆಯ ಸಂಸ್ಕರಣ : ೧೯೮೬ (೧೦೦೦ ಪ್ರತಿಗಳು)
ಎರಡನೆಯ ಸಂಸ್ಕರಣ : ೨೦೦೨ (೨೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಆಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ

**ಪ್ರಿಂಟ್ ಮೀಡಿಯಾ**
ನಂ.30/1,4ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ,
ಚಾಮರಾಜಪೇಟೆ, ಬೆಂಗಳೂರು-560018
ದೂರವಾಣಿ : 6618852

ಮುದ್ರಕರು

**ಸ್ಟಾಂಡರ್ಡ್ ಪ್ರಿಂಟರ್ಸ್**
ಶಂಕರಮಠದ ರಸ್ತೆ, ಶಂಕರಪುರಂ
ಬೆಂಗಳೂರು. ದೂರವಾಣಿ : 6521527

# ಪೀಠಿಕೆ

ಅಧ್ಯಾತ್ಮಪ್ರಕಾಶಮಾಸಪತ್ರಿಕೆಯಲ್ಲಿ 1984ನೆಯ ಫೆಬ್ರವರಿ ಮಾಹೆಯಿಂದ 1985ನೇ ಅಕ್ಟೋಬರ್ ಮಾಹೆಯ ಪೂರ ಪ್ರಕಟವಾಗಿರುವ ಸಂಚಿಕೆಗಳಲ್ಲಿ ಭಾಗಭಾಗವಾಗಿ ಲೇಖನರೂಪವಾಗಿ ಹೊರಬಂದ ವಿಷಯಗಳನ್ನು ಒಂದುಗೂಡಿಸಿ ಈ ಪುಸ್ತಕವನ್ನು ಸಿದ್ಧಗೊಳಿಸಲಾಗಿದೆ. ಇದರಲ್ಲಿ ಋಗ್ವೇದದ ಸೌರಸೂಕ್ತದ 64 ಮಂತ್ರಗಳ ಕನ್ನಡ ವಿವರಣೆಯಿದೆ. ಮೂಲಮಂತ್ರಗಳ ಸಂಗ್ರಹವನ್ನು **"ಸಸ್ವರ ವೇದಮಂತ್ರಾಃ"** ಎಂಬ ಪುಸ್ತಕದಲ್ಲಿರುವ ಸೌರಸೂಕ್ತವನ್ನು ಅನುಸರಿಸಿ ಬರೆದುಕೊಂಡಿದೆ. ಕನ್ನಡ ವಿವರಣೆಯನ್ನು ಬರೆಯುವಾಗ ಸಾಯಣಭಾಷ್ಯದಿಂದಲೂ ಶ್ರೀ ಶಂಕರಭಗವತ್ಪಾದರವರ ಪ್ರಸ್ಥಾನತ್ರಯ-ಭಾಷ್ಯಗಳಿಂದಲೂ ವಿಷಯಗಳನ್ನು ಸಂಗ್ರಹಿಸಿದೆ.

ಈವರೆಗೆ ನಾನು ಬರೆದು ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಪ್ರಕಟಿಸಿರುವ ವೈದಿಕಮಂತ್ರಭಾಷ್ಯಗಳಂತೆಯೇ ಈ ಗ್ರಂಥವೂ ಮಹಾಜನರ ಮೆಚ್ಚುಗೆಗೆ ಪಾತ್ರವಾಗಬಹುದೆಂತ ಭಾವಿಸಿದ್ದೇನೆ. ''ಸ್ವಾಧ್ಯಾಯೋ ಅಧ್ಯೇತವ್ಯಃ' ಎಂಬ ವಿಧಿಯಂತೆ ಅಧಿಕಾರಿಗಳಾದ ಪುರುಷರಿಗೆ ವೇದಾಧ್ಯಯನವು ಕರ್ತವ್ಯವಾಗಿರುವಂತೆಯೇ ಮಂತ್ರಾರ್ಥಗಳ ಜಿಜ್ಞಾಸೆಯೂ ಕರ್ತವ್ಯವೇ ಆಗಿದೆ. ಇನ್ನುಳಿದ ಜಿಜ್ಞಾಸುಗಳೂ ಭಕ್ತರೂ ಆದ ಓದುಗರು ಕೂಡ ಮಂತ್ರಗಳ ಭಾವಾರ್ಥವನ್ನು ಗ್ರಹಿಸಿ ಸೂರ್ಯಭಗವಂತನ ಆರಾಧನೆ, ಜಪ, ಉಪಾಸನೆಗಳನ್ನು ಕೈಗೊಳ್ಳುವದಕ್ಕೆ ಈ ವಿವರಣೆಯು ಸಹಾಯಕವಾಗಲಿದೆ.

ಅಮೇರಿಕಾದಲ್ಲಿರುವ ಡಾ. ಶ್ರೀಧರಶಾಸ್ತ್ರಿ ಮತ್ತು ಅವರ ಧರ್ಮಪತ್ನಿ ಇಂದಿರಾಶಾಸ್ತ್ರಿಯವರು ಈ ಪುಸ್ತಕದ ಪುನಃ ಮುದ್ರಣಕ್ಕೆ ಉದಾರವಾಗಿ ಧನಸಹಾಯ ಮಾಡಿರುತ್ತಾರೆ. ಇವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಲಾಗಿದೆ.

ಇತಿ

ಸಜ್ಜನವಿಧೇಯ,

ಹೊಳೆನರಸೀಪುರ

೧೨.೨.೨೦೦೨

**ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿ**

ಗ್ರಂಥಕರ್ತ.

॥ ಓಂ ॥

॥ ಸೂರ್ಯಗಾಯತ್ರೀಮಂತ್ರ ॥

ಓಂ ಭಾಸ್ಕರಾಯ ವಿದ್ಮಹೇ ಮಹದ್ಯುತಿಕರಾಯ ಧೀಮಹಿ ।
ತನ್ನೋ ಆದಿತ್ಯಃ ಪ್ರಚೋದಯಾತ್ ॥

॥ ಓಮ್ ॥

# ಸೌರಸೂಕ್ತಭಾಷ್ಯ

ಭಗವಾನ್ ಸೂರ್ಯನಾರಾಯಣನನ್ನು ಸ್ತುತಿಸುವ ಮಂತ್ರಗಳ ಗುಂಪಿಗೆ **ಸೌರಸೂಕ್ತ**ವೆಂಬ ಹೆಸರನ್ನು ವೈದಿಕರು ಕೊಟ್ಟಿರುತ್ತಾರೆ. ನಾಲ್ಕು ವೇದಗಳಲ್ಲಿಯೂ ಸವಿತೃದೇವತಾತ್ಮಕವಾದ ಗಾಯತ್ರೀಮಂತ್ರವಿದ್ದೇ ಇದೆ. ಅಲ್ಲದೆ ಕೆಲವು ವಿಶೇಷಸ್ತುತಿಗಳೂ ಇವೆ. ಋಗ್ವೇದದಲ್ಲಿರುವ ಇಂಥ ಸ್ತುತಿಭಾಗವನ್ನು ಸಾಯಣಭಾಷ್ಯಾನುಗುಣವಾಗಿ ಈಗ ವ್ಯಾಖ್ಯಾನಮಾಡಲಾಗುವದು. ಋಗ್ವೇದ ಸಂಹಿತೆಯಲ್ಲಿ ಅಡಕವಾಗಿರುವ ಈ ಸೌರಮಂತ್ರಗಳನ್ನು ಸಂಗ್ರಹಿಸಿ 'ಸಸ್ವರ ವೇದಮಂತ್ರಾಃ' (1977) ಎಂಬ ರಾಮಕೃಷ್ಣಾಶ್ರಮದವರ ಪ್ರಕಟನೆಯಲ್ಲಿ ಕೊಡಲಾಗಿದೆ. ಇವು ಒಟ್ಟು 64 ಮಂತ್ರಗಳಿವೆ. ಇವುಗಳಲ್ಲಿ ಮೊದಲನೆಯ ಹದಿಮೂರು ಮಂತ್ರಗಳು ಋಗ್ವೇದದ ಒಂದನೆಯ ಅಷ್ಟಕದ ನಾಲ್ಕನೆಯ ಅಧ್ಯಾಯದ ಏಳನೆಯ ವರ್ಗದಲ್ಲಿವೆ. ಪ್ರಸ್ಕಣ್ವನೆಂಬ ಮಹರ್ಷಿಯು ಕಂಡುಕೊಂಡ ಮಂತ್ರಗಳಿವು. ಸೂರ್ಯದೇವತಾತ್ಮಕವಾದವುಗಳು. ಮೊದಲನೆಯ ಒಂಭತ್ತು ಮಂತ್ರಗಳು ಗಾಯತ್ರೀ ಛಂದಸ್ಸಿನಲ್ಲಿಯೂ ಉಳಿದ ನಾಲ್ಕು ಅನುಷ್ಟುಪ್ ಛಂದಸ್ಸಿನಲ್ಲಿಯೂ ಇವೆ. ಈ ಮಂತ್ರಗಳ ಅಭಿಮಾನಿದೇವತೆಯಾದ ಸೂರ್ಯನು ಎಲ್ಲ ಪ್ರಾಣಿಗಳಿಗೂ ಚಿರಪರಿಚಿತನು. ಸೂರ್ಯೋದಯವಾಗದೆ ಪ್ರಪಂಚದ ವ್ಯವಹಾರವೇ ಸಾಗುವಂತಿಲ್ಲ. ಇಂಥ ಸೂರ್ಯನೇ ಸ್ಥಾವರಜಂಗಮಪ್ರಾಣಿಗಳ ಆತ್ಮನೂ ಆಗಿರುವನು. ಸಂಧ್ಯಾವಂದನಕಾಲಕ್ಕೆ ದ್ವಿಜರೆಲ್ಲರೂ ಸೂರ್ಯನನ್ನೇ ಉಪಾಸನೆಮಾಡುತ್ತಾರೆ. ಪ್ರತ್ಯಕ್ಷದೇವತೆಗಳಲ್ಲೊಬ್ಬನಾದ ಸೂರ್ಯನ ಮಹಿಮೆಯನ್ನು ಕುರಿತು ಪ್ರಸ್ಕಣ್ವಋಷಿಯು ಹಾಡಿರುವ ಈ ಮಂತ್ರಾರ್ಥಗಳನ್ನು ನಾವು ಅನುಸಂಧಾನಮಾಡೋಣ.

**ಓಂ ॥ ಉದುತ್ಯಂ ಜಾತವೇದಸಂ ದೇವಂ ವಹನ್ತಿ ಕೇತವಃ ।**
**ದೃಶೇ ವಿಶ್ವಾಯ ಸೂರ್ಯಮ್ ॥ ೧ ॥**

**"ಪ್ರಸಿದ್ಧನಾಗಿರುವ, ಹಾಗೂ ಹುಟ್ಟಿರುವ ಎಲ್ಲಾ ಪ್ರಾಣಿಗಳನ್ನೂ ಬಲ್ಲವನಾದ ದೇವನಾದ ಸೂರ್ಯನನ್ನು ಸಮಸ್ತಜಗತ್ತಿನ ದರ್ಶನಕ್ಕಾಗಿ ಅವನ ರಶ್ಮಿಗಳು ಮೇಲುಮೇಲಕ್ಕೆ ಒಯ್ಯುತ್ತಿರುವವು" - ಎಂದು ಮಂತ್ರಾರ್ಥವು.**

ಸೂರ್ಯನು ನಮಗೆ ಕೋಟಿಗಟ್ಟಲೆ ಮೈಲುಗಳ ದೂರದಲ್ಲಿರುತ್ತಾನೆ. ಎಂಥ ವಿಜ್ಞಾನಿಗಳಿಂದಲೂ ಅವನನ್ನು ಮುಟ್ಟುವದು ಸಾಧ್ಯವಾಗಿಲ್ಲ. ಹಾಗೆಯೇ ಯಾವ ರಾಜಕೀಯನಾಯಕರುಗಳೂ ಆತನನ್ನು ತಮ್ಮವನನ್ನಾಗಿ ಮೀಸಲಿರಿಸಿಕೊಂಡು ಬೇರೆಯವರಿಗೆ ದೊರಕದಂತೆ ಮಾಡಲು ಸಮರ್ಥರಾಗಿಲ್ಲ. ಹೀಗೆ ಅತ್ಯಂತಸಮನೂ ಏಕನೂ ಅದ್ವಿತೀಯನೂ ತೇಜೋಮಯನೂ ಆದ ಈ ದೇವತೆಯು ಭಗವಂತನ ಸಾಕ್ಷಾದ್ ವಿಭೂತಿರೂಪನೇ ಎಂಬ ಮಾತಿಗೆ ಎರಡಿಲ್ಲ. ಪ್ರತಿದಿನವೂ ಈತನು ತನ್ನ ಪವಿತ್ರಕಿರಣಗಳಿಂದ ನಮ್ಮನ್ನು ಸ್ಪರ್ಶಿಸುತ್ತಿರುವನು. ಮಳೆಗಾಲದಲ್ಲೇನಾದರೂ ಆಕಾಶದಲ್ಲಿ ಮೋಡಗಳೇ ತುಂಬಿಕೊಂಡಿದ್ದು ದಿನಪೂರ್ತಿಯೂ ಒಮ್ಮೆಯೂ ಸೂರ್ಯದರ್ಶನವಾಗದೆ ಹೋದರೆ ಆ ದಿನವನ್ನು 'ದುರ್ದಿನ'ವೆನ್ನುವರು. ಎಷ್ಟೋ ಜನ ಸಂಪ್ರದಾಯನಿಷ್ಠರು ಅಂಥ ದಿನಗಳಲ್ಲಿ ಊಟವನ್ನೇ ಮಾಡದೆ ಉಪವಾಸವನ್ನಾಚರಿಸುವರು. ಬಿಸಿಲಿನ ಪ್ರಯೋಜನವು ಇಷ್ಟೆಂದು ಹೇಳಲು ಬರುವದೇ ಇಲ್ಲ. ಸಸ್ಯಗಳು ಪಕ್ವವಾಗುವದಕ್ಕೆ, ಪ್ರಾಣಿಗಳು ಜೀವಿಸುವದಕ್ಕೆ, ಮನುಷ್ಯರು ತಮ್ಮ ವ್ಯವಹಾರಗಳನ್ನು ಮುಂದುವರಿಸುವದಕ್ಕೆ ಬೆಳಕೂ ಶಾಖವೂ ಅತ್ಯವಶ್ಯವೆಂದು ಹೇಳಬೇಕಾಗಿಲ್ಲ. ಇಂಥ ಸೂರ್ಯನು ಉದಯಿಸುತ್ತಿರುವಾಗಲೇ ಅವನ ದಿವ್ಯಕಿರಣಗಳು ಆತನನ್ನು ಮೇಲು ಮೇಲಕ್ಕೆ ಒಯ್ಯುತ್ತಿರುವಂತೆ ಕಂಡುಬರುವದು. ಸೂರ್ಯನು ಮೇಲೇರಿದಂತೆಲ್ಲ ಜಗತ್ತನ್ನೆಲ್ಲ ಬೆಳಗುತ್ತಾ ಎಲ್ಲವನ್ನೂ ನೋಡುವ ಸಾಕ್ಷಿಯಾಗಿಬಿಡುವನು. ಎಲ್ಲಕ್ಕಿಂತಲೂ ಎತ್ತರದಲ್ಲಿರುವನು. ಇದು ಅವನು ಎಲ್ಲಾ ರೀತಿಯ ಪಾಪಗಳಿಂದಲೂ ಮೇಲೆದ್ದಿರುವನು - ಎಂಬುದಕ್ಕೆ ಗುರುತಾಗಿದೆ. ಚಂದ್ರನಂತೆ ಸೂರ್ಯನಲ್ಲಿ ಕಳಂಕವಿಲ್ಲ. ಸೃಷ್ಟಿಯ ಆರಂಭದಲ್ಲಿ ಪ್ರಜಾಪತಿಯು ಹಿಂದಿನ ಕಲ್ಪದಲ್ಲಿ ಯಾರು ಎಲ್ಲಾ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ ಪರಿಶುದ್ಧರಾಗಿದ್ದರೋ ಅಂಥವರಲ್ಲೇ ಅತ್ಯಂತ ಹೆಚ್ಚಿನ ಪುಣ್ಯವಂತನನ್ನಾರಿಸಿ ಸೂರ್ಯನನ್ನಾಗಿ ಮಾಡಿದನು - ಎಂದು ಉಪನಿಷತ್ತಿನಲ್ಲಿ ತಿಳಿಸಿದೆ. ಹೀಗೆ ಸೂರ್ಯಭಗವಂತನು ಜಗತ್ತನ್ನೆಲ್ಲ ತನ್ನ ಕಿರಣಗಳಿಗೆ ವಶಪಡಿಸಿಕೊಂಡು ಆ ಮೂಲಕ ಎಲ್ಲಾ ಪ್ರಾಣಿಗಳನ್ನೂ ಬಲ್ಲವನಾಗಿಯೂ ಇರುವನು. ಕೆಲವು ಪ್ರಾಣಿಗಳು ನೀರಿನಲ್ಲೊ ಭೂಮಿಯಲ್ಲೊ ಅಡಗಿದ್ದುಕೊಂಡು ಸೂರ್ಯನಿಗೆ ಗೋಚರವಾಗದೆ ಇರಬಹುದು. ಆದರೂ ಅವುಗಳನ್ನು ತನ್ನ ಉಷ್ಣಾಂಶದಿಂದ ವ್ಯಾಪಿಸಿಕೊಂಡೇ ಇರುವ ಸೂರ್ಯನು ಸರ್ವಾತ್ಮನೇ ಆಗಿರುವನು. ಇಂಥ . ಸೂರ್ಯನು ಉದಯಿಸುತ್ತಿರುವಲ್ಲಿ ಅವನ ಕಿರಣಗಳನ್ನು ನಾವು ಸ್ಪರ್ಶಿಸಿ ಶುದ್ಧರಾಗಿ ಆತನ ಆರಾಧನೆಯನ್ನು ಕೈಗೊಳ್ಳಬೇಕು. ಸ್ತೋತ್ರ - ನಮಸ್ಕಾರಗಳೇ ಆತನ ಆರಾಧನೆಯ ಬಗೆಗಳು - ಎಂದು ತಿಳಿಯಬೇಕು.

**ಅಪತ್ಯೇ ತಾಯವೋ ಯಥಾ ನಕ್ಷತ್ರಾ ಯಂತ್ಯಕ್ತುಭಿಃ ।**
**ಸೂರಾಯ ವಿಶ್ವಚಕ್ಷಸೇ ॥ ೨ ॥**

**"ವಿಶ್ವಚಕ್ಷುವಾದ ಸೂರ್ಯನು ಬರಲಿದ್ದಾನೆಂದು ತಿಳಿದಕೂಡಲೆ ಕಳ್ಳರಂತೆ ನಕ್ಷತ್ರಗಳು ರಾತ್ರಿಯೊಡನೆ ಕಣ್ಮರೆಯಾಗಿಬಿಡುವವು" ಎಂದು ಮಂತ್ರಾರ್ಥ.**

ಭೂಲೋಕದ ಜನರ ದೃಷ್ಟಿಯಿಂದ ಸೂರ್ಯನಲ್ಲಿ ಹಗಲುರಾತ್ರಿಗಳು ಕಲ್ಪಿತವಾಗಿರುವವು. ಒಂದು ವೇಳೆ ನಾವು ಸೂರ್ಯಲೋಕದಲ್ಲೇ ಇದ್ದಿದ್ದರೆ ರಾತ್ರಿಯ ಕತ್ತಲೆಯ ಭಯವೇ ಇರುತ್ತಿರಲಿಲ್ಲ. ಇರಲಿ, ಸೂರ್ಯನು ಪ್ರಕಾಶಿಸುತ್ತಿರುವಲ್ಲಿ ಯಾವ ಉಳಿದ ಬೆಳಕೂ ಕೆಲಸ ಮಾಡುವದಿಲ್ಲ. ಎಲ್ಲವೂ ಮಂಕಾಗಿಬಿಡುವವು ಹೀಗಿರುವಲ್ಲಿ ಕತ್ತಲೆಯಂತೂ ಸೂರ್ಯನಿರುವಲ್ಲಿ ಹೇಗೆ ತಾನೆ ಇದ್ದೀತು ? ಈ ಮಹಿಮೆಯನ್ನೇ ಪ್ರಸ್ಕಣ್ವಋಷಿಯು ಈ ಮಂತ್ರದಲ್ಲಿ ತಿಳಿಸಿದ್ದಾನೆ. ತಾಯು-ಎಂದರೆ ಕಳ್ಳನೆಂದರ್ಥ. ಮಾಲೀಕನು ಬಂದಾಗ ಕಳ್ಳನು ಓಡಿಹೋಗುವಂತೆ ಸೂರ್ಯನು ತೋರಿಕೊಂಡನೆಂದರೆ ಸರಿ, ಕತ್ತಲೆಯು ಹೇಳಹೆಸರಿಲ್ಲವಾಗುವದು. ಇನ್ನು ನಕ್ಷತ್ರಗಳೇ ಮುಂತಾದ ಬೆಳಕುಗಳನ್ನು ವಿಚಾರಮಾಡೋಣ. ನಕ್ಷತ್ರಶಬ್ದಕ್ಕೆ ಭಾಷ್ಯದಲ್ಲಿ ಕೊಟ್ಟಿರುವ ಅರ್ಥಗಳು ಹೀಗಿವೆ. (೧) ದೇವಗೃಹಗಳು ನಕ್ಷತ್ರಗಳೆನಿಸಿರುವವು. (೨) ಮನುಷ್ಯರು ತಮ್ಮ ಪುಣ್ಯವಿಶೇಷದಿಂದ ಸ್ವರ್ಗವನ್ನು ಪಡೆದುಕೊಂಡಾಗ ನಕ್ಷತ್ರರೂಪದಿಂದ ವಿರಾಜಿಸುವರು. (೩) ನಾಶವಾಗದೆ ಕುಂದದೆ ಇರುವವೇ ನಕ್ಷತ್ರಗಳು. ಹೀಗೆ ಯಾವ ರೀತಿಯಿಂದ ವ್ಯುತ್ಪತ್ತಿಮಾಡಿದರೂ ನಮಗೆ ಆಕಾಶದಲ್ಲಿ ಗೋಚರವಾಗುತ್ತಿರುವ ಜ್ಯೋತಿರ್ಮಂಡಲಗಳು ಸೂರ್ಯನು ಉದಯಿಸಿದನೆಂದರೆ ಕಾಂತಿಹೀನವಾಗಿ ಕಣ್ಮರೆಯಾಗಿಬಿಡುವವು. ಖಗೋಳಶಾಸ್ತ್ರಜ್ಞರ ಅಭಿಪ್ರಾಯದಂತೆ ಸೂರ್ಯನನ್ನು ನೂರುಪಾಲು ಮೀರಿಸಿರುವ ನಕ್ಷತ್ರಗಳೂ ಗ್ರಹಗಳೂ ಇರಬಹುದು. ಆದರೆ ಭೂಲೋಕದ ಜನರ ಅಪೇಕ್ಷೆಯಿಂದ ಸೂರ್ಯನೇ ಹೆಚ್ಚಿನ ತೇಜೋದ್ರವ್ಯವಾಗಿರುವನು. ಆ ದೃಷ್ಟಿಯಿಂದಲೇ ಇಲ್ಲಿ ಸ್ತುತಿಮಾಡಲಾಗಿದೆ. ಜ್ಯೋತಿಷ್ಕರ ಅಭಿಪ್ರಾಯದಂತೆಯೂ ಸೂರ್ಯನೇ ಹೆಚ್ಚು ಪ್ರಕಾಶಯುಕ್ತನಾದವನು. ಈತನಿಗೆ ವಕ್ರಗತಿಯಿರುವದಿಲ್ಲ. ಗುರು, ಶನಿ - ಮುಂತಾದವರು ಹಿಂದಕ್ಕೂ ಸರಿಯುವದುಂಟು. ಆದರೆ ಸೂರ್ಯಚಂದ್ರರು ಹಾಗೆ ಹಿಂದಕ್ಕೆ ಹೋಗುವ ಸಂಭವವಿಲ್ಲ. ಸೋಮವಾರವಾದ ಅನಂತರ ಮಂಗಳವಾರವೇ ಆದೀತೇ ಹೊರತು ಭಾನುವಾರವಾಗುವದಿಲ್ಲ. ಮತ್ತು ಉಳಿದ ಗ್ರಹಗಳು ಯಾರೇ ಇರಲಿ, ಸೂರ್ಯನೊಡನೆ ಒಂದೇ ರಾಶಿ, ನಕ್ಷತ್ರಗಳಲ್ಲಿ ಸೇರಿಬಿಟ್ಟರೆ ಅಸ್ತರಾಗಿಬಿಡುವರು.

ಎಷ್ಟೋ ಜನರಿಗೆ ಶುಭಯೋಗಕಾರಕಗ್ರಹಗಳು ಉತ್ತಮಸ್ಥಾನದಲ್ಲಿದ್ದರೂ ಸೂರ್ಯನೊಡನೆ ಸೇರಿಬಿಟ್ಟರೆ ಅಭಿಭೂತರಾಗಿಬಿಡುವದರಿಂದ ಫಲಗಳು ಸರಿಯಾಗಿ ನಡೆಯುವದಿಲ್ಲ. ಹೀಗೆಲ್ಲ ಜ್ಯೋತಿಷ್ಕರ ಅಭಿಪ್ರಾಯವಿದೆ. ಆದ್ದರಿಂದ ಸೂರ್ಯನನ್ನು ಕಂಡು ಕಳ್ಳರಂತೆ ನಕ್ಷತ್ರಗಳೂ ರಾತ್ರಿಯೂ ಕಣ್ಮರೆಯಾಗಿ ಬಿಡುವದರಿಂದ ಸೂರ್ಯನೊಬ್ಬನೇ ಗ್ರಹರಾಜನು. ಹಾಗೂ ಹೆಚ್ಚಿನ ಬೆಳಕಾಗಿರುವನು - ಎಂದು ಋಷಿಯ ಅಭಿಪ್ರಾಯ. ಅಕ್ತುಭಿಃ - ಎಂದರೆ ರಾತ್ರಿಗಳೊಡನೆ ಎಂದರ್ಥ. ತ್ಯೇ ಎಂದರೆ ಪ್ರಸಿದ್ಧವಾದವುಗಳಾದ ಎಂದರ್ಥ. ಸೂರ್ಯಭಗವಂತನನ್ನು ಹೀಗೆ ನಕ್ಷತ್ರಗ್ರಹತಾರೆಗಳಿಗೆಲ್ಲ ಒಡೆಯನೆಂದೂ ಹೆಚ್ಚಿನವನೆಂದೂ **ಆದಿತ್ಯಹೃದಯ**ವೆಂಬ ಸ್ತೋತ್ರದಲ್ಲಿಯೂ ತಿಳಿಸಿದೆ.

**ಅದೃಶ್ರಮಸ್ಯ ಕೇತವೋ ವಿರಶ್ಮಯೋ ಜನಾನ್ ಅನು ।**
**ಭ್ರಾಜನ್ತೋ ಅಗ್ನಯೋ ಯಥಾ ॥ ೩ ॥**

**'ಈ ಸೂರ್ಯಭಗವಂತನ ಬೆಳಗುವ ಕಿರಣಗಳು ಹುಟ್ಟಿರುವ ಎಲ್ಲಾ ಪ್ರಜೆಗಳನ್ನೂ ನೋಡುತ್ತಲಿವೆ. ಹೇಗೆಂದರೆ ಹೊಳೆಯುತ್ತಿರುವ ಅಗ್ನಿಗಳಂತೆ' ಎಂದು ಮಂತ್ರದ ಸಾಮಾನ್ಯಾರ್ಥವಾಗುತ್ತದೆ.**

ಅಗ್ನಿಯನ್ನು **'ಜಾತವೇದ'**ನೆಂದು ಕರೆಯುವರು. 'ಜಾತಂ ಜಾತಂ ವೇತ್ತಿ' ಎಂಬ ವ್ಯುತ್ಪತ್ತಿಯಂತೆ ಹುಟ್ಟಿಹುಟ್ಟಿದ್ದೆಲ್ಲವನ್ನೂ ಅರಿಯುತ್ತಿರುವವನೇ ಜಾತವೇದನು. ಏಕೆಂದರೆ ಉತ್ಪತ್ತಿಯೆಂಬುದು ಅಗ್ನಿಯ ಬಲದಿಂದಲೇ ಸಾಗುತ್ತದೆ. ಯಾವದೇ ವಸ್ತುವು ಹುಟ್ಟುವದಾದರೆ ಉಷ್ಣಾಂಶವಿಲ್ಲದೆ ಹುಟ್ಟಲಾರದು. ಶಾಖವು ಜನನಕ್ಕೆ ಮೂಲವಾಗಿರುತ್ತದೆ. ಅದು ಅಗ್ನಿಯ ಅಂಶವು. ಆದ್ದರಿಂದ ಹುಟ್ಟಿದ ವಸ್ತುಗಳೆಲ್ಲಕ್ಕೂ ಅಗ್ನಿಯು ವೇತ್ತೃ (ತಿಳಿಯುವವನು)ವಾಗಿರುವನು. ಹಾಗೆಯೇ ಸೂರ್ಯನ ರಶ್ಮಿಗಳೂ ಸಹ ಹುಟ್ಟುತ್ತಿರುವ ಸಸ್ಯವರ್ಗ, ಪ್ರಾಣಿವರ್ಗಗಳೆಲ್ಲವನ್ನೂ ವ್ಯಾಪಿಸಿಕೊಂಡೇ ತೀರುವುವು. ರಶ್ಮಿಗಳ ದೃಷ್ಟಿಪಾತಕ್ಕೆ ಎಲ್ಲ ವಸ್ತುಗಳೂ ಗೋಚರವಾಗುವುವು. ಇದನ್ನೇ ಋಷಿಯು ಇಲ್ಲಿ ತಿಳಿಸಿರುತ್ತಾನೆ. ಈ ಸೂರ್ಯನ ಕೇತುಗಳು ವಿ+ಅದೃಶ್ರಮ್=ವ್ಯದೃಶ್ರಮ್ - ಎಂದರೆ ಕಣ್ಣಿಗೆ ಗೋಚರವಾಗುವಂಥ, ಜನಾನ್ - ಹುಟ್ಟಿದಂಥ ಎಲ್ಲಾ ಪದಾರ್ಥಗಳನ್ನೂ, ಅನು-ಅನುಸರಿಸಿ ಬೆಳಗುತ್ತವೆ. ಎಲ್ಲವನ್ನೂ ಪ್ರಕಾಶಗೊಳಿಸುತ್ತವೆ - ಎಂದು ಸ್ತುತಿಸಿರುತ್ತಾನೆ. ಅಗ್ನಿಯ ಜ್ವಾಲೆಗಳನ್ನು ಉದಾಹರಣೆಯಾಗಿ ಕೊಟ್ಟಿರುತ್ತಾನೆ. ಸೂರ್ಯನಾಗಲಿ, ಅಗ್ನಿಯಾಗಲಿ ಬೇರೆ ಬೇರೆಯ ತತ್ತ್ವಗಳಲ್ಲ. ಎಲ್ಲಾ ತೇಜೋದ್ರವ್ಯಗಳಲ್ಲಿಯೂ ಅಂತರ್ಯಾಮಿಯಾಗಿ ಬೆಳಗುತ್ತಿರುವದು ಬ್ರಹ್ಮವೇ. ಸೂರ್ಯಾಂತರ್ಗತವಾದ ತೇಜಸ್ಸು ಸಹ ಬ್ರಹ್ಮದ

ಮಹಿಮೆಯೇ ಆಗಿರುತ್ತದೆ ಇರಲಿ. ಪ್ರಕೃತ - ಸೂರ್ಯನ ಕಿರಣಗಳು ತಾವು ಮೂಡಿಕೊಂಡಕೂಡಲೇ ಸಕಲವಸ್ತುಗಳನ್ನೂ ಪ್ರಕಾಶಗೊಳಿಸುವವು. ಅಷ್ಟೇ ಅಲ್ಲ. ಸೂರ್ಯಕಿರಣಗಳ ಸ್ಪರ್ಶವಿಲ್ಲವಾದಲ್ಲಿ ಪದಾರ್ಥಗಳು ಶುದ್ಧಿಯಾಗಲಾರವು - ಎಂದೇ ಧರ್ಮಶಾಸ್ತ್ರವಿದೆ. ವೈದಿಕರು ತಮ್ಮ ಜನಿವಾರವು ಹರಿದುಹೋದಲ್ಲಿ - ಆಗ ರಾತ್ರಿಯಾಗಿದ್ದರೆ - ಹೊಸ ಜನಿವಾರವನ್ನು ಧರಿಸುವದಿಲ್ಲ. ಸೂರ್ಯಕಿರಣಗಳ ಸ್ಪರ್ಶವಿಲ್ಲದೆ ಜನಿವಾರವು ಶುದ್ಧವಾಗುವದಿಲ್ಲವೆಂಬುದೇ ಇದಕ್ಕೆ ಕಾರಣವು. ಹೀಗೆ ಸೂರ್ಯಭಗವಂತನ ಕಿರಣಸ್ಪರ್ಶವು ಪರಿಶುದ್ಧಿಯ (ಮಡಿಯ) ಮೂಲವಾಗಿದೆ ಎಂದು ತಿಳಿಯಬೇಕು.

**ತರಣಿರ್ವಿಶ್ವದರ್ಶತೋ ಜ್ಯೋತಿಷ್ಕೃದಸಿ ಸೂರ್ಯ ।**
**ವಿಶ್ವಮಾಭಾಸಿ ರೋಚನಮ್ ॥ ೪ ॥**

**'ಎಲೈ ಸೂರ್ಯನೆ, ನೀನು ತರಣಿಯೆನಿಸಿರುವೆ. ಎಲ್ಲಾ ಪ್ರಾಣಿಗಳಿಂದಲೂ ದರ್ಶನೀಯನಾಗಿರುವೆ. ಎಲ್ಲಾ ವಸ್ತುಗಳ ಪ್ರಕಾಶನೂ ಆಗಿರುವೆ. ಆದ್ದರಿಂದ ಅಂತರಿಕ್ಷವನ್ನು ಎಲ್ಲೆಲ್ಲಿಯೂ ವ್ಯಾಪಿಸಿ ಬೆಳಗುತ್ತಿರುವೆ' ಎಂದು ಮಂತ್ರಾರ್ಥವು.**

ಸೂರ್ಯನನ್ನು "**ತರಣಿ**" ಎಂದು ಕರೆದಿರುವದರ ರಹಸ್ಯವೇನೆಂದರೆ: ಈತನು ಅರ್ಧನಿಮಿಷಕ್ಕೆ ಎರಡು ಸಹಸ್ರ - ಎರಡುನೂರು - ಎರಡು ಯೋಜನಗಳ ದಾರಿಯನ್ನು ದಾಟಿಬಿಡುವನು. ಒಂದು ಯೋಜನಕ್ಕೆ ಹದಿನೈದು ಮೈಲಿಗಳೆಂದು ಹೇಳುತ್ತಾರೆ. ಅದರಂತೆ ಲೆಕ್ಕಮಾಡಿದರೆ ಸೂರ್ಯನು ಎಂಥ ಕ್ಷಿಪ್ರಗತಿಯುಳ್ಳವನೆಂಬುದು ತಿಳಿದೀತು. ಇಲ್ಲವಾದರೆ ಅವನು ಅಸ್ತಾಚಲವನ್ನು 12 ಗಂಟೆಗಳ ಅವಧಿಯೊಳಗೆ ಮುಟ್ಟಲಾರನು. ಹೀಗೆ ದೂರವನ್ನು ಅತಿಕ್ರಮಿಸುವ ಸೂರ್ಯನನ್ನು "ತರಣಿ" ಎಂದು ಸ್ತುತಿಸಲಾಗಿದೆ. ಅಥವಾ ಉಪಾಸಕರಾದ ಭಕ್ತರನ್ನು ರೋಗಭಯಾದಿಗಳಿಂದ ದಾಟಿಸುವನಾದ್ದರಿಂದ "ತರಣಿ"ಯೆಂದೂ ಅರ್ಥಮಾಡಬಹುದು. ಇಂಥ ತರಣಿದೇವನು ಸಮಸ್ತವಿಶ್ವಕ್ಕೂ ದರ್ಶನೀಯನೆನಿಸಿರುವನು. ಸೂರ್ಯನನ್ನು ದರ್ಶನಮಾಡಿಬಿಟ್ಟರೆ ಮೈಲಿಗೆ, ನೋಡಬಾರದ್ದನ್ನು ನೋಡಿದಾಗ ಸಂಭವಿಸಿದ್ದ ದೋಷಗಳು, ಪಾಪಗಳು ಎಲ್ಲವೂ ಪರಿಹಾರವಾಗಿಬಿಡುವವು. ಕೆಲವು ಕರ್ಮಗಳನ್ನು ಮಾಡುವಾಗ ಅವುಗಳ ನಿರ್ವಹಣಾನಂತರ ಸೂರ್ಯನನ್ನು ದರ್ಶನಮಾಡಬೇಕೆಂದು ವಿಧಿಯಿದೆ. ಹೀಗೆ ಸೂರ್ಯದರ್ಶನವೂ ಕರ್ಮಾಂಗವಾಗಿ ಹೇಳಲ್ಪಟ್ಟಿದೆ. ಇಂಥ ಸೂರ್ಯದೇವನು **ಜ್ಯೋತಿಷ್ಕೃತ್** ಎಂದೂ ಹೊಗಳಲ್ಪಟ್ಟಿರುವನು. ಚಂದ್ರ, ಅಗ್ನಿ, ವಿದ್ಯುತ್ - ಮುಂತಾದ ಜ್ಯೋತಿಗಳಿಗೆಲ್ಲ ಬೆಳಕನ್ನು ನೀಡಿರುವವನು ಸೂರ್ಯನೇ ಆಗಿರುವನು.

ಮನೆಯಲ್ಲಿ ತೂಗುಹಾಕಿರುವ ಕನ್ನಡಿಯ ಮೇಲೆ ಸೂರ್ಯನ ಬಿಸಿಲು ಬಿದ್ದರೆ ಮನೆಯೆಲ್ಲ ಬೆಳಗುವದಷ್ಟೆ! ಆದರೆ ಕನ್ನಡಿಗೆ ಬೆಳಗುವ ಶಕ್ತಿಯನ್ನು ದಯಪಾಲಿಸಿದವನು ಸೂರ್ಯನಲ್ಲವೆ? ಹಾಗೆಯೇ ವಿಶ್ವವನ್ನೆಲ್ಲ ಸೂರ್ಯನೇ ಬೆಳಗುವನು ಮತ್ತು **ರೋಚನಮ್** ಎಂದರೆ ಅಂತರಿಕ್ಷವನ್ನು ಸಹ ಅವನೇ ಪ್ರಕಾಶಗೊಳಿಸುವನು. ಯಾವ ಪ್ರದೀಪದಿಂದಲೂ ಅಂತರಿಕ್ಷವನ್ನೆಲ್ಲ ಬೆಳಗುವದು ಸಾಧ್ಯವಾಗಲಾರದು. ಅದು ಬಹಳ ದೊಡ್ಡದಾಗಿ ಹರಡಿಕೊಂಡಿರುವ ಲೋಕವಾಗಿರುವದು. ಆದರೇನು ? ಸೂರ್ಯನ ಕಿರಣಗಳು ಹೊರಬೀಳಲಾರಂಭಿಸಿದವೆಂದರೆ ಇಡಿಯ ಅಂತರಿಕ್ಷವೇ ಬೆಳಕಾಗಿಬಿಡುವದು. ಆಗ ಯಾವ ದೀಪವೂ ಬೇಡವಾಗುವದು. ಇಂಥ ಸೂರ್ಯಭಗವಂತನೆ, ನಿನಗೆ ವಂದನೆಗಳು - ಎಂಬಿದು ಋಷಿಯ ಸ್ತೋತ್ರದ ಅಭಿಪ್ರಾಯವಾಗಿದೆ.

**ಪ್ರತ್ಯಙ್ ದೇವಾನಾಂ ವಿಶಃ ಪ್ರತ್ಯಙ್ಙುದೇಷಿ ಮಾನುಷಾನ್ ।**
**ಪ್ರತ್ಯಙ್ ವಿಶ್ವಂ ಸ್ವರ್ದೃಶೇ ॥ ೫ ॥**

**"ಎಲೈ ಸೂರ್ಯನೆ, ನೀನು ದೇವತೆಗಳಿಗೆ, ಮನುಷ್ಯರಿಗೆ, ಸ್ವರ್ಗಲೋಕದವರಿಗೆ ಹೀಗೆ ಎಲ್ಲರಿಗೂ ಅಭಿಮುಖನಾಗಿಯೇ ಹುಟ್ಟುತ್ತಿರುವೆ" ಎಂದು ಮಂತ್ರದ ಅರ್ಥವು.**

ದೇವತೆಗಳಲ್ಲಿ ಮರುತ್ತರೆಂಬುವರ ಗಣವೊಂದು ಇದೆ. ಅವರುಗಳನ್ನು ವೈಶ್ಯರೆಂದು ಕರೆಯುತ್ತಾರೆ. ಹಾಗೆಯೇ ಬೃಹಸ್ಪತಿಶುಕ್ರರನ್ನು ಬ್ರಾಹ್ಮಣರೆಂದೂ ಇಂದ್ರಚಂದ್ರಸೂರ್ಯರನ್ನು ಕ್ಷತ್ರಿಯರೆಂದೂ ಕರೆಯುತ್ತಾರೆ. ದೇವತೆಗಳಲ್ಲಿಯೂ ಚಾತುರ್ವರ್ಣ್ಯವ್ಯವಹಾರವಿದೆ. ಅದು ಹಾಗಿರಲಿ, ಸೂರ್ಯನನ್ನು ಇಲ್ಲಿ ಸ್ತುತಿಸುವಾಗ ಅವನು ದೇವತೆಗಳಿಗೆ ಇದಿರಾಗಿ ಹುಟ್ಟುವನು - ಎಂಬಿದು ಮುಖ್ಯವಿಷಯವಾಗಿದೆ. ಹಾಗೆಯೇ ಮನುಷ್ಯರಿಗೂ ಉಳಿದ ಎಲ್ಲಾ ಜೀವರುಗಳಿಗೂ ಅವನು ಇದಿರಾಗಿಯೇ ತೋರಿಕೊಳ್ಳುತ್ತಿರುವನು - ಎಂದು ಸ್ತುತಿಯ ಅಭಿಪ್ರಾಯ. ಸೂರ್ಯನು ಪೂರ್ವದಿಕ್ಕಿನಲ್ಲಿ ಉದಯಿಸುತ್ತಿರುವಾಗ ಅವನಿಗೆ ಎದುರಾಗಿ ಯಾರು ಯಾವ ಊರಿನಲ್ಲಿಯೇ ಆಗಲಿ ನಿಂತುಕೊಂಡಲ್ಲಿ ಸೂರ್ಯನು ಅವರ ಕಡೆಗೇ ಅಭಿಮುಖನಾಗಿರುವಂತೆ ಕಂಡುಬರುತ್ತಾನೆ. ಮತ್ತು ಎಲ್ಲಾ ಶುಭಕಾರ್ಯಗಳನ್ನೂ ಸೂರ್ಯನಿಗೆ ಎದುರಾಗಿಯೇ ಮಾಡಬೇಕೆಂದೂ ನಮಸ್ಕಾರವನ್ನು ಮಾಡುವಾಗ ಸೂರ್ಯನಕಡೆಗೆ ಕಾಲುಬರದಂತೆ ಮಾಡಬೇಕೆಂದೂ ನಿಯಮವಿದೆ. ಹಾಗೆಯೇ ಸೂರ್ಯನು ಅಯನಭೇದದಿಂದ ಎಡ ಬಲಪಕ್ಕಗಳಿಗೆ ಸರಿದಾಗಲೂ ಅವನನ್ನು ಇದಿರಾಗಿಟ್ಟುಕೊಂಡೇ ನಮ್ಮ ಕಾರ್ಯಗಳನ್ನು ನೆರವೇರಿಸಬೇಕು. ಬೇರೊಂದು

ಶ್ರುತಿಯಲ್ಲಿ ಸೂರ್ಯನೇ ಹಿಂದಕ್ಕೆ, ಮುಂದಕ್ಕೆ, ಎಡಬಲಗಳಿಗೆ, ಮೇಲೆ, ಕೆಳಗೆ - ಎಲ್ಲೆಲ್ಲಿಯೂ ಇರುವವನಾಗಿದ್ದುಕೊಂಡು ನಮ್ಮ ಅಭಿಲಾಷೆಗಳನ್ನೆಲ್ಲ ಪೂರ್ಣಗೊಳಿಸಲಿ - ಎಂದು ಪ್ರಾರ್ಥಿಸಿದೆ. ಆದ್ದರಿಂದ ಕರ್ಮಾನುಷ್ಠಾನಕಾಲಕ್ಕೆ ಸೂರ್ಯನು ಎದುರಿಗೆ ಇರುವದು ಬಹುಮುಖ್ಯ. ಇದೇ ಕಾರಣದಿಂದಲೇ ಪೂರ್ವಾಭಿಮುಖವಾಗಿಯೇ ಕುಳಿತು ಸೂರ್ಯನು ನಮ್ಮ ಬೆನ್ನು ಕಡೆಗೆ ಬರುವದರೊಳಗೇ (ಪೂರ್ವಾಹ್ಣದಲ್ಲಿಯೇ) ದೇವತಾಕಾರ್ಯಗಳನ್ನೆಲ್ಲ ಪೂರ್ಣಗೊಳಿಸಬೇಕೆಂದು ಬಲ್ಲವರು ಹೇಳುತ್ತಾರೆ. ಕೆಲವರು ಮಧ್ಯಾಹ್ನ ಎರಡು ಘಂಟೆಯ ಅನಂತರ ಬ್ರಾಹ್ಮಣರಿಗೆ ಭೋಜನಾದಿಗಳನ್ನು ಮಾಡಿಸಿದ ಮೇಲೆ ಅವರನ್ನು ನಮಸ್ಕರಿಸುವ ಸಂಭವವುಂಟಾದಾಗ ಪಶ್ಚಿಮಕ್ಕೆ ತಿರುಗಿಸಿಕೊಂಡೇ ನಮಸ್ಕರಿಸುತ್ತಾರೆ. ಸೂರ್ಯನ ಕಡೆಗೆ ಕಾಲು ಬರಬಾರದೆಂಬುದೇ ಇದರ ಉದ್ದೇಶ. ಹೀಗೆ ಸೂರ್ಯಭಗವಂತನನ್ನು ನಾವು ಪೂಜ್ಯಬುದ್ಧಿಯಿಂದ ಕಂಡು ಕೃತಾರ್ಥರಾಗಬೇಕು.

**ಯೇನಾ ಪಾವಕ ಚಕ್ಷಸಾ ಭುರಣ್ಯಂತಂ ಜನಾಗ್ಂ ಅನು ।**
**ತ್ವಂ ವರುಣ ಪಶ್ಯಸಿ ॥ ೬ ॥**

**"ಎಲೈ ಪಾವಕನೆ, ವರುಣನೆ, ನೀನು ಈ ಲೋಕದಲ್ಲಿ ಹುಟ್ಟಿರುವ ಪ್ರಾಣಿಗಳನ್ನೆಲ್ಲ ಕಾಪಾಡುತ್ತಾ ಯಾವ ತೇಜಸ್ಸಿನಿಂದ ಎಲ್ಲರನ್ನೂ ನೋಡುತ್ತಿರುವೆಯೋ ಅಂಥ ದಿವ್ಯ ತೇಜಸ್ಸನ್ನು ಸ್ತುತಿಸುವೆವು" ಎಂದು ಮಂತ್ರಾರ್ಥ.**

ಇಲ್ಲಿ ಸೂರ್ಯನನ್ನು ಪಾವಕನೆಂದೂ ವರುಣನೆಂದೂ ಸಂಬೋಧಿಸಲಾಗಿದೆ. ರೂಢ್ಯರ್ಥದಂತೆ ಅಗ್ನಿ - ವರುಣರೆಂಬ ದೇವತೆಗಳಿಗೆ ಈ ಹೆಸರುಗಳು ಅನ್ವಯಿಸುತ್ತವೆ. ಆದರೆ ವ್ಯುತ್ಪತ್ತಿಯಿಂದ ಅರ್ಥಮಾಡುವಾಗ 'ಪಾವಕ'ನೆಂದರೆ ಎಲ್ಲವನ್ನೂ ಪವಿತ್ರಗೊಳಿಸುವವನೆಂದು ಅಭಿಪ್ರಾಯವಾಗುವದು. ಸೂರ್ಯ ಕಿರಣಗಳು ಎಲ್ಲಾ ಅಪವಿತ್ರವಸ್ತುಗಳನ್ನೂ ಶುದ್ಧಗೊಳಿಸುವವು. ಆದ್ದರಿಂದ ಪಾವಕನೆಂದು ಅವನನ್ನು ಕರೆಯಲು ಅಡ್ಡಿಯಿಲ್ಲ. ಹಾಗೆಯೇ ವರುಣನೆಂದರೆ 'ಅನಿಷ್ಟನಿವಾರಕ'ನೆಂದೂ ಭಾಷ್ಯಕಾರರು ಅರ್ಥಮಾಡಿದ್ದಾರೆ. ಸೂರ್ಯನ ಬೆಳಕು ಪ್ರಸರಿಸಿತೆಂದರೆ ಎಲ್ಲಾ ರೀತಿಯ ಅನಿಷ್ಟಗಳೂ ನಿವಾರಣೆಯಾಗುವವು. ಯಜುರ್ವೇದದಲ್ಲಿ ಒಂದುಕಡೆ 'ಮಿತ್ರಶ್ಚ ವರುಣಶ್ಚ । ಧಾತಾ ಚಾರ್ಯಮಾ ಚ' ಎಂದು ವರುಣಶಬ್ದದಿಂದಲೂ ಸೂರ್ಯನನ್ನು ಸ್ತುತಿಸಲಾಗಿದೆ. ಆದ್ದರಿಂದ ಜಗತ್ಪಾವಕನೂ ಅನಿಷ್ಟನಿವಾರಕನೂ ಆದ ಸೂರ್ಯನು ಪಕ್ಷಪಾತವಿಲ್ಲದೆ ಭೇದವಿಲ್ಲದೆ ಎಲ್ಲರನ್ನೂ ನೋಡುತ್ತಿರುವನು. ಅವನ ದೃಷ್ಟಿಪಾತವು ಪ್ರಾಣಿಗಳ ಜೀವನಾಧಾರವಾಗಿರುವದು. ಸಸ್ಯಗಳೆಲ್ಲವೂ ಅವನ ಕಿರಣಗಳ ಸ್ಪರ್ಶದಿಂದಲೇ

ಬೆಳೆಯುವವು. ಪ್ರಾಣಿಗಳು, ಮನುಷ್ಯರು ಕೂಡ ಸೂರ್ಯನ ಶಾಖ, ಕಿರಣಗಳ ಸಂಪರ್ಕವಿಲ್ಲವಾದರೆ ಬೆಳೆಯಲಾರರು. ಇಂಥ ಸೂರ್ಯನ ಉಪಕಾರವು ಎಂದರೆ ಸ್ಥಾವರಜಂಗಮಾತ್ಮಕಪ್ರಪಂಚದ ಪೋಷಣೆಯು ಅಸಾಧರಣವಾದದ್ದಾಗಿರುವದು. ಆದರೆ ಸೂರ್ಯನೇ ನಮ್ಮ ಬಳಿಗೆ ಬಂದರೆ ಮಾತ್ರ ನಾವುಗಳಾರೂ ಬದುಕುವಂತಿಲ್ಲ. ಅವನ ಶಾಖಕ್ಕೆ ಸುಟ್ಟುಹೋಗಿಬಿಡುವೆವು. ಇದು ಸೂರ್ಯನಿಗೂ ಗೊತ್ತು. ಆದ್ದರಿಂದಲೇ ಆತನು ದೂರದಲ್ಲಿಯೇ ಇದ್ದುಕೊಂಡು ಕೇವಲ ತನ್ನ ಕಿರಣಗಳ ಮೂಲಕವೇ ಜಗತ್ತನ್ನು ಅನುಗ್ರಹಿಸುತ್ತಿರುವನು. ಈ ಅಭಿಪ್ರಾಯದಂತೆ ಋಷಿಯು ಈ ಮಂತ್ರದಲ್ಲಿ 'ಸೂರ್ಯನ ಕಿರಣಗಳನ್ನೇ ನಾವು ಸ್ತೋತ್ರ ಮಾಡುವೆವು' - ಎಂದು ತಿಳಿಸಿರುತ್ತಾನೆ. ಸೂರ್ಯಕಿರಣಗಳ ಪ್ರಯೋಜನವನ್ನು ಇಂತಿಷ್ಟೆಂದು ಲೆಕ್ಕ ಮಾಡಗಲಾಗುವದಿಲ್ಲ. ಇವುಗಳು ಕ್ಷಯಿಸಿಬಿಡುವ ಭಯವೂ ಇಲ್ಲ. ಈಗಂತೂ ವಿಜ್ಞಾನಿಗಳು ಇಂಧನಸಮಸ್ಯಾನಿವಾರಣೆಗಾಗಿ ಸೌರಶಕ್ತಿಯ ಬಳಕೆಗೇ ಪ್ರಯತ್ನಿಸುತ್ತಿದ್ದಾರೆ. ಹೀಗಿರುವಲ್ಲಿ ನಾವು ಸೂರ್ಯಕಿರಣಗಳನ್ನು ಸ್ಪರ್ಶಿಸಿದಾಗ ಆ ಭಗವಂತನನ್ನು ಸ್ತುತಿಸಬೇಡವೆ ?

**ವಿದ್ಯಾಮೇಷಿ ರಜಸ್ಪೃಥ್ವಹಾ ಮಿಮಾನೋ ಅಕ್ತುಭಿಃ ।**
**ಪಶ್ಯನ್ ಜನ್ಮಾನಿ ಸೂರ್ಯ ॥ ೭ ॥**

**"ಎಲೈ ಸೂರ್ಯನೆ, ನೀನು ವಿಸ್ತೀರ್ಣವಾದ ದ್ಯುಲೋಕಾದಿಗಳನ್ನೆಲ್ಲ ವಿಶೇಷವಾಗಿ ಸಂಚರಿಸುತ್ತಿರುವೆ. ಹೇಗೆಂದರೆ ಹಗಲುರಾತ್ರಿಗಳನ್ನುಂಟುಮಾಡುತ್ತಾ ಪ್ರಾಣಿಗಳ ಹುಟ್ಟನ್ನು ಕಾಣುತ್ತಾ ಚಲಿಸುತ್ತಿರುವೆ" ಎಂದು ಮಂತ್ರಾರ್ಥ.**

ಇಲ್ಲಿ ಋಷಿಯು ಸೂರ್ಯನನ್ನು ಕಾಲಾತ್ಮನೆಂದು ಹೊಗಳಿರುತ್ತಾನೆ. 'ಕಾಲವೆಂಬುದು ಜಗದ್ಭಕ್ಷಕ'ವೆಂಬ ನಾಣ್ಣುಡಿಯಿದೆ. ಏಕೆಂದರೆ ಜಗತ್ತಿನಲ್ಲಿರುವ ಪ್ರಾಣಿಗಳೆಲ್ಲ ಕಾಲಾಧೀನರಾಗಿರುತ್ತಾರೆ. ಕಾಲವೆಂಬುದು ಸೂರ್ಯನ ಸಂಚಾರದಿಂದ ಸಂಭವಿಸುವ ಅಹೋರಾತ್ರಿಗಳ ರೂಪದಿಂದಲೇ ಎಣಿಸಲ್ಪಡುತ್ತದೆ. ಕಾಲಮಾನವು ಬ್ರಹ್ಮಲೋಕದಿಂದ ಮನುಷ್ಯಲೋಕದವರೆಗೂ ಬೇರೆಬೇರೆಯಾಗಿರುವದು. ಉದಾಹರಣೆಗೆ ಮಾನವರ ಮೂವತ್ತು ಹಗಲುರಾತ್ರಿಗಳು ಪಿತೃಗಳಿಗೆ ಒಂದು ದಿನವೆನಿಸುವದು. ಹಾಗೆಯೇ ಮನುಷ್ಯರ ಮುನ್ನೂರಅರವತ್ತು ಹಗಲುರಾತ್ರಿಗಳು ದೇವತೆಗಳಿಗೆ ಒಂದುದಿನವಾಗುವದು. ದೇವತೆಗಳ ಲೆಕ್ಕದಂತೆ ವರ್ಷ - ಯುಗಗಳನ್ನು ಗುಣಿಸಿದರೆ ಲಭಿಸುವ ಸಹಸ್ರಯುಗಗಳು ಚತುರ್ಮುಖಬ್ರಹ್ಮನಿಗೆ ಕೇವಲ ಒಂದು ಹಗಲಾಗುವದು ಇತ್ಯಾದಿ. ಅಂತೂ ಮನುಷ್ಯರ ಹಗಲುರಾತ್ರಿಗಳನ್ನು ಅಳತೆಗೋಲಾಗಿಟ್ಟುಕೊಂಡು ಕಾಲವನ್ನು ಪರಿಗಣನೆಮಾಡುವದು ಅನಿವಾರ್ಯವಾಗಿದೆ.

ಇಂಥ ಹಗಲುರಾತ್ರೆಗಳ ವ್ಯವಹಾರವು ಸಂಪೂರ್ಣವಾಗಿ ಸೂರ್ಯನ ಅಧೀನವಾಗಿದೆ. ಇದೇ ಕಾಲವು, ಪಕ್ಷ, ಮಾಸ, ಋತು, ಸಂವತ್ಸರಾದಿರೂಪದಿಂದ ಚಲಿಸುತ್ತಾ ಎಲ್ಲಾ ಪ್ರಾಣಿಗಳನ್ನೂ ತನ್ನ ಗರ್ಭದಲ್ಲಿ ಜೀರ್ಣಮಾಡುತ್ತಿದೆ. ಈ ತತ್ತ್ವವನ್ನು ಮನಗಂಡರೆ ಸೂರ್ಯನು ಎಂಥ ಪ್ರಭಾವಶಾಲಿಯು ? ಎಂದರ್ಥವಾದೀತು. ಜ್ಯೋತಿಷ್ಯವೆಲ್ಲ ಸೂರ್ಯನನ್ನು ಅವಲಂಬಿಸಿರುತ್ತದೆ. ಸೂರ್ಯನ ಚಲನೆಗೆ ಅನುಗುಣವಾಗಿ ಇತರ ಗ್ರಹಗಳೂ ಚಲಿಸುತ್ತಿವೆ. ವೈಜ್ಞಾನಿಕವಾಗಿ ವಿಚಾರಮಾಡಿದರೂ ಭೂಮಿಯು ಸೂರ್ಯನ ಕಿರಣಗಳಿಂದಲೇ ಆಕರ್ಷಿಸಲ್ಪಟ್ಟು ತನ್ನ ಪಥದಲ್ಲಿ ಚಲಿಸುತ್ತಿದೆಯೆಂಬುದು ಗೊತ್ತಾಗುವದು. ಹೇಗೇ ಆಗಲಿ, ವೈದಿಕಕಲ್ಪನೆಯಂತೆ ಸೂರ್ಯನನ್ನು ಚೇತನನಾದ ಒಬ್ಬ ದೇವತೆಯಾಗಿ ಸ್ವೀಕರಿಸಿದಾಗ ಕಾಲವೆಂಬುದು ಆತನ ಮಹಿಮೆಯೆನ್ನಲಡ್ಡಿಯಿಲ್ಲ. ಇಂಥ ಕಾಲಾತ್ಮನು ಭೂಮಿಯ ದೃಷ್ಟಿಯಿಂದ ಮಾತ್ರವಲ್ಲದೆ ದ್ಯುಲೋಕ, ಬ್ರಹ್ಮಲೋಕಗಳವರೆಗಿನ ಎಲ್ಲಾ ಲೋಕಗಳ ದೃಷ್ಟಿಯಿಂದಲೂ ಆಯಾ ಸ್ಥಾನನಿವಾಸಿಗಳಿಗೆ ಕಾಲರೂಪನೇ ಆಗಿ ವಿರಾಜಿಸುತ್ತಿರುವನು. ಆದ್ದರಿಂದ ನಾವು ಹಗಲುರಾತ್ರೆಗಳನ್ನು ಸುಮ್ಮನೆ ದಾಟಿಬಿಡಬಾರದು. ಇಂಥ ಆಯುಷ್ಯವು ವ್ಯರ್ಥವೇ ಸರಿ. ಹಗಲು ಪ್ರಾರಂಭವಾಗುವಾಗಲೂ ಪೂರೈಸುವಾಗಲೂ ಕಾಲಾತ್ಮನನ್ನು ನೆನೆಯಬೇಕು. ಇದೇ **ಸಂಧ್ಯಾವಂದನೆ**ಯೆನಿಸುವದು. ಈಗಿನ ಕಾಲಕ್ಕೆ ಎಲ್ಲರ ಕೈಗಳನ್ನೂ ಗಡಿಯಾರಗಳೇನೋ ಅಲಂಕರಿಸಿವೆ. ಮನೆಯ ಗೋಡೆಗಳನ್ನೂ ವ್ಯಾಪಿಸಿವೆ. ಆದರೆ ಅಚೇತನಗಳಾದ ಗಡಿಯಾರಗಳನ್ನು ನೆನೆಯುವಷ್ಟು ಕಾಲಕೂಡ ಚೇತನಗಡಿಯಾರ ಸ್ವರೂಪನಾದ ಸೂರ್ಯನನ್ನು ನಾವು ನೆನೆಯುವದಿಲ್ಲವೆಂದರೆ ಎಂಥ ಅಪರಾಧವಾದೀತು ? ಈ ವಿಷಯದಲ್ಲಿ ಕಾಲಾತ್ಮನು ನಮ್ಮನ್ನು ಶಿಕ್ಷಿಸದೆ ಬಿಟ್ಟಾನೆ ? ಆದ್ದರಿಂದ ಯಾವ ರೀತಿಯಿಂದಲೇ ಆಗಲಿ, ಪ್ರತಿಯೊಬ್ಬ ಮಾನವನೂ ಬದುಕಿರುವವರೆಗೂ ಪ್ರತಿದಿನವೂ ಸೂರ್ಯೋದಯಾಸ್ತಕಾಲಗಳಲ್ಲಿ ಐದು ನಿಮಿಷಗಳಾದರೂ ಕಾಲಾತ್ಮನಾದ ಸೂರ್ಯಭಗವಂತನನ್ನು ನೆನೆದು ಸ್ತುತಿಸಬೇಕು. ಆಗ ಆ ಭಗವಂತನು ನಮ್ಮ ಆಯುಷ್ಯವನ್ನು ಸಾರ್ಥಕಗೊಳಿಸಿ ಬದುಕಿರುವಷ್ಟು ಕಾಲವೂ ಆರೋಗ್ಯ, ಬುದ್ಧಿ, ಪ್ರಜ್ಞಾದಿಗಳನ್ನು ನೀಡಿ ಕಾಪಾಡುವನು. ವಾಚಕರೆ, ಸಂಧ್ಯಾವಂದನೆಯನ್ನೇಕೆ ಮಾಡಬೇಕೆಂಬುದು ಈಗಲಾದರೂ ನಿಮಗೆ ಮನವರಿಕೆಯಾಯಿತೆ ? ಇದನ್ನು ಮಾಡದೆ ನೀವು ಯಾವ ಸತ್ಕರ್ಮವನ್ನು ಮಾಡಿದರೂ ವ್ಯರ್ಥವೇ - ಎಂದು ತಿಳಿಯಿರಿ.

**ಸಪ್ತ ತ್ವಾ ಹರಿತೋ ರಥೇ ವಹಂತಿ ದೇವ ಸೂರ್ಯ ।**
**ಶೋಚಿಷ್ಕೇಶಂ ವಿಚಕ್ಷಣ ॥ ೮ ॥**

**'ಎಲೈ ದೇವನಾದ ಸೂರ್ಯನೆ, (ರಥದಲ್ಲಿರುವ) ನಿನ್ನನ್ನು ಏಳು ಹಸಿರುಕುದುರೆ (ಗಳಂತಿರುವ ಕಿರಣಗಳು) ಹೊತ್ತು ಚಲಿಸುತ್ತಿರುವವು. ಎಲೈ ವಿಚಕ್ಷಣನೆ, ಅವು ತೇಜಸ್ಸುಗಳನ್ನೇ ಕೇಶವಾಗಿ ಹೊಂದಿರುವವು' ಎಂದು ಮಂತ್ರಾರ್ಥ.**

ಈಗ ಋಷಿಯು ತೇಜೋಮಯಸೂರ್ಯದೇವತೆಗೆ ಒಂದು ಆಕಾರವನ್ನು ನಿರ್ದೇಶಿಸಿ ಸ್ತೋತ್ರಮಾಡಲು ಉಪಕ್ರಮಿಸಿರುತ್ತಾನೆ. ಈ ಆಕಾರಾದಿಗಳ ಕಲ್ಪನೆಯು ಅವನವನ ಇಷ್ಟಕ್ಕೇ ಒಳಪಟ್ಟದ್ದೆಂಬುದು ನಿಜ. ಆದರೆ ಋಷಿಗಳಲ್ಲದವರಿಗೆ ಹೀಗೆ ಕಲ್ಪಿಸುವದಕ್ಕೂ ಬರಲಾರದು. ಆದ್ದರಿಂದ ನಾವುಗಳು ಸೂರ್ಯನನ್ನು ಭಜಿಸಿ ಕೃತಕೃತ್ಯರಾಗಬೇಕಾದರೆ ಬಲ್ಲವರು ಅನುಸರಿಸಿರುವ ಹಾದಿಯನ್ನೇ ಹಿಡಿಯಬೇಕು. ಇರಲಿ. ಈಗ ಸೂರ್ಯನ ಬೆಳಕಿನಲ್ಲಿ ಕಂಡುಬರುವ ಏಳು ಬಣ್ಣಗಳನ್ನು (VIBGYOR) ಏಳು ಕುದುರೆಗಳೆಂದು ಭಾವಿಸಲಾಗಿದೆ. ಆದ್ದರಿಂದ ಆ ಕುದುರೆಗಳ ಶರೀರವೆಲ್ಲ ಕೂದಲು ಮುಂತಾಗಿ ಎಲ್ಲಾ ಭಾಗಗಳ ಸಮೇತ ಜ್ಯೋತಿಯೇ ಆಗಿರುವದು. ಇಂಥ ಕುದುರೆಗಳನ್ನು ವೇದದಲ್ಲಿ 'ಹರಿತಃ' ಎಂಬ ಹೆಸರಿನಿಂದ ಕರೆದಿದೆ. ಈ ಕುದುರೆಗಳೇ ಸೂರ್ಯನ ರಥವನ್ನು ಎಳೆಯುತ್ತಿರುವವು. ಈ ಭಗವಂತನಾದರೋ, ರಥದಲ್ಲಿ ಕುಳಿತು ಸಾಗುತ್ತಿರುವನು. ರಥವೆಂದರೆ ಅಧ್ಯಾತ್ಮವಾಗಿ ಶರೀರವೆಂದರ್ಥ. ಹೇಗೆ ಒಬ್ಬ ಮನುಷ್ಯನನ್ನು ರಥಿಕನನ್ನಾಗಿ ಭಾವಿಸಿ ಶರೀರವನ್ನೇ ರಥವೆಂದೂ ಬುದ್ಧಿಯನ್ನು ಸಾರಥಿಯೆಂದೂ ಮನಸ್ಸನ್ನು ಲಗಾಮೆಂದೂ ಇಂದ್ರಿಯಗಳನ್ನು ಕುದುರೆಗಳೆಂದೂ ವಿಷಯಗಳನ್ನು ಹಾದಿಯೆಂದೂ ಕಠೋಪನಿಷತ್ತಿನಲ್ಲಿ ಕಲ್ಪಿಸಿದೆಯೋ ಹಾಗೆಯೇ ಋಷಿಯು ಸೂರ್ಯನಿಗೂ ಕಲ್ಪಿಸಿರುತ್ತಾನೆ. ಹೀಗೆ ಕಲ್ಪಿಸುವದರಿಂದ ಸ್ತೋತ್ರಮಾಡಲು ಅವಕಾಶವು ದೊರಕಿದಂತಾಗುವದು. ಇಲ್ಲವಾದರೆ ಬರಿಯ ತೇಜಸ್ಸನ್ನು ಏನೆಂದು, ಎಷ್ಟೆಂದು ವರ್ಣಿಸಲಾದೀತು ? ಮತ್ತು ಜನಸಾಮಾನ್ಯರಿಗಂತೂ ಕಲ್ಪಿತರೂಪಗಳೇ ಬೇಗನೆ ಮನಸ್ಸಿಗೆ ಹಿಡಿಸುತ್ತವೆ. ಇದರಿಂದ ಚಿತ್ತವನ್ನು ನೆಲೆಗೊಳಿಸುವದಕ್ಕೂ ಧ್ಯಾನ ಮಾಡುವದಕ್ಕೂ ಸಹಾಯವಾಗುತ್ತದೆ. ಈ ಕಾರಣದಿಂದಲೇ ಉಪನಿಷತ್ತುಗಳಲ್ಲಿ ಕೂಡ ಅರೂಪವಾದ ಬ್ರಹ್ಮಕ್ಕೆ ರೂಪಕಲ್ಪನೆಯನ್ನು ಬಳಸಿ ತತ್ತ್ವಬೋಧೆಯನ್ನು ಮಾಡಲಾಗಿದೆ. ಹೀಗೆ ರಥಾರೂಢನಾದ ಸೂರ್ಯನು ಏಳುಕುದುರೆಗಳನ್ನೂ ನಿಯಂತ್ರಿಸುತ್ತಾ ಕರಾರುವಾಕ್ಕಾಗಿ ಸಂಚರಿಸಿ ಜಗದ್ರಕ್ಷಣೆ, ವ್ಯಾಪಾರಗಳನ್ನು ನಿರ್ವಹಿಸುತ್ತಾನೆ. ಅಂಥ ದೇವನಿಗೆ ವಂದನೆಗಳು- ಎಂದಭಿಪ್ರಾಯ.

**ಆಯುಕ್ತ ಸಪ್ತ ಶಂಧ್ಯುವಃ ಸೂರೋ ರಥಸ್ಯ ನಪ್ತ್ಯಃ ।**
**ತಾಭಿರ್ಯಾತಿ ಸ್ವಯುಕ್ತಿಭಿಃ ॥೯॥**

**"ಸೂರ್ಯನು ಶುದ್ಧರಾದ ಏಳು ಸ್ತ್ರೀಅಶ್ವಗಳನ್ನು ರಥದಲ್ಲಿ ನಿಯೋಜಿಸಿರುವನು. ಅವು ರಥವನ್ನು ಬೀಳಿಸದೆ ಇರುವವು. ಅಂಥ ಅಶ್ವರಥದಿಂದ ತನ್ನ ಯೋಜನೆ (ಏರ್ಪಾಡು)ಯಂತೆ ಯಜ್ಞಶಾಲೆಯನ್ನು ಪ್ರವೇಶಿಸುತ್ತಿರುವನು. ಅವನಿಗೆ ಹವಿಸ್ಸನ್ನು ಕೊಡಬೇಕು" - ಎಂದು ಅರ್ಥ.**

ಇಲ್ಲಿ ಕುದುರೆಗಳು ಹೆಣ್ಣುಜಾತಿಯವೆಂದು ಭಾಷ್ಯಕಾರರು ನಿರ್ದೇಶಿಸಿದ್ದಾರೆ. ಕುದುರೆಗಳಿಗೆ ವೇಗ, ಹಾಗೂ ಹಾದಿಯನ್ನು ನಡೆಯುವದೇ ಒಂದು ಮೋಜಾಗಿರುತ್ತದೆ. ಸೂರ್ಯನ ಕುದುರೆಗಳಿಂದ ನಾವು ಕಲಿಯಬೇಕಾದ ಪಾಠವೆಂದರೆ ಯಾವ ಕೆಲಸಕ್ಕೂ ತೀರ ಮುಂಚೆ ಹೋಗಬಾರದು. ತೀರ ತಡವಾಗಿಯೂ ಹೋಗಬಾರದು. ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಬೇಕು. ಈ ಅಶ್ವಗಳು ಅಂಥವಾಗಿವೆ. ಆದ್ದರಿಂದಲೇ ಸೂರ್ಯನ ಚಲನೆಯು ಉಳಿದ ಎಲ್ಲಾ ಗತಿಗಳಿಗೂ ಆಧಾರವಾಗಿದೆ. ಹೀಗೆ ಬಹಳ ಬುದ್ಧಿಶಾಲಿಯಾದ ಸೂರ್ಯನು ಯಜ್ಞಶಾಲೆಗೆ ಹೋಗುತ್ತಿರುವನು ; ಎಂದರೆ ವೈದಿಕರು ನಡೆಯಿಸುವ ಯಜ್ಞಗಳಲ್ಲೆಲ್ಲ ಆಹೂತನಾಗಿ ಹಾಜರಾಗುವನು - ಎಂದರ್ಥ. ದೇವತೆಗಳಿಗೆ ಇಚ್ಛಾರೂಪಗಳನ್ನು ಧರಿಸುವ ಸಾಮರ್ಥ್ಯವಿರುವದರಿಂದ ಸೂರ್ಯನು ತನ್ನ ನಿತ್ಯಯಾತ್ರೆಯ ಕಾರ್ಯಕ್ಕೆ ಮುಕ್ಕಾಗದಂತೆ ಯಜ್ಞಗಳಲ್ಲಿಯೂ ರೂಪಾಂತರದಿಂದ ಭಾಗವಹಿಸಲು ಸಾಧ್ಯವಿದೆ. ಇಂಥ ಸೂರ್ಯನಿಗೆ ಈಗ ಹವಿಸ್ಸನ್ನು ನೀಡೋಣ - ಎಂದು ಋಷಿಯು ಸ್ತುತಿಸಿರುತ್ತಾನೆ.

**ಉದ್ವಯಂ ತಮಸಸ್ಪರಿ ಜ್ಯೋತಿಷ್ಪಶ್ಯಂತ ಉತ್ತರಮ್ ।**
**ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಮ್ ॥೧೦॥**

**"ನಾವು ಕತ್ತಲೆಯ ಆಚೆಗಿರುವ ಉತ್ತಮವಾದ ತೇಜಸ್ಸನ್ನು ಕಂಡವರಾಗಿ ದೇವತೆಗಳ ನಡುವೆ ಉತ್ತಮ ಜ್ಯೋತಿಯೆನಿಸಿರುವ ಸೂರ್ಯದೇವನನ್ನು (ಉಪಾಸನೆಯಿಂದ) ಪಡೆಯಲಿರುವೆವು" ಎಂದು ಮಂತ್ರದ ಸರಳಾರ್ಥವು.**

ದೇವತೆಗಳೆಂದರೆ ಸ್ವಯಂಪ್ರಕಾಶರು - ಎಂದರ್ಥ. ಯಾವ ದೇವತೆಯೇ ಆಗಲಿ, ನಮ್ಮೆದುರಿಗೆ ಬಂದು ನಿಂತರೆ ಆತನ ತೇಜಸ್ಸು ನಮ್ಮ ಸುತ್ತುವಳಯವನ್ನೆಲ್ಲ ವ್ಯಾಪಿಸಿಬಿಡುವದು. ಕತ್ತಲೆಯಿದ್ದರೆ ಮಾಯವಾಗಿಬಿಡುವದು. ಆ ದೇವತೆಯ ಪ್ರಭೆಯು ಎಲ್ಲೆಲ್ಲಿಯೂ ಹರಡಿಬಿಡುವದು. ಈಗಲೂ ವಿಗ್ರಹಗಳಲ್ಲಿ ನಾವು ದೇವತೆಯನ್ನು ಭಾವಿಸಿ ಪೂಜಿಸುವಾಗ ಸ್ವಯಂಪ್ರಕಾಶಗುಣವನ್ನು ನೆನಪುಮಾಡಲು

ಆಯಾ ದೇವತೆಗೆ ''ಪ್ರಭಾವಳಿ''ಯನ್ನು ಜೋಡಿಸುವೆವು. ದೇವಾಲಯಗಳಲ್ಲಿ ಪ್ರಭಾವಳಿಯನ್ನು ಎಲ್ಲರೂ ನೋಡಿರುತ್ತಾರೆ. ಹೀಗಿರುವಲ್ಲಿ ಪ್ರಕಾಶವಸ್ತುಗಳಲ್ಲೆಲ್ಲ ಹೆಚ್ಚಿನ ಪ್ರಕಾಶವಂತನಾದ ಸೂರ್ಯನು ಸಂಪೂರ್ಣಪ್ರಭಾಮಯನೇ ಆಗಿರುವನು. ಉತ್ತಮರಲ್ಲಿ ಉತ್ತಮನಾಗಿರುವನು. ಒಬ್ಬ ಋಷಿಯು ಹೀಗೆ ಸೂರ್ಯಭಗವಂತನ ತತ್ತ್ವವನ್ನು ಕಂಡುಕೊಂಡವನಾಗಿ, ''ನಾವು ಇಂಥ ಜ್ಯೋತಿಯನ್ನು ಕಾಣುತ್ತಿರುವೆವು. ಅದನ್ನು ಬಳಿಸಾರುತ್ತಿರುವೆವು'' ಎಂದು ಹಾಡಿರುತ್ತಾನೆ. ದೇವತೆಗಳ ನಡುವೆ ಸೂರ್ಯನು ಹೆಚ್ಚಿನ ಜ್ಯೋತಿರ್ಮಯನೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಮತ್ತು ಸೂರ್ಯನಷ್ಟು ಪರಿಚಿತನಾಗಿ ಪ್ರತ್ಯಕ್ಷನಾಗಿ ಸರ್ವೋತ್ಕೃಷ್ಟನಾಗಿ ಸಕಲ ವಿಧವಾದ ಪಾಪಗಳಿಂದಲೂ ಮೇಲೆದ್ದವನಾಗಿ ಮಾನವನಿಗೆ ''ಮಿತ್ರ''ನಾಗಿರುವ ದೇವತೆಯೂ ಮತ್ತೊಬ್ಬನಿಲ್ಲ. ಉಳಿದ ದೇವತೆಗಳನ್ನೆಲ್ಲ ನಾವು ಉಪಾಸನೆಮಾಡಿ ಕಂಡುಕೊಳ್ಳಬೇಕು. ಬಹಳ ಕಷ್ಟಪಟ್ಟು ಒಲಿಸಿಕೊಂಡಮೇಲೂ ಆ ದೇವತೆಗಳೆಲ್ಲ ಸ್ವಲ್ಪಕಾಲ ಮಾತ್ರ ತೋರಿ ಮರೆಯಾಗಿಬಿಡುವರು. ಸೂರ್ಯನಾದರೋ, ಹಾಗಲ್ಲ. ಪ್ರತಿದಿನವೂ ಅವನು ನಮಗೆ ಘಂಟೆಗಟ್ಟಲೆಯ ಕಾಲವೂ ಕಾಣಿಸಿಕೊಳ್ಳುವನು. ಅವನನ್ನು ನೋಡಲು ನೂಕುನುಗ್ಗಲುಗಳಿಲ್ಲ. ಕಾಣದೇ ಹೋದಾನೆಂಬ ಆತಂಕವಿಲ್ಲ. ನೋಡಲು ಟಿಕೇಟಾಗಲಿ, ಹಣವಾಗಲಿ ಬೇಕಿಲ್ಲ. ಇಂಥ ದೇವದೇವನು ಬೇರೊಬ್ಬನು ನಮಗೆಲ್ಲಿ ದೊರಕಿಯಾನು ? ಮಾನವರೆ, ಈ ದೇವನನ್ನು ಕಂಡು ಕೃತಾರ್ಥರಾಗಿರಿ - ಎಂದು ಮಂತ್ರದ ಅಭಿಪ್ರಾಯವು.

**ಉದ್ಯನ್ನದ್ಯ ಮಿತ್ರಮಹ ಆರೋಹನ್ನುತ್ತರಾಂ ದಿವಮ್ ।**
**ಹೃದ್ರೋಗಂ ಮಮ ಸೂರ್ಯ ಹರಿಮಾಣಂ ಚ ನಾಶಯ ॥೧೧॥**

**''ಎಲೈ ಸೂರ್ಯನೆ, ನೀನು ಎಲ್ಲರಿಗೂ ಅನುಕೂಲಕರವಾದ ದೀಪ್ತಿಯಿಂದ ಉತ್ಕೃಷ್ಟವಾದ ದ್ಯುಲೋಕವನ್ನು ಏರುವವನಾಗಿ ನನ್ನ ಹೃದಯಗತವಾದ ಹಾಗೂ ಶರೀರಗತವಾದ ರೋಗವನ್ನು ನಾಶಗೊಳಿಸುವವನಾಗು'' ಎಂದು ಅರ್ಥ.**

ಇಲ್ಲಿಂದ ಮೂರು ಮಂತ್ರಗಳನ್ನು ''ತೃಚ''ಗಳೆಂದು ಕರೆಯುತ್ತಾರೆ. ಮೂರು ಋಕ್ಕುಗಳ ಗುಂಪಿಗೆ 'ತೃಚ'ವೆಂದು ಹೆಸರು. ಈ ಮಂತ್ರಗಳು ರೋಗ ಪರಿಹಾರಕಗಳೆಂದು ಪ್ರಸಿದ್ಧವಾಗಿವೆ. 'ರೋಗಘ್ನ ಉಪನಿಷತ್' ಎಂದೂ ವೈದಿಕರು ಈ ಮಂತ್ರಭಾಗವನ್ನು ಗೌರವಿಸುತ್ತಾರೆ. ಪ್ರಸ್ಕಣ್ವಋಷಿಯು ಈ ತೃಚಗಳಿಂದ ಸೂರ್ಯನನ್ನು ಸ್ತುತಿಸಿ ರೋಗಗಳನ್ನು ಪರಿಹರಿಸಿಕೊಂಡನು. ಸೂರ್ಯಭಗವಂತನು ಸಂತುಷ್ಟನಾಗಿ ಆತನಿಗೆ ಆರೋಗ್ಯಭಾಗ್ಯವನ್ನನುಗ್ರಹಿಸಿದನು. ಆದ್ದರಿಂದ ಈಗಲೂ ರೋಗಶಾಂತಿಗಾಗಿ ಈ ಮಂತ್ರಗಳಿಂದ ಸೂರ್ಯನನ್ನು ಉಪಾಸನೆಮಾಡಬೇಕೆಂದು ಶೌನಕರು ತಿಳಿಸುತ್ತಾರೆ. ಅವರ ವಾಕ್ಯವನ್ನು ಕೇಳಿರಿ :

**ಉದ್ಯನ್ನದ್ಯೇತಿ ಮಂತ್ರೋಽಯಂ ಸೌರಃ ಪಾಪಪ್ರಣಾಶನಃ ।**
**ರೋಗಘ್ನಶ್ಚ ವಿಷಘ್ನಶ್ಚ ಭುಕ್ತಿಮುಕ್ತಿಫಲಪ್ರದಃ ॥**

**"ಉದ್ಯನ್ನದ್ಯ...." ಎಂಬೀ ಮಂತ್ರವು ಸೂರ್ಯದೇವತಾಮಂತ್ರವಾಗಿದ್ದು ಸಕಲಪಾಪಗಳನ್ನು ಪರಿಹರಿಸುವದಾಗಿದೆ ಮತ್ತು ರೋಗಗಳನ್ನೆಲ್ಲ ಗುಣಪಡಿಸುತ್ತದೆ. ವಿಷಚೂರ್ಣಪ್ರಯೋಗಾದಿದೋಷಗಳನ್ನೆಲ್ಲ ಪರಿಹರಿಸುತ್ತದೆ. ಭುಕ್ತಿಮುಕ್ತಿಗಳೆಂಬ ಐಹಿಕಾಮುಷ್ಮಿಕಫಲಗಳನ್ನೂ ಉಂಟುಮಾಡುತ್ತದೆ" ಎಂದು ಮೇಲಿನ ಶ್ಲೋಕದ ಅರ್ಥ.**

ಆದ್ದರಿಂದ ರೋಗಿಗಳಿಗೆಲ್ಲ ಇದೊಂದು ವರಪ್ರದಾನವಾಗಿರುತ್ತದೆ. ಯಾವ ರೋಗಿಯೇ ಆಗಿರಲಿ, ಸೂರ್ಯನನ್ನು ಧ್ಯಾನಿಸುವದನ್ನು ಮರೆಯಬಾರದು. ಆರೋಗ್ಯವು ಸೂರ್ಯನಿಂದಲೇ ದೊರಕಬೇಕಾಗಿದೆಯೇ ಹೊರತು ಡಾಕ್ಟರುಗಳಿಂದಾಗಲಿ, ಔಷಧಿ, ಮಾತ್ರೆ, ಸೂಜೀಪ್ರಯೋಗದಿಂದಾಗಲಿ ಖಂಡಿತ ಅಲ್ಲ. ಲೌಕಿಕವಾಗಿ ಅವುಗಳನ್ನು ರೋಗಶಾಂತಿಗಾಗಿ ಮಾಡುವದು ತಪ್ಪಲ್ಲ. ಆದರೆ ಅಷ್ಟರಿಂದಲೇ ರೋಗಗಳು ಹರಿಯುವದಿಲ್ಲ. "ತಚ್ಛಾಂತಿರೋಷಧೈರ್ದಾನೈಃ ಜಪಹೋಮಸುರಾರ್ಚನೈಃ" (ಆ ರೋಗಶಾಂತಿಯಾದರೂ - ಔಷಧಿಗಳು, ದಾನ, ಜಪ, ಹೋಮ, ದೇವತೆಗಳ ಅರ್ಚನೆ - ಗಳಿಂದಲೇ ಆಗುವದು.) ಎಂದು ಅಭಿಯುಕ್ತರ ವಚನವೂ ಇದೆ. ಹಿಂದಿನ ಕಾಲದಲ್ಲಿ ರೋಗಗಳು ಸಂಭವಿಸಿದರೆ ಔಷಧಿಯ ಜೊತೆಗೆ ಸೂರ್ಯನಮಸ್ಕಾರ, ನವಗ್ರಹಜಪ, ರುದ್ರಾಭಿಷೇಕ, ಇಂದ್ರಾಕ್ಷೀ ಶಿವಕವಚ ಪಾರಾಯಣಾದಿಗಳು - ಮುಂತಾಗಿ ಅನುಷ್ಠಾನಗಳನ್ನು ನಡೆಯಿಸುತ್ತಿದ್ದರು. ಈಗಲೂ ಈ ಪದ್ಧತಿಯು ಜಾರಿಯಲ್ಲಿದೆಯಾದರೂ "ಸೂರ್ಯನಮಸ್ಕಾರ" ಅನುಷ್ಠಾನವು ಕಣ್ಮರೆಯಾಗುತ್ತಿದೆ. ಹಾಗಾಗಬಾರದು. ಸೂರ್ಯನ ಆರಾಧನೆಯೇ ರೋಗಪರಿಹಾರಕ್ಕೆ ಬಹುಮುಖ್ಯವಾದ ಸಾಧನವು. ಅದನ್ನೇ ಇಲ್ಲಿ ಪ್ರಸ್ತಾಪಿಸಿ ಹೇಳಲಾಗಿದೆ.

ಈ ತೃಚಮಂತ್ರಗಳನ್ನೇ ಉಪಯೋಗಿಸಿಕೊಂಡು ಸೂರ್ಯನಮಸ್ಕಾರವೆಂಬ ಅನುಷ್ಠಾನವನ್ನು ನಡೆಯಿಸುವ ಕ್ರಮಕ್ಕೆ "ತೃಚಕಲ್ಪವಿಧಿ" ಎಂದು ಹೆಸರಿದೆ. ಸೂರ್ಯನ ಸುಪ್ರಸಿದ್ಧವಾದ ಮಿತ್ರ, ರವಿ, ಸೂರ್ಯ, ಭಾನು, ಖಗ, ಪೂಷ, ಹಿರಣ್ಯಗರ್ಭ, ಮರೀಚಿ, ಆದಿತ್ಯ, ಸವಿತೃ, ಅರ್ಕ, ಭಾಸ್ಕರ - ಎಂಬ ದ್ವಾದಶನಾಮಗಳನ್ನೂ ಹ್ರಾಂ, ಹ್ರೀಂ, ಹ್ರೂಂ, ಹ್ರೈಂ, ಹ್ರೌಂ, ಹ್ರಃ - ಎಂಬ ಬೀಜಾಕ್ಷರಗಳನ್ನೂ ಈ ಮಂತ್ರಗಳ ಜೊತೆಗೆ ಜೋಡಿಸಿಕೊಂಡು ನಮಸ್ಕಾರಗಳನ್ನು ಮಾಡುವ ಪದ್ಧತಿಯಿದೆ. ಸೂರ್ಯನು **ನಮಸ್ಕಾರಪ್ರಿಯನೆಂದು** ಪುರಾಣವಚನವೂ

ಇದೆ. ಆದ್ದರಿಂದ ತೃಚಕಲ್ಪವಿಧಾನದಿಂದ ಪೂಜಾರಾಧನೆ, ನಮಸ್ಕಾರಗಳನ್ನು ಮಾಡಿದರೆ ಸೂರ್ಯಭಗವಂತನು ಸಂತುಷ್ಟನಾಗಿ ಆರೋಗ್ಯಾದಿಗಳನ್ನು ದಯಪಾಲಿಸುವನು. ಇಂಥ ತೃಚಮಂತ್ರಗಳಲ್ಲಿ ಮೊದಲನೆಯದಾದ 'ಉದ್ಯನ್' ಎಂಬ ಮಂತ್ರಾರ್ಥವನ್ನು ಈಗ ವಿಚಾರ ಮಾಡೋಣ.

ಇಲ್ಲಿ ಋಷಿಯು ದ್ಯುಲೋಕವನ್ನೇರಲಿರುವ ಸೂರ್ಯನನ್ನು ಸ್ತುತಿಸುತ್ತಿರುವದರಿಂದ ಉದಯಕಾಲದ ಸೂರ್ಯನನ್ನೇ ಆರಾಧಿಸಬೇಕೆಂದು ಕಂಡುಬರುತ್ತದೆ. ಸೂರ್ಯನಮಸ್ಕಾರಾದಿಗಳು ಬೆಳಗಿನ ವೇಳೆಯಲ್ಲಿ ಸೂರ್ಯೋದಯಕಾಲಕ್ಕೆ ನಡೆಯಬೇಕೆಂದು ಇದರಿಂದ ಸಿದ್ಧವಾಗುತ್ತದೆ. ಆದರೆ ಎಷ್ಟೋ ಜನರು ಸೂರ್ಯೋದಯಕಾಲಕ್ಕೆ ಹಾಸಿಗೆಯಿಂದ ಎದ್ದೇ ಇರುವದಿಲ್ಲ. ಇದೊಂದು ದುರಭ್ಯಾಸವೆಂದು ಹೇಳದೆ ವಿಧಿಯಿಲ್ಲ. ಏಳುವಾಗಲೇ ದುರಭ್ಯಾಸದಿಂದ ಜೀವನವು ಪ್ರಾರಂಭವಾಗಿಬಿಟ್ಟರೆ ಅಂಥ ಮನುಷ್ಯನು ಉಳಿದ ದುರಭ್ಯಾಸಗಳನ್ನು ಹೇಗೆ ತಾನೆ ಬಿಟ್ಟಾನು? ಆದ್ದರಿಂದ ಸೂರ್ಯಭಗವಂತನ ಉದಯಕಾಲಕ್ಕೆ ಮಲಗಿರಬಾರದು. ಇರಲಿ; ಸೂರ್ಯನನ್ನು ಕುರಿತು ಇಲ್ಲಿ ಹೃದ್ರೋಗವನ್ನು ಪರಿಹರಿಸಬೇಕೆಂದು ಕೇಳಿಕೊಂಡಿದೆ. ಹೃದಯಾಶ್ರಿತವಾದ ಪ್ರಧಾನರೋಗವೆಂದರೆ ಕಾಮವು. ಉಪನಿಷತ್ತಿನಲ್ಲಿ 'ಕಾಮಾ ಯೇಽಸ್ಯ ಹೃದಿ ಶ್ರಿತಾಃ' ಎಂಬ ವಚನವಿದೆ. ಗೀತೆಯಲ್ಲಿ ಭಗವಂತನೂ ಕಾಮವು ಹೃದಯ (ಬುದ್ಧಿ)ವನ್ನಾಶ್ರಯಿಸಿದೆಯೆಂದೇ ಹೇಳಿದ್ದಾನೆ. ಆದ್ದರಿಂದ ಮಾನವನು ಅಮೃತನಾಗಬೇಕಾದರೆ ಆಧ್ಯಾತ್ಮಿಕ ದೃಷ್ಟಿಯಿಂದ ಹೃದ್ರೋಗವು ಹರಿಯಬೇಕು. ಐಹಿಕದೃಷ್ಟಿಯಿಂದ 'ಹರಿಮಾಣಂ ಚ ನಾಶಯ' ಎಂದೂ ಪ್ರಾರ್ಥಿಸಲಾಗಿದೆ. ಹರಿಮಾಣಂ ಎಂದರೆ - ಹಸಿರಾಗುವಿಕೆ - ಎಂದರ್ಥ. ಶರೀರವು ಯಾವಾಗಲೂ ಕೆಂಪಾಗಿರಬೇಕು. ಅದು ಆರೋಗ್ಯದ ಗುರುತಾಗಿರುತ್ತದೆ. ಹಸಿರುಗಟ್ಟಿದರೆ ಅಥವಾ ಬಿಳುಪಾದರೆ ರೋಗಗಳು ಶರೀರವನ್ನಾಶ್ರಯಿಸಿವೆ ಎಂದರ್ಥ. ಆದ್ದರಿಂದ ಶಾರೀರಕವಾದ ರೋಗಗಳನ್ನು ನಾಶಗೊಳಿಸು - ಎಂದೂ ಪ್ರಾರ್ಥಿಸಲಾಗಿದೆ. ಸೂರ್ಯನ ಅನುಗ್ರಹವು ಇದ್ದುದೇ ಆದರೆ ರೋಗಗಳು ನಮ್ಮನ್ನು ಕಾಡಿಸಲಾರವು ಎಂದು ತಿಳಿಯಬೇಕು.

**ಶುಕೇಷು ಮೇ ಹರಿಮಾಣಂ ರೋಪಣಾಕಾಸು ದಧ್ಮಸಿ ।**
**ಅಥೋ ಹಾರಿದ್ರವೇಷು ಮೇ ಹರಿಮಾಣಂ ನಿದಧ್ಮಸಿ ॥ ೧೨ ॥**

**"ಗಿಳಿಗಳಲ್ಲಿಯೂ ಶಾರಿಕೆಗಳೆಂಬ ಪಕ್ಷಿಗಳಲ್ಲಿಯೂ ನಾವು ಹಸಿರನ್ನಿಡೋಣ. ಹಾಗೂ ಹರಿತಾಳವೆಂಬ ವೃಕ್ಷದಲ್ಲಿಯೂ ಈ ಹರಿಮಾಣವನ್ನಿಡೋಣ" ಎಂದು ಸರಳವಾದ ಅರ್ಥ.**

ಇಲ್ಲಿ ಭಾಷ್ಯಕಾರರು "ನಿದಧ್ಮಸಿ" ಎಂಬ ಕ್ರಿಯಾಪದಕ್ಕೆ "ನಿಧೀಮಹಿ" ಎಂದು ಉತ್ತಮಪುರುಷವನ್ನು ವಿವಕ್ಷೆಮಾಡಿ ಅರ್ಥಮಾಡಿರುತ್ತಾರೆ. ಹಸಿರು ಬಣ್ಣವು ಸರ್ವಥಾ ತ್ಯಾಜ್ಯವಲ್ಲ. ಅದು ಎಲ್ಲಿರಬೇಕೋ ಅಲ್ಲಿ ಮಾತ್ರವೇ ಇರುವದು ನ್ಯಾಯ. ಒಂದು ನಾಟಕದಲ್ಲಿ ಒಬ್ಬ ಪತಿವ್ರತೆಯು ಅಗ್ನಿಪ್ರವೇಶಮಾಡಿದಂತೆ ದೃಶ್ಯವನ್ನು ಅಭಿನಯಿಸಬೇಕಾದರೆ ಹಸಿರು ಸೀನರಿ - ಪರದೆಗಳನ್ನು ಹಾಕಿದರೆ ಹೊಂದೀತೆ ? ಹಾಗೆಯೇ ಇಲ್ಲಿಯೂ ತಿಳಿಯಬೇಕು. ಹಸಿರೆಂಬುದು ಗಿಳಿಗಳಂಥ ಪಕ್ಷಿಗಳಿಗೆ ಇಷ್ಟವಾದ ಬಣ್ಣವಾಗಿದೆ. ಹಾಗೆಯೇ ಹರಿತಾಳವೆಂಬ ಮರಗಳಲ್ಲಿಯೂ ಉಳಿದ ಸಸ್ಯಜಾತಿಯಲ್ಲಿಯೂ ಹಸಿರು ಸ್ವಭಾವದಿಂದಲೇ ಇದ್ದುಕೊಂಡಿರುವದು. ಆದ್ದರಿಂದ ಋಷಿಯು ಇಲ್ಲಿ ಸ್ತುತಿಸುವಾಗ 'ಎಲೈ ಸೂರ್ಯನೆ, ನಿನ್ನ ತೇಜಸ್ಸಿನಲ್ಲಿ ಹಸಿರುಬಣ್ಣವೂ ಸೇರಿದೆ; ಆದರೂ ಅದು ನನ್ನ ದೇಹದಲ್ಲಿ ಬೇಡ. ಅದನ್ನು ಗಿಳಿಗಳಲ್ಲಿಯೂ ಶಾರಿಕೆಗಳೆಂಬ ಹಕ್ಕಿಗಳಲ್ಲಿಯೂ ಹರಿತಾಳಾದಿಮರಗಳಲ್ಲಿಯೂ ಇಟ್ಟುಬಿಡುವೆವು. ಅದು ಅಲ್ಲಿಯೇ ಸುಖವಾಗಿರಲಿ; ಅದು ನಮ್ಮನ್ನು ಬಾಧಿಸುವದು ಬೇಡ' ಎಂದು ಹಾಡಿರುತ್ತಾನೆ. ಇದರಿಂದ ತಿಳಿದುಬರುವದೇನೆಂದರೆ: ನಮ್ಮ ರೂಪ, ಕಾಂತಿ, ಮೈಬಣ್ಣ - ಎಲ್ಲವೂ ಸೂರ್ಯನ ಅನುಗ್ರಹದಿಂದಲೇ ಒದಗಬೇಕಾಗಿದೆ. ಯಾರಿಗಾದರೂ ಇವು ಸ್ವಭಾವಸಿದ್ಧವಾಗಿಯೇ ಒದಗಿದ್ದರೆ ಅಂಥವರೇನೂ ಜಂಭಕೊಚ್ಚಿಕೊಳ್ಳಬೇಕಾದದ್ದಿಲ್ಲ. ಅದರ ಬದಲು ಸೂರ್ಯನಿಗೆ ಕೃತಜ್ಞರಾಗಿರಬೇಕು. ಅವುಗಳಿಲ್ಲದವರು ಸೂರ್ಯನನ್ನೇ ಪ್ರಾರ್ಥಿಸಿ ಪಡೆದು- ಕೊಳ್ಳಬೇಕು. ಇನ್ನು ಹರಿಮಾಣವು ದೇಹಕ್ಕೆ ಅಂಟಿಕೊಂಡವರಂತೂ ಕೂಡಲೆ ಸೂರ್ಯನನ್ನು ಮೊರೆಹೋಗಬೇಕು. ಈ ವಿವರಣೆಯನ್ನು ಉಪಲಕ್ಷಣವಾಗಿಟ್ಟುಕೊಂಡು ದೇಹದಲ್ಲಿ ಯಾವದೇ ಅಸ್ವಾಭಾವಿಕವಾದ ಬದಲಾವಣೆಗಳುಂಟಾದರೂ 'ರೋಗ'ವೆಂದೇ ಪರಿಗಣಿಸಿ ಅಂಥ ವಿಕಾರಗಳು ನಮ್ಮಿಂದ ತೊಲಗಿ ಎಲ್ಲಿರಬಹುದೋ ಅಲ್ಲೇ ಇರುವಂತೆಯೇ ಮಾಡಬೇಕೆಂದು ಸೂರ್ಯನನ್ನು ಬೇಡಿಕೊಳ್ಳಬೇಕು. ಹೀಗೆ ಋಷಿಯು ಸೂರ್ಯನನ್ನು ಸ್ತುತಿಸಿ ಆರೋಗ್ಯಭಾಗ್ಯವನ್ನು ಹೊಂದಿದ ಉದಾಹರಣೆಯು ನಮಗೆಲ್ಲರಿಗೂ ಅನುಕರಣೀಯವಾಗಿದೆ.

**ಉದಗಾದಯಮಾದಿತ್ಯೋ ವಿಶ್ವೇನ ಸಹಸಾ ಸಹ ।**
**ದ್ವಿಷಂತಂ ಮಹ್ಯಂ ರಂಧಯನ್ ಮೋ ಅಹಂ ದ್ವಿಷತೇ ರಧಮ್ ॥೧೩॥**

**"ಈ ಆದಿತ್ಯನು ಸರ್ವಬಲೋಪೇತನಾಗಿ ಉದಯಿಸಿರುವನು. ಮತ್ತು ನನಗೆ ಉಪದ್ರವಕಾರಿಯಾದ (ರೋಗವನ್ನು) ತಡೆಗಟ್ಟುತ್ತಾ ತೋರಿಕೊಂಡಿರುವನು. ನಾನು ಆ ಅನಿಷ್ಟಕಾರಿಯಾದ (ರೋಗವನ್ನು) ಹಿಂಸಿಸುವುದಿಲ್ಲ. (ಸೂರ್ಯನೇ) ರೋಗನಾಶವನ್ನು ಮಾಡಲಿ" ಎಂದು ಸರಳವಾದ ಅರ್ಥ.**

ಈ ಮಂತ್ರದಲ್ಲಿ ರೋಗದೇವತೆಯನ್ನು ಸೂರ್ಯಭಗವಂತನೇ ನೋಡಿಕೊಳ್ಳಲಿ - ಎಂಬ ಅಭಿಪ್ರಾಯವಿದೆ. ರೋಗವು ನಮಗೆ ಅನಿಷ್ಟವಾದರೂ ದೈವಸೃಷ್ಟಿಯಲ್ಲಿ ಅದಕ್ಕೂ ಒಂದು ಪ್ರಯೋಜನವಿದೆ. ರೋಗಗಳೇ ಇಲ್ಲವಾಗಿ ಬಿಟ್ಟರೆ ಪ್ರಾಣಿಗಳಿಗೆ ಮೃತ್ಯುವು ಬರುವದು ಹೇಗಾದೀತು ? ನೇರಾಗಿ ಮೃತ್ಯುವೇ ಬಂದರೆ ಜನರು ಆತನನ್ನು ಬಹಳವಾಗಿ ದೂರುತ್ತಾರೆ. ಆ ದೂರಿನಿಂದ ಬಿಡುಗಡೆಯಾಗುವದಕ್ಕಾಗಿ ಮೃತ್ಯುವಿಗೆ ಸಹಾಯವಾಗಿ ಭಗವಂತನೇ ರೋಗ ದೇವತೆಗಳನ್ನು ಸೃಷ್ಟಿಸಿದ್ದಾನೆಂದು ಪುರಾಣಗಳಲ್ಲಿದೆ. ಜನರು ತಿನ್ನುವ ಅನ್ನಗಳಲ್ಲಿಯೂ ಕುಡಿಯುವ ನೀರು - ಮುಂತಾದವುಗಳಲ್ಲಿಯೂ ಈ ರೋಗ ದೇವತೆಗಳಿದ್ದುಕೊಂಡಿರುವರು. ರುದ್ರರುಗಳಿಗೆ ಇವರು ಬಾಣಗಳಾಗಿರುವರು. ಪಾಪಿಗಳನ್ನೆಲ್ಲ ಈ ರೋಗ ಬಾಣಗಳಿಂದಲೇ ರುದ್ರರು ಸಂಹರಿಸುವರೆಂದೂ ಅಂಥ ರುದ್ರರು ಭಕ್ತರ ಕಡೆಯಿಂದ ಸಾವಿರ ಯೋಜನಗಳ ದೂರದಲ್ಲೇ ಇದ್ದುಕೊಂಡಿರಲೆಂದೂ ರುದ್ರಾಧ್ಯಾಯದಲ್ಲಿ ಒಂದು ಪ್ರಾರ್ಥನೆಯು ಇದೆ. ನಾವು ಅನವಶ್ಯಕವಾಗಿ ಹಾಗೂ ಆಚಾರಹೀನರಾಗಿ ಸ್ವೇಚ್ಛೆಯಿಂದ ಕಾಲನಿಯಮವಿಲ್ಲದೆ ತಿಂದು-ಕುಡಿದು ಮಾಡುವದೇ ರುದ್ರರುಗಳ ಕೋಪಕ್ಕೆ ಕಾರಣವಾಗಿರುತ್ತದೆ. ರುದ್ರರುಗಳೆಲ್ಲರೂ ಆದಿತ್ಯಸ್ವರೂಪರೇ ಆಗಿರುವದರಿಂದ ಯಾವಾಗ ನಾವು ಅವರನ್ನು ಸ್ತುತಿಸಿ ಪದಾರ್ಥಗಳನ್ನು ಅವರಿಗೆ ನಿವೇದಿಸಿ ಪ್ರಸಾದವಾಗಿ ಸ್ವೀಕರಿಸುವೆವೋ ಆಗ ರುದ್ರರು ಕುಪಿತರಾಗುವದಿಲ್ಲ. ಆದಿತ್ಯನೂ ಪ್ರಸನ್ನನಾಗಿ ರೋಗದೇವತೆಗಳನ್ನು ನಮ್ಮಲ್ಲಿಗೆ ಬಳಿಸಾರದಂತೆ ತಡೆಗಟ್ಟಿಬಿಡುವನು. ಈ ರೀತಿಯಾಗಿ ಆದಿತ್ಯನನ್ನೂ ರುದ್ರರನ್ನೂ ಆರಾಧಿಸಿ ಆರೋಗ್ಯವಂತರಾಗಿ ಬಾಳುವ ಜಾಣತನವನ್ನು ನಾವು ಕಲಿಯಬೇಕು. ಸೂರ್ಯನು ಹುಟ್ಟುವಾಗ ಅವನಿಗೆ ಸಂಧ್ಯಾದಿ ಕರ್ಮಗಳ ಮೂಲಕ ಪೂಜೆಯನ್ನು ಅರ್ಪಿಸಿ ಆತನ ಕಿರಣಗಳಿಂದ ಸ್ಪೃಷ್ಟವಾದ ಆಹಾರವನ್ನೇ ನಾವು ತಿಂದರೆ ಬಹಳ ಮಟ್ಟಿಗೆ ರೋಗಗಳು ಉಂಟಾಗುವದಿಲ್ಲ. ಏಕೆಂದರೆ ಆತನ ಕಿರಣಸ್ಪರ್ಶದಿಂದ ರೋಗಕ್ರಿಮಿಗಳು ನಾಶವಾಗುವವು. ನಿವೇದನದಿಂದ ಆಹಾರವು ಪವಿತ್ರವಾಗುವದು. ಹೀಗೆ ಸೂರ್ಯಪ್ರಸಾದದಿಂದ ಆರೋಗ್ಯಭಾಗ್ಯವನ್ನು ಪಡೆಯಬೇಕು.

ಈವರೆಗಿನ ಮಂತ್ರಗಳಿಂದ ತ್ರಿಚಸೂಕ್ತಗಳು ಪೂರ್ಣವಾಗಿವೆ. ಸೂರ್ಯ ನಮಸ್ಕಾರವನ್ನು ಮಾಡುವವರು ಈ ಮಂತ್ರಗಳ ಅರ್ಥವನ್ನು ಅನುಸಂಧಾನ ಮಾಡುತ್ತಾ ಕರ್ಮವನ್ನು ಮಾಡುವದು ಒಳ್ಳೆಯದು. ಇನ್ನು ಮುಂದೆ ಮತ್ತೆ ಋಗ್ವೇದದ ೧-೮-೭ ರಿಂದ ಆರು ಋಕ್ಕುಗಳು ಸೂರ್ಯನ ಸ್ತೋತ್ರರೂಪವಾಗಿವೆ. ಇವು ಕುತ್ಸನೆಂಬ ಋಷಿಯಿಂದ ಕಂಡುಕೊಳ್ಳಲ್ಪಟ್ಟ ಮಂತ್ರಗಳು.

**ಚಿತ್ರಂ ದೇವಾನಾಮುದಗಾದನೀಕಂ**
**ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ।**
**ಆ ಪ್ರಾ ದ್ಯಾವಾಪೃಥಿವೀ ಅಂತರಿಕ್ಷಂ**
**ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥ ೧೪ ॥**

**"ಕಿರಣಗಳ ಸಮೂಹರೂಪವಾದ ತೇಜಸ್ಸು ಆಶ್ಚರ್ಯಕರವಾಗಿ ಉದಯಿಸಿದೆ. ಅದು ಮಿತ್ರ, ವರುಣ, ಅಗ್ನಿಗಳೇ ಮುಂತಾದ ಎಲ್ಲರಿಗೂ ಕಣ್ಣಾಗಿದೆ. ದ್ಯುಲೋಕದಿಂದ ಪೃಥಿವಿಯವರೆಗೂ ಎಲ್ಲೆಲ್ಲಿಯೂ ತನ್ನ ತೇಜಸ್ಸಿನಿಂದ ವ್ಯಾಪಿಸಿಕೊಂಡು ಸ್ಥಾವರ ಜಂಗಮಗಳಿಗೆಲ್ಲ ಆತ್ಮನಾಗಿರುವ ಸೂರ್ಯನೇ ಈ ಬೆಳಕಾಗಿರುವನು" ಎಂದು ಮಂತ್ರದ ಸರಳವಾದ ಅರ್ಥವು.**

ಈ ಮಂತ್ರವನ್ನು ಪರಮಾತ್ಮನ ಪರವಾಗಿಯೂ ಅರ್ಥಮಾಡಬಹುದು. ಏಕೆಂದರೆ ಆತ್ಮಾ, ಸ್ಥಾವರಜಂಗಮಗಳಿಗೆಲ್ಲ ಚಕ್ಷುವು - ಎಂಬ ಅರ್ಥದ ಸ್ಪಷ್ಟಬ್ರಹ್ಮಲಿಂಗವಿದೆ. ಆದರೆ ಕರ್ಮಕಾಂಡದ ದೃಷ್ಟಿಯಿಂದ ಸೂರ್ಯ ಮಂಡಲೋಪಾಧಿಯಾದ ಬ್ರಹ್ಮವನ್ನು ಸ್ವೀಕರಿಸಿ ಸಕಲಜೀವರಿಗೂ ಜೀವನನಾದ ಸೂರ್ಯನು ಉಪಾಸ್ಯನೂ ಆರಾಧ್ಯನೂ ಆಗಿ ಹೊಗಳಲ್ಪಟ್ಟಿರುವನೆಂದು ವ್ಯಾಖ್ಯಾನ ಮಾಡಬಹುದಾಗಿದೆ. ಆದಿತ್ಯನು ದೇವತೆಗಳಲ್ಲೆಲ್ಲ ಹೆಚ್ಚಿನ ಜ್ಯೋತಿಃ ಸ್ವರೂಪನಾಗಿರುವನು. ಹೇಗೆ ನಮ್ಮ ಶರೀರದಲ್ಲಿರುವ ಇಂದ್ರಿಯಗಳಲ್ಲೆಲ್ಲ ಕಣ್ಣು ಪ್ರಧಾನವೋ ಹಾಗೆ ಸ್ಥಾವರಜಂಗಮಗಳೆಲ್ಲಕ್ಕೂ ಆತನು ಕಣ್ಣಾಗಿರುವನು. ಅವನು ಉದಯಿಸದೆ ಯಾವ ವ್ಯವಹಾರವೂ ಪ್ರಾಣಿಗಳಿಗೆ ಸಾಗುವಂತಿಲ್ಲ. ಅವನ ಕಿರಣಗಳ ಸಮೂಹವೂ ಅವುಗಳ ಹರಡುವಿಕೆಯೂ ವಿಚಿತ್ರವಾಗಿರುವದು. ಏಕೆಂದರೆ ಯಾರೊಬ್ಬರೂ ಇಂಥ ತೇಜೋರಾಶಿಯಾದ ಮತ್ತೊಂದು ವಸ್ತುವನ್ನು ಕಂಡಿರುವದಿಲ್ಲ. ಉಳಿದ ನಕ್ಷತ್ರಾದಿಜ್ಯೋತಿಗಳೆಲ್ಲವೂ ಮನುಷ್ಯನ ಅಪೇಕ್ಷೆಯಿಂದ ಸೂರ್ಯನಷ್ಟು ಉಪಕಾರಕಗಳಾಗಿಲ್ಲ. ಕೆಲವು ನಕ್ಷತ್ರಗಳು ಸೂರ್ಯನಿಗಿಂತಲೂ ದೊಡ್ಡವಿರಬಹುದು. ಆದರೆ ಬೆಳಕಿನ ದೃಷ್ಟಿಯಿಂದ ನಕ್ಷತ್ರಗಳ ಉದಯಾಸ್ತಮಾನಗಳು ಈ ಸ್ಥಾವರಜಂಗಮಪ್ರಾಣಿಗಳಿಗೆ ಅಷ್ಟೇನೂ ಪರಿಣಾಮಕಾರಿಗಳಲ್ಲ. ಸೂರ್ಯೋದಯಾಸ್ತಮಾನಗಳೇ ಜಗತ್ತಿನ ಎಲ್ಲಾ ಆಗುಹೋಗುಗಳನ್ನೂ ನಿಯಂತ್ರಿಸುತ್ತವೆ. ಆದ್ದರಿಂದ ಸೂರ್ಯೋದಯವೆಂಬುದೇ ಎಲ್ಲಾ ಪ್ರಾಣಿಗಳಿಗೂ ಅದ್ಭುತಘಟನೆಯಾಗಿರುತ್ತದೆ. ಇದನ್ನೇ ಮಂತ್ರದಲ್ಲಿ 'ಚಿತ್ರಂ' ಎಂದು ತಿಳಿಸಿದೆ. ದೇವಲೋಕವನ್ನೂ ಈ ಸೂರ್ಯನೇ ಬೆಳಗುವನು. ಇವನ ಆಯನ ಸಂಚಾರಭೇದವೇ ದೇವಲೋಕದ ಹಗಲು ರಾತ್ರೆಗಳಾಗಿವೆ. ಉತ್ತರಾಯಣವು ಹುಟ್ಟಿದಾಗ ದೇವಲೋಕಗಳಲ್ಲಿ ಸೂರ್ಯೋದಯವಾಗಿ ಅದು ಪೂರೈಸುತ್ತಲೂ

ಕತ್ತಲೆಯಾಗುವದು. ಹೀಗೆ ಮಿತ್ರಾದಿದೇವತೆಗಳಿಗೂ ಈತನೇ ಚಕ್ಷುವೆನಿಸಿರುವನು. ದ್ಯಾವಾಪೃಥಿವಿ - ಅಂತರಿಕ್ಷಗಳನ್ನು ಪೂರ್ಣವಾಗಿ ಎಲ್ಲೆಲ್ಲಿಯೂ ವ್ಯಾಪಿಸಿರುವನು. ಎಲ್ಲಕ್ಕಿಂತ ಮಿಗಿಲಾಗಿ 'ಆತ್ಮ' ನಾಗಿರುವನು. ಜೀವರುಗಳನ್ನೆಲ್ಲ ಎಚ್ಚರಗೊಳಿಸುವ ಜೀವಶ್ರೇಷ್ಠನಾಗಿರುವನು. 'ಯೋಽಸೌ ತಪನ್ನುದೇತಿ' ಎಂದು ವೇದವೂ ಹೊಗಳುತ್ತಿರುವದು. ಕಲ್ಪದ ಆರಂಭದಲ್ಲಿ ಸೂರ್ಯನು ಸೃಷ್ಟಿಯಾದನಷ್ಟೆ! ಆಗ ಸೃಷ್ಟಿಕರ್ತನು ಹಿಂದಿನ ಕಲ್ಪದಲ್ಲಿ ಯಾವ ಜೀವೋತ್ತಮನು ಹೆಚ್ಚಿನ ಕರ್ಮೋಪಾಸನೆಗಳಿಂದ ಉಳಿದ ಎಲ್ಲಾ ಜೀವರುಗಳನ್ನೂ ಮೀರಿಸಿದ್ದನೋ ಅಂಥವನನ್ನೇ ಆರಿಸಿ ಸೂರ್ಯನನ್ನಾಗಿ ಮಾಡಿದನು. ಆದ್ದರಿಂದ ಇವನನ್ನು ಉಳಿದ ಜೀವರುಗಳ ಆತ್ಮನೆಂದು ಹೊಗಳಿರುವದು ಯುಕ್ತವೇ ಆಗಿದೆಯಲ್ಲವೆ? ಹೀಗೆ ಎಲ್ಲರೂ ಈತನನ್ನು ಭಜಿಸಬೇಕೆಂದು ಸಿದ್ಧವಾಯಿತು.

**ಸೂರ್ಯೋ ದೇವೀಮುಷಸಂ ರೋಚಮಾನಾಂ**
**ಮರ್ಯೋ ನ ಯೋಷಾಮಭ್ಯೇತಿ ಪಶ್ಚಾತ್ ।**
**ಯತ್ರಾ ನರೋ ದೇವಯಂತೋ ಯುಗಾನಿ**
**ವಿತನ್ವತೇ ಪ್ರತಿ ಭದ್ರಾಯ ಭದ್ರಮ್ ॥೧೫॥**

**"ಸೂರ್ಯನು ರಮಣೀಯಳಾದ ಉಷಾದೇವಿಯನ್ನು - ಹೇಗೆ ಒಬ್ಬನು ಶೋಭಮಾನಳಾದ ಸ್ತ್ರೀಯನ್ನು ಹಿಂಬಾಲಿಸುವನೋ ಹಾಗೆ - ಅನುಸರಿಸಿ ಉದಯಿಸುತ್ತಿರುವನು. ದೇವತೆಗಳನ್ನು ತೃಪ್ತಿಗೊಳಿಸುವ ಸಲುವಾಗಿ ಯಜ್ಞಮಾಡಲು ಆ ಸಮಯಕ್ಕೆ ಯಜಮಾನರುಗಳು ಪತ್ನಿಯರೊಡಗೂಡಿ ನೇಗಿಲುಗಳಿಂದ ನೆಲವನ್ನು ತುಟಿಗೊಳಿಸುತ್ತಾ ಸೂರ್ಯನನ್ನು ಹಿಂಬಾಲಿಸುವರು. ಹೀಗೆ ಮಂಗಳಕರನಾದ ಸೂರ್ಯನನ್ನು ಶ್ರೇಯಃಪ್ರಾಪ್ತಿಗಾಗಿ ನಾವು ಸ್ತುತಿಸುವೆವು' ಎಂದು ಸರಳವಾದ ಅರ್ಥವು.**

ಅನಿರೀಕ್ಷಿತವಾಗಿ ದಿವ್ಯಸುಂದರಿಯೂ, ತೇಜೋಮಯಳೂ ಆದ ಒಬ್ಬ ಮಾತೆಯನ್ನು ನಾವು ಕಂಡರೆ ಆಕೆಯು ಯಾರಿರಬಹುದೆಂದು ತಿಳಿಯಲು ಹಿಂಬಾಲಿಸುವೆವು. ನವವಧುವನ್ನು ಕಲ್ಯಾಣಕ್ಕಾಗಿ ಮಂಟಪಕ್ಕೆ ಕರೆತರುವ ಸಮಯದಲ್ಲಿ ಆಕೆಯನ್ನು ಇಷ್ಟಮಿತ್ರರು ಹಿಂಬಾಲಿಸುವರಲ್ಲವೆ? ಹಾಗೆಯೇ ಸೂರ್ಯ ಭಗವಂತನು ಉಷಾದೇವಿಯನ್ನು ಹಿಂಬಾಲಿಸಿ ಉದಯಿಸುವನು. ಉಷಃಕಾಲದ ಅನಂತರವೇ ಸೂರ್ಯನು ತೋರಿಕೊಳ್ಳುವನಲ್ಲವೆ? ಪ್ರತಿದಿನವೂ ಉಷಃಕಾಲವು ಬಹಳ ರಮಣೀಯವಾಗಿರುವದು. ಯೋಗಿಗಳು ಆ ಸಮಯದಲ್ಲೇ ಧ್ಯಾನಾರೂಢರಾಗುವರು. ಇಂಥ ಉಷೆಯು ಸೂರ್ಯನ ವಿಭೂತಿರೂಪಳೇ ಆಗಿರುವಳು. ಉಷಃಕಾಲವು ಪ್ರಾರಂಭವಾಯಿತೆಂದರೆ ಸೂರ್ಯನು ಸದ್ಯದಲ್ಲೇ

ಉದಯಿಸಲಿರುವನೆಂದು ಪ್ರಾಣಿಗಳಿಗೆ ಸಂತೋಷವಾಗುವದು. ಹೀಗೆ ಸೂರ್ಯದೇವನ ಆಗಮನವು ಖಚಿತವಾದ ಕೂಡಲೆ ಕರ್ಮಿಗಳಾದ ಯಾಜ್ಞಿಕರುಗಳೆಲ್ಲರೂ ತಮ್ಮ ತಮ್ಮ ಪತ್ನೀಸಹಿತರಾಗಿ ಆಯಾ ದಿನದ ವೈದಿಕ ಯಜ್ಞಕರ್ಮಗಳನ್ನು ಪ್ರಾರಂಭಿಸುವರು. ಯಜ್ಞವು ಹೊಸದಾಗಿ ಆರಂಭಿಸಲ್ಪಡಬೇಕಾಗಿದ್ದಲ್ಲಿ ಮೊದಲು ಯಜ್ಞಭೂಮಿಯನ್ನೆಲ್ಲ ನೇಗಿಲಿನಿಂದ ಪರಿಶುದ್ಧಿಗೊಳಿಸಲು ಆರಂಭಿಸುವರು. ಇನ್ನು ಕೆಲವರು ದೇವತೆಗಳಿಗೆ ಆಹುತಿಯನ್ನು ನೀಡಲು ಸಿದ್ಧರಾಗುವರು. ಮತ್ತೆ ಕೆಲವರು ಜಪಕರ್ಮವನ್ನೂ ಅಧ್ಯಯನ ಪಾರಾಯಣ ಪೂಜಾದಿಗಳನ್ನು ಪ್ರಾರಂಭಿಸುವರು. ಒಟ್ಟಿನಲ್ಲಿ ಯಾವದೇ ಶುಭಕರ್ಮಗಳನ್ನು ಪ್ರಾರಂಭಿಸುವವರು ಸೂರ್ಯನ ಉದಯವನ್ನೇ ನಿರೀಕ್ಷಿಸುವರು. ಏಕೆಂದರೆ ಕತ್ತಲಿನಲ್ಲಿ ಮಾಡಿದರೆ ವೈದಿಕಕರ್ಮಗಳು ರಾಕ್ಷಸರ ಪಾಲಾಗಿಬಿಡುವದು. ಆದ್ದರಿಂದ ಹೇಗೆ ಸೂರ್ಯನು ಉಷಾದೇವಿಯನ್ನು ಹಿಂಬಾಲಿಸುವನೋ ಹಾಗೆಯೇ ಕರ್ಮಿಗಳು ಸೂರ್ಯನನ್ನೇ ಹಿಂಬಾಲಿಸುವರು - ಎಂದಭಿಪ್ರಾಯ. ವೈದಿಕ ಸಂಪ್ರದಾಯದಂತೆ ಶುಭಕರ್ಮಗಳ ಆರಂಭದಲ್ಲಿ 'ಪುಣ್ಯಾಹ'ವೆಂಬ ಕರ್ಮವನ್ನಾಚರಿಸುವದು ರೂಢಿಯಲ್ಲಿದೆ ಪುಣ್ಯವಾದ ಎಂದರೆ ಶುಭವಾದ ಅಹಃ - ಹಗಲು ಎಂಬಿದನ್ನೇ ಪುಣ್ಯಾಹವೆನ್ನುವರು. 'ಯದಾ ವೈ ಸೂರ್ಯ ಉದೇತಿ' 'ಪುಣ್ಯಾಹ ಏವ ಕುರುತೇ' ಎಂಬ ವಾಕ್ಯಗಳು ಸೂರ್ಯನ ಉದಯಾನಂತರ ಮಾಡುವ ಕರ್ಮಗಳು ಪುಣ್ಯಾಹದಲ್ಲೇ ಅನುಷ್ಠಿಸಲ್ಪಟ್ಟವಾಗುತ್ತವೆ - ಎಂದು ತಿಳಿಸುತ್ತಿವೆ. ಪುಣ್ಯಾಹದಲ್ಲಿ ಬಳಸುವ ಕೆಲವು ಮಂತ್ರಗಳಲ್ಲಿಯೂ ಸೂರ್ಯನನ್ನೇ ಸ್ತುತಿಸಲಾಗಿದೆ. ಸೂರ್ಯನೇ ಹಿಂದೆಯೂ ಮುಂದೆಯೂ ಎಲ್ಲೆಲ್ಲಿಯೂ ನಮ್ಮನ್ನು ಕಾಪಾಡಿ ದೀರ್ಘಾಯುಷ್ಯವನ್ನುಂಟುಮಾಡಲಿ ಎಂಬ ಪ್ರಾರ್ಥನೆಯೊಂದಿದೆ. ಹೀಗೆ ವೈದಿಕಕರ್ಮಕಾಂಡವೆಲ್ಲ ಸೂರ್ಯನನ್ನೇ ಹಿಂಬಾಲಿಸಿರುತ್ತದೆ.

ಇಂಥ ಸೂರ್ಯನನ್ನು ನಾವು ಭದ್ರ(ಮಂಗಳ)ಪ್ರಾಪ್ತಿಗಾಗಿ ಬೇಡುವೆವು; ಹಾಗೂ ಸ್ತುತಿಸುವೆವು ಎಂದು ಕಡೆಯಲ್ಲಿ ತಿಳಿಸಲಾಗಿದೆ. ಬ್ರಾಹ್ಮಣರಿಗೆಲ್ಲ ಸೂರ್ಯನೇ ಮುಖ್ಯದೇವತೆ. ಅವನನ್ನು ಬಿಟ್ಟರೆ ಅಗ್ನಿ. ಸೂರ್ಯನ ಆರಾಧನೆಯು ಅಗ್ನಿಯ ಆರಾಧನೆಗಿಂತಲೂ ಸುಲಭವೂ ಮಿತವ್ಯಯದ್ದೂ ಆಗಿದೆ. ಅಗ್ನಿಮುಖದಿಂದ ದೇವತಾರಾಧನೆ ಮಾಡುವಾಗ ಇಂಧನ, ಆಜ್ಯಾದಿದ್ರವ್ಯಗಳು ಬೇಕಾಗುವವು. ಸೂರ್ಯನ ಮೂಲಕ ಆರಾಧನೆಗೆ ಕೇವಲ ನೀರೊಂದೇ ಸಾಕಾಗುವದು.

ಮಂತ್ರಪಠನ, ನಮಸ್ಕಾರಗಳು ಸೇರಿಬಿಟ್ಟರೆ ಆದಿತ್ಯನು ತೃಪ್ತನಾಗಿಬಿಡುವನು. ನಾವೆಲ್ಲ ಬ್ರಾಹ್ಮಣ್ಯವನ್ನು ಉಜ್ವಲಗೊಳಿಸಿಕೊಳ್ಳಲು ಸೂರ್ಯನನ್ನು ಬಳಿಸಾರೋಣ.

**ಭದ್ರಾ ಅಶ್ವಾ ಹರಿತಃ ಸೂರ್ಯಸ್ಯ ಚಿತ್ರಾ ಏತಗ್ವಾ ಅನುಮಾದ್ಯಾಸಃ ।**
**ನಮಸ್ಯಂತೋ ದಿವ ಆ ಪೃಷ್ಠಮಸ್ಥುಃ ಪರಿ ದ್ಯಾವಾಪೃಥಿವೀ**
**ಯಂತಿ ಸದ್ಯಃ ॥ ೧೬ ॥**

**'ಭದ್ರ, ಏತಗ್ವಾ - ಎಂಬ ಹೆಸರುಗಳಿಂದ ಕರೆಯಲ್ಪಡುವ ಸೂರ್ಯರಥದ ಕುದುರೆಗಳು ವಿಚಿತ್ರವಾದ ಅವಯವಗಳುಳ್ಳವಾಗಿ ಕ್ರಮವಾಗಿ ಸ್ತೋತ್ರಗಳಿಂದ ಉಬ್ಬಿಸಲ್ಪಡುವವು. ಹೀಗೆ ನಮ್ಮಗಳಿಂದ ನಮಸ್ಕರಿಸಲ್ಪಟ್ಟವುಗಳಾಗಿ ಅವು ಅಂತರಿಕ್ಷದ ಮೇಲ್ಭಾಗವನ್ನು ಹೊಗುವವು. ಹಾಗೆಯೇ ದ್ಯು-ಪೃಥಿವೀಲೋಕಗಳನ್ನು ಒಂದು ಹಗಲಿನಲ್ಲಿ ಸುತ್ತುವವು' - ಎಂದು ಸರಳವಾದ ಅರ್ಥ.**

ಸೂರ್ಯನ ರಥವು ಕರಾರುವಾಕ್ಕಾಗಿ ಸಕಾಲಕ್ಕೆ ಸಂಚರಿಸಬೇಕಾದರೆ ಕುದುರೆಗಳ ಓಟವೂ ಜಾಣ್ಮೆಯೂ ಮುಖ್ಯ. ಆದ್ದರಿಂದ ಈ ಮಂತ್ರದಲ್ಲಿ ಸೂರ್ಯರಥದ ಕುದುರೆಗಳನ್ನು ಸ್ತುತಿಸಲಾಗಿದೆ. ಏಳುಕುದುರೆಗಳೆಂದು ಪುರಾಣಗಳಲ್ಲಿ ವರ್ಣನೆ ಇದ್ದರೂ ಒಂದೇ ಕುದುರೆಗೆ ಏಳು ಹೆಸರುಗಳೆಂಬ ಪಕ್ಷವೂ ಇದೆ. ಈ ಮಂತ್ರದಲ್ಲಿ ಬಹುವಚನ ಪ್ರಯೋಗವಿರುವದರಿಂದ ಏಳು - ಎಂಬ ಸಂಖ್ಯೆಯು ವಿವಕ್ಷಿತವೆಂದು ಇಟ್ಟುಕೊಳ್ಳಬಹುದು. ಈ ಕುದುರೆಗಳ ಗುಂಪಿಗೆ ಭದ್ರ- ಎಂದೂ, ಏತಗ್ವಾ- ಎಂದೂ ಹೆಸರುಗಳಿವೆ. ಏತಗ್ವಾ - ಎಂಬುದಕ್ಕೆ ಏತವ್ಯಂ ಮಾರ್ಗಂ ಗಂತಾರಃ ಅಶ್ವಾಃ (ನಡೆಯಬೇಕಾದ ಮಾರ್ಗವನ್ನು ಸವೆಯಿಸುವ ಕುದುರೆಗಳು) - ಎಂದು ಭಾಷ್ಯಕಾರರು ವಿವರಣೆ ನೀಡಿರುತ್ತಾರೆ. ಇಂಥ ಕುದುರೆಗಳನ್ನು ನಾವು ಸ್ತೋತ್ರಮಾಡುತ್ತಾ ಅವುಗಳನ್ನು ಸಕಾಲದಲ್ಲಿ ಓಡುವಂತೆ ಪ್ರೋತ್ಸಾಹಿಸುತ್ತೇವೆ - ಎಂದು ಋಷಿಯು ತಿಳಿಸಿದ್ದಾನೆ. ನಮ್ಮ ಸ್ತುತಿಯು ಪ್ರಾಣಿಮಾತ್ರವಾದ ಕುದುರೆಗಳಿಗೆ ಅರ್ಥವಾಗುವದು ಹೇಗೆ? ಎಂದು ಶಂಕಿಸಬಾರದು. ಅಶ್ವಾಂತರ್ಗತದೇವತೆಗಳನ್ನೇ ಕುರಿತು ನಾವು ಸ್ತುತಿಸುವೆವು - ಎಂದಭಿಪ್ರಾಯ. ಪ್ರಾಣಿಗಳಿಗೂ ಕೂಡ ನಮ್ಮ ಕೆಲವು ಮಾತುಗಳು ಹಾಗೂ ಸಂಜ್ಞೆಗಳು ಅರ್ಥವಾಗುತ್ತವೆ. ಸರ್ಕಸ್ ಮುಂತಾದವುಗಳಲ್ಲಿ ಇದನ್ನು ಕಾಣಬಹುದು. ದೇವತಾರೂಪವಾದ ಕುದುರೆಗಳಿಗೆ ವೈದಿಕಸ್ತುತಿಯು ಅರ್ಥವಾಗುವದರ ಜೊತೆಗೆ ಆನಂದವೂ ಆದೀತು. ಹೀಗೆ ಹೊಗಳಲ್ಪಟ್ಟ ಕುದುರೆಗಳು ಭಗವಂತನಾದ ಸೂರ್ಯನ ರಥವನ್ನು ಚುರುಕಾಗಿ ಒಯ್ಯುವವು. ಇಷ್ಟೇ ಅಲ್ಲ, ಯಜುರ್ವೇದದಲ್ಲಿ ಒಂದು ಕಡೆ ತಿಳಿಸಿರುವಂತೆ, ಸೂರ್ಯನೊಬ್ಬನೇ ಪ್ರತಿದಿನವೂ ಒಂಟಿಯಾಗಿ ಲಕ್ಷಾಂತರ

ಯೋಜನಗಳನ್ನು ಪ್ರಯಾಣಮಾಡಬೇಕಾಗಿರುವದರಿಂದ ಅವನಿಗೆ ಬೇಜಾರಾಗದಂತೆ ಅವನ ರಥದ ನಾಲ್ಕು ದಿಕ್ಕುಗಳಲ್ಲಿಯೂ ರಕ್ಷಕರು, ದ್ವಾರಪಾಲಕರು, ಸೇವಕರು, ಸಂಗೀತಗಾರರು, ನೃತ್ಯಮಾಡುವವರು, ಸ್ತುತಿಪಾಠಕರು, ಋಷಿಗಳೇ - ಮುಂತಾದ ಪರಿವಾರವನ್ನೆಲ್ಲ ಜೋಡಿಸಲಾಗಿದೆಯಂತೆ. ಹೀಗೆ ಸೂರ್ಯನು ಸಕಲೋಪಕರಣ ಭೋಗ್ಯವಿಶಿಷ್ಟವಾದ ರಥದಲ್ಲೇ ಪ್ರಯಾಣಮಾಡುವನು. ಅವನಿಗಾಗಲಿ ಅವನ ಕುದುರೆಗಳಿಗಾಗಲಿ ದಣಿವು ಇಲ್ಲ. ಆತನು ಮಹಾಜ್ಞಾನಿಯಾಗಿದ್ದು ಸೃಷ್ಟಿಕಾಲದಲ್ಲಿ ಭಗವಂತನಿಂದ ಈ ಜಗತ್ಪ್ರಕಾಶನ, ಕಾಲಗಣನೆಯಂಥ ಮಹಾಕರ್ಮಗಳಲ್ಲಿ ನಿಯೋಜಿಸಲ್ಪಟ್ಟಿರುವನು. ಅಕ್ಷರರೂಪವಾದ ಪರಬ್ರಹ್ಮವೇ ಅವನನ್ನೂ ಆಳುವ ಪ್ರಶಾಸ್ತೃವಾಗಿದೆ. ಹೀಗೆ ಬ್ರಹ್ಮನಿಯೋಜಿತನಾದ ಸೂರ್ಯನನ್ನು ಹೊಗಳುವಾಗ ಆತನ ಪರಿವಾರವನ್ನೂ ಗಣನೆಗೆ ತೆಗೆದುಕೊಳ್ಳಲೇಬೇಕು. ಈ ಮಂತ್ರದಲ್ಲಿ ಕುದುರೆಗಳನ್ನು ಹೊಗಳಲಾಗಿದೆ. ಮಂಗಳಕರವಾದ ಈ ಕುದುರೆಗಳು ಋಷಿಗಳಿಂದ ಸ್ತುತಿಸಲ್ಪಟ್ಟು ನಮಸ್ಕರಿಸಲ್ಪಟ್ಟು - ಉಬ್ಬಿದವುಗಳಾಗಿ ಸೂರ್ಯರಥವನ್ನು ದ್ಯುಲೋಕದವರೆಗೂ ಏರಿಸುವವು. ಹಾಗೂ ಒಂದು ಹಗಲಿನಲ್ಲಿ ದ್ಯುಪೃಥಿವೀ ಲೋಕಗಳನ್ನೆಲ್ಲ ಅತಿಕ್ರಮಿಸಿಬಿಡುವವು. ಇಂಥ ಮಹಾಅಶ್ವಗಳಿಗೆ ನಮಸ್ಕಾರ - ಎಂದು ಇಲ್ಲಿ ಪ್ರಾರ್ಥಿಸಲಾಗಿದೆ.

**ತತ್ಸೂರ್ಯಸ್ಯ ದೇವತ್ವಂ ತನ್ಮಹಿತ್ವಂ**
**ಮಧ್ಯಾ ಕರ್ತೋರ್ವಿತತಂ ಸಂಜಭಾರ ।**
**ಯದೇದಯುಕ್ತ ಹರಿತಃ ಸಧಸ್ಥಾದಾದ್ರಾತ್ರೀ**
**ವಾಸಸ್ತನುತೇ ಸಿಮಸ್ಮೈ ॥ ೧೭ ॥**

**'ಸೂರ್ಯನ ದೇವತ್ವವೂ ಮಹಿಮೆಯೂ ಏನೆಂದರೆ : ಬೇಸಾಯಗಾರನು ತನ್ನ ಕೆಲಸವು ಪೂರೈಸದೆ ಇದ್ದರೂ (ಸೂರ್ಯಾಸ್ತಕಾಲಕ್ಕೆ) ಅದನ್ನು ಕೈಬಿಡುವನು. ಅನಂತರ ಆ ಭಗವಂತನು ರಸಹರಣಮಾಡುವ ತನ್ನ ರಶ್ಮಿಜಾಲವನ್ನು ಈ ಭೂಲೋಕದಿಂದ ಸೆಳೆದು ಬೇರೊಂದು ಕಡೆಗೆ ತಿರುಗಿಸಿದ ಅನಂತರವೇ ರಾತ್ರಿಯು ಎಲ್ಲಾ ದಿಕ್ಕುಗಳನ್ನೂ ಕತ್ತಲೆಗೊಳಿಸುತ್ತದೆ' ಎಂದು ಸರಳವಾದ ಅರ್ಥ.**

ಈ ಮಂತ್ರದಲ್ಲಿ ಸೂರ್ಯನ ಯಜಮಾನಿಕೆ ಅಥವಾ ಒಡೆತನವನ್ನೂ ಸ್ವಾತಂತ್ರ್ಯವನ್ನೂ ತಿಳಿಸಿದೆ. ಹೇಗೆಂದರೆ ಕೃಷಿಕನೇ ಇದನ್ನು ಸ್ಫುಟಗೊಳಿಸುತ್ತಿದ್ದಾನೆ. ಭಗವಾನ್ ಸೂರ್ಯನು ಅಸ್ತಮಾನವನ್ನು ಹೊಂದುವ ಸಮಯವು ಬಂದಕೂಡಲೆ ರೈತನು ತನ್ನ ಕೆಲಸವನ್ನು ಅಲ್ಲಿಗೇ ನಿಲ್ಲಿಸಿಬಿಡುವನು. ಹಾಗೆಯೇ ಯಾವ ಕಾರ್ಮಿಕನಾಗಲಿ, ಉದ್ಯೋಗಿಯಾಗಲಿ, ಸಂಜೆಯಾದೊಡನೆಯೇ ತನ್ನ ಕೆಲಸವು

ಪೂರೈಸದೆ ಇದ್ದಾಗಲೂ ಕೈಬಿಟ್ಟು ಮನೆಗೆ ಹೋಗಿಬಿಡುವನು. ಕೃಷಿಕನಿಗಂತೂ ಹೊಲಗದ್ದೆಗಳಲ್ಲಿ ಬೆಳಕು ಹಿಂದೆ ಸರಿದಕೂಡಲೇ ಏನೂ ಕರ್ಮವನ್ನು ಮಾಡಲಾಗುವದೇ ಇಲ್ಲ. ಇದರಿಂದ ತಿಳಿಯಬರುವದೇನೆಂದರೆ : ಸೂರ್ಯನು ಎಲ್ಲಾ ಕೃಷಿಕರನ್ನೂ ಕಾರ್ಮಿಕರನ್ನೂ ತನ್ನ ಆಳ್ವಿಕೆಯಲ್ಲಿಯೇ ಇಟ್ಟು ಕೊಂಡಿರುವನೆಂದಾಗುವದು. ಏಕೆಂದರೆ ಸೂರ್ಯನು ತಾನು ಮರೆಯಾಗುವ ಕಾಲಕ್ಕೆ ಎಲ್ಲರನ್ನೂ ಅವರವರ ಕಾರ್ಯಗಳಿಂದ ಬಿಡುಗಡೆಮಾಡಿಸಿಬಿಡುವನು. ಇದೇ ಅವನ ಹೆಚ್ಚುಗಾರಿಕೆಯು. ಇಂತ ಅಧಿಕಾರಬಲವು ಬೇರೆ ಯಾವ ದೇವತೆಗೂ ಇರುವದಿಲ್ಲ ಎಂದಭಿಪ್ರಾಯ. ಏನೇ ವಿಶೇಷಕೆಲಸಗಳಿದ್ದರೂ ಹಗಲು ಕಳೆಯುವದರಲ್ಲಾಗಬೇಕೇ ಹೊರತು ರಾತ್ರಿಯಲ್ಲಿ ಸಾಧ್ಯವಿಲ್ಲ. ದೀಪದ ಬೆಳಕಿನಲ್ಲಿ ಕೆಲವು ಕೆಲಸಗಳು ಸಾಗಬಹುದಾದರೂ ಸೂರ್ಯನ ಬೆಳಕಿನಲ್ಲಿ ನಡೆಯುವ ಕೆಲಸದ ಪ್ರಮಾಣಕ್ಕೆ ಹೋಲಿಸಿದರೆ ಅವು ಅತ್ಯಲ್ಪವೇ ಸರಿ. ಆದ್ದರಿಂದ ಆ ಭಗವಂತನನ್ನು ಸಕಲಕರ್ಮಗಳ ಸಾಕ್ಷಿಯೆಂದೂ ಕರ್ಮಗಳಿಗೆಲ್ಲ ನಿಯಂತೃವೆಂದೂ ಕರ್ಮವನ್ನು ಮಾಡುವ ಕರ್ತೃಗಳಿಗೆಲ್ಲ ಈಶ್ವರನೆಂದೂ ಋಷಿಯು ಈ ಮಂತ್ರದಲ್ಲಿ ತಿಳಿಸಿರುತ್ತಾನೆ. ಮತ್ತು ಸೂರ್ಯನ ಅನುಗ್ರಹವು ಸ್ಥಾವರಜಂಗಮಪ್ರಾಣಿಗಳೆಲ್ಲಕ್ಕೂ ಸರಿಸಮಾನವಾಗಿ ಅವನ ಕಿರಣಗಳ ಮೂಲಕ ಆಗುತ್ತಿರುತ್ತದೆ. ಅಸ್ತಮಯಕಾಲಕ್ಕೆ ಆ ಭಗವಾನನು ತನ್ನ ರಸಮಯವಾದ ಕಿರಣಗಳನ್ನೆಲ್ಲ ಹಿಂದಕ್ಕೆ ಸೆಳೆದುಕೊಂಡುಬಿಡುವನು. ಸೂರ್ಯನ ಗೈರುಹಾಜರಿಯನ್ನು ಧೃಢಮಾಡಿಕೊಂಡ ಅನಂತರವೇ ರಾತ್ರಿಯು ತನ್ನ ಕತ್ತಲೆಯ ಆವರಣವನ್ನು ಬಿಚ್ಚಲಾರಂಭಿಸುವಳು. ಭೂತಗಳೆಲ್ಲವೂ ಸ್ತಬ್ಧವಾಗಿಬಿಡುವವು. ರಾತ್ರಿದೇವಿಯು ತಾನು ಎಷ್ಟೇ ಶಕ್ತಿವಂತಳಾಗಿರಬಹುದು. ಆದರೆ ಸೂರ್ಯನೊಬ್ಬನ ಮುಂದೆ ಆಕೆಯ ಆಟವು ನಡೆಯಲಾರದು. ದೇವತೆಗಳು ಎಂದರೆ ಸ್ವಯಂಪ್ರಕಾಶವುಳ್ಳವರೆಂಬ ಸಾಮಾನ್ಯಾರ್ಥವಿದೆ. ಆದರೆ ಸೂರ್ಯನನ್ನು ಬಿಟ್ಟರೆ ಉಳಿದ ಅಗ್ನ್ಯಾದಿದೇವತೆಗಳು· ಯಾರೂ ರಾತ್ರಿಯನ್ನು ಹಿಮ್ಮೆಟ್ಟಿಸಲಾರರು. ಹೀಗಿರುವಲ್ಲಿ ದೇವತೆಗಳಲ್ಲಿ ಸೂರ್ಯನಿಗಿರುವಷ್ಟು ಮಹಿಮೆಯು ಬೇರೆ ಯಾರಿಗಿದ್ದೀತು ?- ಎಂದು ಋಷಿಯು ಸ್ತುತಿಸುತ್ತಿರುವನು. ರಾತ್ರಿಯ ಅನುಭವವು ಎಂಥವರಿಗೂ ಭಯವನ್ನುಂಟುಮಾಡತಕ್ಕದ್ದಾಗಿರುವದು. ರಾಕ್ಷಸರು, ಪಿಶಾಚಿಗಳು, ದುಷ್ಟರು, ಮೂರ್ಖರೇ-ಮುಂತಾದವರೆಲ್ಲರಿಗೂ ರಾತ್ರಿಯು ಆಶ್ರಯವಾಗಿರುವಳು. ಈಕೆಯನ್ನು ಇವಳ ಸಕಲಬಲಪರಿವಾರಗಳೊಡನೆ ನೆನೆಸಿಕೊಂಡಾಗ ಹಾಗೂ ರಾತ್ರಿಯನ್ನು ದಾಟಲಿರುವಾಗ ಎಂಥ ಧೈರ್ಯಶಾಲಿಗೂ ಮೈನಡುಗುವದು. ಇಂಥ ಕರಾಳರಾತ್ರಿಯನ್ನು ಹೊಡೆದೋಡಿಸಿ ಜಗತ್ತಿಗೆ ನೆಮ್ಮದಿ, ಅಭಯ, ಪೋಷಣೆ, ಬಲ, ತೇಜಸ್ಸು, ಪ್ರಕಾಶಗಳನ್ನು ಪಕ್ಷಪಾತವಿಲ್ಲದಂತೆ ನೀಡುವ ದೇವತೆಯೆಂದರೆ

ಸೂರ್ಯನೊಬ್ಬನೇ ಸರಿ. ಆದ್ದರಿಂದ ಆತನ ಮಹಿಮೆಯನ್ನು ಇನ್ನೂ ಕೊಂಡಾಡೋಣ - ಎಂದು ಋಷಿಯ ಅಭಿಪ್ರಾಯ.

**ತನ್ಮಿತ್ರಸ್ಯ ವರುಣಸ್ಯಾಭಿಚಕ್ಷೇ ಸೂರ್ಯೋ ರೂಪಂ ಕೃಣುತೇ ದ್ಯೋರುಪಸ್ಥೇ।**
**ಅನಂತಮನ್ಯದ್ರುಶದಸ್ಯ ಪಾಜಃ ಕೃಷ್ಣಮನ್ಯದ್ಧರಿತಃ ಸಂಭರನ್ತಿ ॥೧೮॥**

**ಮಿತ್ರ ವರುಣರಿಂದ ಸಹಿತವಾದ ಈ ಸಮಸ್ತಜಗತ್ತಿನ ನಡುವೆ ಸೂರ್ಯನು ದ್ಯು-ಪೃಥಿವಿಗಳನ್ನು ಬೆಳಗುತ್ತಾ ವಸ್ತುಗಳೆಲ್ಲವನ್ನೂ ತೇಜೋರೂಪಮಯವಾಗಿ ಮಾಡುವನು. ಮತ್ತು ಆತನ ಕಿರಣಗಳೆಂಬ ಅಶ್ವಗಳು ಇಡಿಯ ಜಗತ್ತನ್ನೇ ತುಂಬುವಂಥ ಅಪಾರವಾದ ಬೆಳಕಿನಿಂದ ಅತಿ ಬಲಿಷ್ಠವಾದ ಕತ್ತಲೆಯನ್ನು ತೊಲಗಿಸುವವು. ಹಾಗೂ ತಮ್ಮ ಕಪ್ಪು ಛಾಯೆಯಿಂದ ರಾತ್ರಿಯನ್ನೂ ವ್ಯಾಪಿಸಿಕೊಂಡುಬಿಡುವವು. ಇಂಥ ಸೂರ್ಯನ ಮಹಿಮೆಯನ್ನು ಹೇಳತಕ್ಕದ್ದೇನಿದೆ? ಎಂದು ಸರಳವಾದ ಅರ್ಥ.**

ಈ ಮಂತ್ರದಲ್ಲಿಯೂ ಸೂರ್ಯಕಿರಣಗಳನ್ನೇ ಸ್ತೋತ್ರಮಾಡಲಾಗಿದೆ. ಅವುಗಳನ್ನು ಕುದುರೆಗಳೆಂದೂ ಕರೆಯಲಾಗಿದೆ. ಕಿರಣಗಳಲ್ಲಿನ ಏಳು ಬಣ್ಣಗಳೂ ಕುದುರೆಗಳಿಗೂ ಅನ್ವಯಿಸುತ್ತವೆ. ಅದರಲ್ಲಿ ನೀಲಿ - ಅಥವಾ ಕಪ್ಪುಬಣ್ಣವೇ ರಾತ್ರಿಯು - ಎಂದರ್ಥ. ಈ ಕಾರಣದಿಂದ ರಾತ್ರಿಯೆಂಬುದೂ ಸೂರ್ಯನ ಅಧೀನವೇ ಆಗಿದ್ದು ಆತನ ಮಹಿಮೆಯಾಗಿದೆ - ಎಂಬಭಿಪ್ರಾಯವು ಹೊರಡುತ್ತದೆ. ಬಿಳಿಯ ಕಿರಣಗಳಂತೆ ಕರಿಯ ಕಿರಣಗಳೂ ತೇಜಸ್ಸಿನ ಉತ್ಪನ್ನಗಳೇ ಎಂದರ್ಥ. ನಾವು ಬರಿಗಣ್ಣಿನಲ್ಲಿ ಸೂರ್ಯನನ್ನು ನೋಡಿದಾಗ ಕಣ್ಣುಗತ್ತಲಾಗುವದಕ್ಕೆ ಇದೇ ಕಾರಣವು. ಇರಲಿ; ಕಪ್ಪುಕಿರಣಗಳಿಂದ ನಮಗೆ ಪ್ರಯೋಜನವಿಲ್ಲ. ಅವು ಕತ್ತಲೆಯ ಅವಯವಗಳಾಗಿವೆ. ಆದ್ದರಿಂದ ಅವುಗಳನ್ನು ದಾಟಿ ಬಿಳಿಯ ಕಿರಣಗಳನ್ನು ನಾವು ಸಂಪರ್ಕಿಸಬೇಕು. ಸೂರ್ಯನ ಹಾಜರಿಯಿದ್ದಾಗ ಮಾತ್ರ ಇದು ಸಾಧ್ಯ. ಆ ಸೂರ್ಯನಾದರೊ, ರೂಪವನ್ನು ಧರಿಸಿ ದ್ಯು-ಪೃಥೀವೀಲೋಕಗಳೊಡನೆ ಮಧ್ಯವರ್ತಿಯಾದ ಅಂತರಿಕ್ಷವನ್ನೂ ವ್ಯಾಪಿಸಿ ಬೆಳಗುತ್ತಿರುವನು. ಹೀಗಿರುವಲ್ಲಿ ಸೂರ್ಯದರ್ಶನಕ್ಕೆ ಕೊರತೆಯೇನಿದ್ದೀತು? ಆತನೇನೂ ಯಾವದೋ ಒಂದು ಗೊತ್ತಾದ ಜಾಗದಲ್ಲಿ ಮಾತ್ರ ತೋರಿಕೊಳ್ಳುವದಿಲ್ಲವಷ್ಟೆ? ಆದ್ದರಿಂದ ನಾವು ಸೂರ್ಯನ ಅಸ್ತಿತ್ವವನ್ನು ಯಾವಾಗಲೂ ಅನುಸಂಧಾನಮಾಡಬೇಕು. ಏಕೆಂದರೆ ಶುಕ್ಲ-ಕೃಷ್ಣರೂಪದಿಂದ ಹಗಲು-ರಾತ್ರಿಗಳೆರಡನ್ನೂ ಸೂರ್ಯನೇ ವ್ಯಾಪಿಸಿರುತ್ತಾನೆ. ಆತನಿಲ್ಲದೆ ಕಾಲವಾಗಲಿ, ದೇಶವಾಗಲಿ ನಮ್ಮ ಅನುಭವದಲ್ಲೆಲ್ಲಿದೆ? ಇಂಥ ಮಹಾಮಹಿಮನಾದ ಸೂರ್ಯನಿಗೆ ಯಾರೂ ಸಮಾನರಿಲ್ಲ. ಯಾರೊಬ್ಬರೂ ಅವನನ್ನು ಮೀರಿದವರಿಲ್ಲ. ಹೀಗೆಂದು ತಿಳಿದವನಾಗಿ ಯಾವನು ಶ್ರದ್ಧಾಭಕ್ತಿಗಳಿಂದ

ಮಿತ್ರಾವರುಣರೂಪಿಯಾದ ಸೂರ್ಯದೇವನ ಉಪಾಸನೆಯನ್ನು ಕೈಗೊಳ್ಳುವನೋ ಅವನೇ ಧನ್ಯನು - ಎಂದಭಿಪ್ರಾಯ.

**ಅದ್ಯಾ ದೇವಾ ಉದಿತಾ ಸೂರ್ಯಸ್ಯ ನಿರಂಹಸಃ**
**ಪಿಪೃತಾ ನಿರವದ್ಯಾತ್ ।**
**ತನ್ನೋ ಮಿತ್ರೋ ವರುಣೋ ಮಾಮಹಂತಾಮದಿತಿಃ**
**ಸಿಂಧುಃ ಪೃಥಿವೀ ಉತ ದ್ಯೌಃ ॥ ೧೯ ॥**

**'ಎಲೈ ಬೆಳಗುವ ಸೂರ್ಯರಶ್ಮಿಗಳೆ, ಈಗ ಆದಿತ್ಯನು ಉದಯಿಸಲಾಗಿ ನೀವು ಅತ್ತಿತ್ತ ಹರದಿಕೊಂಡವರಾಗಿ ನಮ್ಮನ್ನು ಪಾಪದಿಂದ ಬಿಡಿಸಿ ಕಾಪಾಡಿರಿ. ಈ ನಮ್ಮ ಪ್ರಾರ್ಥನೆಯನ್ನು ಮಿತ್ರ, ವರುಣ, ಅದಿತಿ, ಸಿಂಧು, ಪೃಥಿವೀ ಹಾಗೂ ದ್ಯುಲೋಕದೇವತೆ - ಈ ಆರು ಮಂದಿಯೂ ಗೌರವಿಸಲಿ ! "**

ಈ ಮಂತ್ರದಲ್ಲಿ ಮೊದಲು ಸೂರ್ಯರಶ್ಮಿದೇವತೆಯನ್ನು ಕುರಿತು ಪ್ರಾರ್ಥಿಸಲಾಗಿದೆ. ಸೂರ್ಯೋದಯವಾದ ಕೂಡಲೆ ರಶ್ಮಿಗಳು ಎಲ್ಲೆಲ್ಲೂ ಹರಡಿಕೊಳ್ಳುವವು. ಅವುಗಳ ಸ್ಪರ್ಶವಾದಂತೆಲ್ಲ ಗಿಡಮರ - ಹಕ್ಕಿ ಪಕ್ಷಿಗಳಿಂದಾರಂಭಿಸಿ ಮನುಷ್ಯನವರೆಗಿನ ಸ್ಥಾವರಜಂಗಮಗಳೆಲ್ಲವೂ ಬೆಳಗುವವು; ಮತ್ತು ಪವಿತ್ರವಾಗಿಬಿಡುವವು. ಆದ್ದರಿಂದಲೇ ವೈದಿಕಾನುಷ್ಠಾನಗಳನ್ನೆಲ್ಲ ಹಗಲಿನಲ್ಲಿ ಮಾಡುವರು. ರಾತ್ರಿ ಎಂಬುದು ಪಾಪದ ಕಾರ್ಯಗಳಿಗೆ ಪ್ರೇರಕವಾಗಿರುವದು. ಹಗಲಿನಲ್ಲಿ ಹಾಗಾಗಲಾರದು. ಎಲ್ಲೋ ಕೆಲವು ಬಾರಿ ಹಗಲಿನಲ್ಲೂ ದುಷ್ಕಾರ್ಯಗಳನ್ನೆಸಗುವವರು ಇರಬಹುದು. ಆದರೆ ಸತ್ಕಾರ್ಯಗಳು, ಉದ್ಯೋಗಗಳು, ದೇವತಾ-ಪಿತೃ-ಪೂಜಾದಿಗಳು, ಮನುಷ್ಯರಿಗೆ ಮಾಡುವ ಸತ್ಕಾರಗಳು - ಎಲ್ಲವೂ ಹಗಲಿನಲ್ಲಿ ಹೆಚ್ಚು. ಇದಕ್ಕೆ ಕಾರಣವೇನೆಂದರೆ ಸೂರ್ಯರಶ್ಮಿಗಳ ಸಂಪರ್ಕವಿರುವದೇ ಆಗಿರುತ್ತದೆ. ಅವು ಕರ್ತೃಗಳನ್ನೂ ಇತರರನ್ನೂ ಶುದ್ಧಗೊಳಿಸವವು. ಪಾಪಗಳಿಂದ ಬಿಡುಗಡೆಮಾಡಿಸುವವು. ಕರ್ಮಗಳೆಲ್ಲವೂ ಸರ್ವರಿಗೂ ಗೊತ್ತಾಗುವಂತೆ ಪ್ರಕಾಶಗೊಳಿಸುವವು. ಮತ್ತು ಕರ್ಮಗಳಿಗೆ ಅನುಕೂಲಗಳನ್ನು ಒದಗಿಸಿಕೊಡುವವು. ಉದಾಹರಣೆಗೆ ಸೂರ್ಯನ ಕಿರಣಗಳ ಸ್ಪರ್ಶವಿಲ್ಲದೆ ಹೂವುಗಳು ಅರಳುವದಿಲ್ಲ. ಹೂವುಗಳಿಲ್ಲದೆ ದೇವರ ಪೂಜೆಯು ಶೋಭಿಸುವದಿಲ್ಲ. ಹೀಗೆ ಕಿರಣಗಳ ಉಪಕಾರವು ಅಪಾರವಾಗಿದೆ. ಇಂಥ ದೇವತೆಗಳನ್ನು ಹೊಗಳಿ ಋಷಿಯು ಪಾಪಗಳಿಂದ ಬಿಡುಗಡೆಮಾಡುವಂತೆ ಕೇಳಿಕೊಂಡಿರುತ್ತಾನೆ. ಹಾಗೆಯೇ ತನ್ನ ಈ ಪ್ರಾರ್ಥನೆಯನ್ನು ಆರು ದೇವತೆಗಳು

ಗೌರವಿಸಲಿ - ಎಂದೂ ಬೇಡುತ್ತಿದ್ದಾನೆ. ಆ ದೇವತೆಗಳು ಯಾರೆಂದರೆ; (೧) **ಮಿತ್ರನು** (ಹಗಲಿಗೆ ಅಭಿಮಾನಿದೇವತೆ) ಇವನು ಸಾವಿನಿಂದ ನಮ್ಮನ್ನು ಪಾರುಮಾಡುವವನು ಎಂದು ಭಾಷ್ಯಕಾರರು ವಿವರಿಸಿದ್ದಾರೆ. ಕಾಲಮೃತ್ಯುವು ಎಲ್ಲರಿಗೂ ಅನಿವಾರ್ಯವಾದರೂ ಅಕಾಲಮೃತ್ಯುವನ್ನು ದೂರವಿಡಬೇಕಾದದ್ದು ಅಗತ್ಯವಾಗಿದೆ. ಮಿತ್ರದೇವನು ಅಕಾಲಮೃತ್ಯುವಿನಿಂದ ನಮ್ಮನ್ನು ಪಾರುಮಾಡುವವನಾಗಿರುತ್ತಾನೆ (೨) **ವರುಣನು** (ರಾತ್ರಿಗೆ ಒಡೆಯನು) ಎರಡನೆಯವನು. ಈತನು ಅನಿಷ್ಟಗಳಿಂದ ನಮ್ಮನ್ನು ಬಿಡುಗಡೆಮಾಡಿಸುವವನು. ನಮಗೆ ಬೇಡವಾದದ್ದು ಎಂದರೆ ನಮ್ಮ ಮನಸ್ಸಿನ ಇಚ್ಛೆಗನುಗುಣವಾಗಿ - ಎಂದರ್ಥವಲ್ಲ. ಉದಾಹರಣೆಗೆ ಬೆಳಿಗ್ಗೆ ಮುಂಚಿತವಾಗಿ ಏಳುವದು ನಮಗೆ ಬೇಡವಾಗಿರಬಹುದು. ಅಂಥವುಗಳಿಂದ ಪಾರುಗಾಣಿಸುವದು ವರುಣನ ಕೆಲಸವಲ್ಲ. ಮತ್ತೇನೆಂದರೆ ರೋಗರುಜಿನಗಳು ದುಸ್ವಪ್ನ, ದುಶ್ಶಕುನ, ದುರ್ಗತಿ ದೌರ್ಮನಸ್ಯ, ದುರ್ಭಿಕ್ಷೆ, ದುರ್ವ್ಯಸನಾದಿ, ಅನಿಷ್ಟಗಳಿಂದ ಕಾಪಾಡುವವನು ಎಂದರ್ಥ.

(೩) **ಅದಿತಿ** (ದೇವಮಾತೆ)ಯೆಂಬುವಳು. ಈಕೆಯು ಅಖಂಡನೀಯಳು ಎಂದರೆ ಭೇದವನ್ನು ಎಣಿಸದವಳು. ಹಾಗೂ ನಮ್ಮಲ್ಲಿಯೂ ಒಳಹೊಕ್ಕು ಭೇದ ಬುದ್ಧಿಯನ್ನು ನೀಗುವವಳು. (೪) **ಸಿಂಧುದೇವತೆಯು** ಮತ್ತೊಬ್ಬಳು. ಹರಿಯುವ ಸ್ವಭಾವವುಳ್ಳ ಉದಕದೇವತೆಯೇ ಇವಳು. (೫) **ಪೃಥಿವೀದೇವತೆಯು** ಸುಪ್ರಸಿದ್ಧಳೇ ಆಗಿರುವಳು. (೬) **ದ್ಯುಲೋಕದೇವತೆಯು** ಇನ್ನೊಬ್ಬಳು - ಹೀಗೆ ಆರು ದೇವತೆಗಳೂ ನನ್ನ ಪ್ರಾರ್ಥನೆಯನ್ನು ಗೌರವಿಸಿ ಸೂರ್ಯಕಿರಣಗಳ ಸ್ಪರ್ಶದಿಂದ ನನ್ನನ್ನೂ ನನ್ನ ಸುತ್ತುವಳಿಯವನ್ನೂ ಅಂತರಂಗ - ಬಹಿರಂಗ ಪ್ರಪಂಚವನ್ನೂ ಪರಿಶುದ್ಧಿಗೊಳಿಸಲಿ - ಎಂದು ಋಷಿಯು ಸ್ತುತಿಸಿರುತ್ತಾನೆ. ಇನ್ನು ಮುಂದೆ ಪುನಃ ಸೂರ್ಯದೇವತಾಕವಾದ ಎರಡು ಮಂತ್ರಗಳ (ಋಗ್ವೇದ ೨-೩-೨೩) ವಿವರಣೆಯನ್ನು ನೋಡೋಣ :

**ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ**
**ದಿವ್ಯಃ ಸ ಸುಪರ್ಣೋ ಗರುತ್ಮಾನ್ ।**
**ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂ**
**ಯಮಂ ಮಾತರಿಶ್ವಾನಮಾಹುಃ** ॥ ೨೦ ॥

**"ಈ ದೇವನನ್ನು ಇಂದ್ರನೆಂದೂ ಮಿತ್ರ, ವರುಣ, ಅಗ್ನಿ ಹಾಗೂ ಶೋಭನವಾದ ರೆಕ್ಕೆಯುಳ್ಳ ಗರುಡ - ಎಂದು ಕರೆಯುವರು. ಇರುವ ಒಬ್ಬನನ್ನೇ ವಿಪ್ರರು**

**ಬಹು(ನಾಮ)ಗಳಿಂದ ವ್ಯವಹರಿಸುವರು. ಅಗ್ನಿ, ಯಮ, ಮಾತರಿಶ್ವರನೆಂದೂ ಹೆಸರಿಸುವರು" ಎಂದು ಭಾವಾರ್ಥ.**

ಈ ಮಂತ್ರದಲ್ಲಿ ಆದಿತ್ಯನನ್ನು ಸರ್ವದೇವಾತ್ಮಕನೆಂದು ಸ್ತುತಿಸಲಾಗಿದೆ. ಬ್ರಹ್ಮವು ಸರ್ವದೇವಾತ್ಮಕವೆಂಬುದು ಸುಪ್ರಸಿದ್ಧವಾಗಿದೆ. ಆದಿತ್ಯನಾದರೊ ಬ್ರಹ್ಮಕ್ಕಿಂತ ಬೇರೆಯಲ್ಲವಾದ್ದರಿಂದ ಈ ಸ್ತುತಿಯು ಆದಿತ್ಯನಿಗೂ ಹೊಂದುತ್ತದೆ. ಬ್ರಹ್ಮದ ಸ್ತುತಿಯು ಯಾವ ದೇವತಾವಿಶೇಷಕ್ಕಾದರೂ ಹೊಂದಬಹುದು. ಆದರೆ ನಾಮರೂಪಗಳೆಂಬ ಉಪಾಧಿಗಳ ಸಂಪರ್ಕವಿಲ್ಲದೆ 'ನೇತಿ ನೇತಿ' ಎಂಬೀ ರೀತಿಯಿಂದ ಸ್ತುತಿಸಿದಾಗ ಮಾತ್ರ ಅಂಥ ಮಂತ್ರಗಳು ಅಸಾಧಾರಣವಾಗಿದ್ದು ಪರಬ್ರಹ್ಮವೊಂದಕ್ಕೆ ಮಾತ್ರವೇ ಹೊಂದುವವು. ಈ ಮಂತ್ರದಲ್ಲಿ ಹಾಗೇನಿಲ್ಲ. ಆದ್ದರಿಂದ ಇದಕ್ಕೆ ಆದಿತ್ಯಪರವಾದ ಅರ್ಥವನ್ನು ಮಾಡಿ ಇದರ ಅಭಿಪ್ರಾಯವನ್ನು ಚಿಂತಿಸೋಣ. ಆದಿತ್ಯನನ್ನು ಇಂದ್ರನೆಂದಿರುವದು ಸಮರ್ಪಕವಾಗಿದೆ. ಏಕೆಂದರೆ ಹೆಚ್ಚು ಪ್ರಕಾಶಮಾನನಾಗಿದ್ದು ಇಂಧತೇ ಇತಿ ಇಂದ್ರಃ ಎಂದು ಅರ್ಥಮಾಡಬಹುದಾಗಿದೆ. ಜಗತ್ತಿನಲ್ಲಿ ಆದಿತ್ಯನಿಗಿಂತ ಪ್ರಕಾಶಮಾನವಾದ ತೇಜಸ್ಸು ಮತ್ತೊಂದಿಲ್ಲ - ಎಂಬುದು ನಮ್ಮೆಲ್ಲರ ಅನುಭವವು. ಹಾಗೆಯೇ ಮಿತ್ರನೆಂದೂ ಇವನನ್ನು ಸ್ತುತಿಸಲಾಗಿದೆ. ಭಾಷ್ಯದಲ್ಲಿ "ಪ್ರಮೀತೇರ್ಮರಣಾತ್ ತ್ರಾತಾರಂ ಮಿತ್ರಂ" ಎಂದು ವಿವರಣೆ ನೀಡಿರುತ್ತಾರೆ. ಸಾವು ಎಂಬುದರಿಂದ ನಮ್ಮನ್ನು ಕಾಪಾಡುವವನು ಮಿತ್ರನು ಎಂದರ್ಥ. ಯಾವನು ಈ ಮಿತ್ರನೆನಿಸಿರುವ ಆದಿತ್ಯನನ್ನು ಉಪಾಸನೆಮಾಡಿ ಸೂರ್ಯಮಂಡಲದ್ವಾರದಿಂದ ಬ್ರಹ್ಮಲೋಕವನ್ನು ಸೇರಿಬಿಡುವನೋ ಅಂಥವನು ಈ ಸಂಸಾರಮಂಡಲದಲ್ಲಿ ಮತ್ತೆ ಹುಟ್ಟುವದಿಲ್ಲ. ಆದ್ದರಿಂದಲೇ ಮರಣವೂ ಆತನಿಗೆ ಸಂಭವಿಸುವದಿಲ್ಲ. ಹೀಗೆ ಆದಿತ್ಯನು ಅಹರಭಿಮಾನಿದೇವತೆಯೂ ಆಗಿದ್ದು ಕ್ರಮಮುಕ್ತಿಗೆ ಕಾರಣನಾಗಿದ್ದು ಮಿತ್ರನೆನಿಸಿರುವನು. ವರುಣನೆಂದರೆ ಪಾಪನಿವಾರಕನೆಂದು ಈಗಾಗಲೇ ವಿವರಿಸಿದ್ದಾಗಿದೆ. ಅಗ್ನಿಯೆಂದೂ ಈತನನ್ನು ಸ್ತುತಿಸಿದೆ. "ಅಗ್ರೇ ಗಚ್ಛತೀತ್ಯಗ್ನಿಃ" ಎಂಬ ವ್ಯುತ್ಪತ್ತಿಯಂತೆ ಶಾಖರೂಪದಿಂದ ಎಲ್ಲಾ ಪ್ರಾಣಿಗಳ ಒಳಹೊಕ್ಕು ಅಗ್ರಗಣ್ಯನೂ ಸೃಷ್ಟಿಪ್ರವರ್ತಕನೂ ಆಗಿರುವನು. ಹಾಗೂ ಸಾಯಂಕಾಲದಲ್ಲಿ ತನ್ನ ತೇಜಸ್ಸನ್ನು ಪ್ರಸಿದ್ಧವಾದ ಅಗ್ನಿಯಲ್ಲಿಟ್ಟುಬಿಡುವದರಿಂದ ಅಗ್ನಿನಾಮಕನಾಗಿಯೂ ಸ್ತುತಿಸಲ್ಪಡುವನು. ಮಹಾಕವಿ ಕಾಳಿದಾಸನೂ ಕೂಡ "ದಿನಾಂತೇ ನಿಹಿತಂ ತೇಜಃ ಸವಿತ್ರೇವ ಹುತಾಶನಃ' ಎಂದು ಉಪಮಾನವನ್ನು ನೀಡಿ ಸೂರ್ಯನು ಅಗ್ನಿಯಲ್ಲಿ ತನ್ನ ತೇಜಸ್ಸನ್ನಿಡುವನೆಂದು ವರ್ಣಿಸಿದ್ದಾನೆ. ಹಾಗೆಯೇ ದ್ಯುಲೋಕದಲ್ಲಿರುವ ಸುಪರ್ಣನೆಂಬ ಪಕ್ಷಿಯೆಂದು ಪರಮಾತ್ಮನನ್ನು ಹೊಗಳಿರುವದು "ದ್ವಾಸುಪರ್ಣಾ" "ಸುಪರ್ಣಂ ವಿಪ್ರಾಃ ಕವಯೋ ವಚೋಭಿ"

ಎಂಬೀ ಮಂತ್ರಗಳಲ್ಲಿ ಕಂಡುಬರುತ್ತದೆ. ಸುಪುರ್ಣನಂತೆ ಪ್ರಕಾಶಮಾನನಾಗಿರುವ, ಹಾಗೂ ಸಂಚರಿಸುವ ಸ್ವಭಾವವುಳ್ಳವನು ಸೂರ್ಯನು ಎಂದು ಅರ್ಥಮಾಡಬೇಕು. ಮತ್ತು ಗರಣ(ನುಂಗುವ) ಸ್ವಭಾವವುಳ್ಳವನಾದ್ದರಿಂದ ಗರುತ್ಮಾನ್ ಎಂದೂ ಅರ್ಥ ಮಾಡಿದೆ. ಪ್ರಲಯಕಾಲದಲ್ಲಿ ಪೃಥಿವ್ಯಾದಿಗಳು ತೇಜಸ್ಸಿನಲ್ಲಿ ಲಯವಾಗುವವು. ಸಕಲಜೀವರುಗಳೂ ಆದಿತ್ಯನಲ್ಲಿ ಒಂದಾಗುವರು. ಇಂಥ ಗರುತ್ಮಂತನೀತನು - ಎಂದಭಿಪ್ರಾಯ.

ಈಗ "ಏಕಂ ಸತ್....." ಎಂಬ ಉತ್ತರಾರ್ಧದ ಅರ್ಥವನ್ನು ಅನುಸಂಧಾನ ಮಾಡೋಣ. ವಿಪ್ರರು ಎಂದರೆ ಮೇಧಾವಿಗಳೂ ದೇವತಾತತ್ತ್ವವನ್ನು ಬಲ್ಲವರೂ ಮಂತ್ರದ್ರಷ್ಟಾರರೂ ಆದ ಋಷಿಗಳು ಎಂದರ್ಥ. ಇಂಥ ಮಹನೀಯರು ಈ ಆದಿತ್ಯನೊಬ್ಬನನ್ನೇ ಬಹುಪ್ರಕಾರವಾದ ನಾಮಗಳಿಂದ ಕರೆಯುತ್ತಿರುವರು. ಇದು ಸಾಪೇಕ್ಷವಾಗಿ ಆಗಿರುವ ವ್ಯವಹಾರವು. ಹೇಗೆ ಒಬ್ಬ ವ್ಯಕ್ತಿಯನ್ನು ಹೆಂಡತಿಯು ಗಂಡನೆಂದೂ, ಮಗನು ತಂದೆಯೆಂದೂ, ತಮ್ಮನು ಅಣ್ಣನೆಂದೂ, ತಂದೆಯು ಮಗನೆಂದೂ, ಸೇವಕನು ಬುದ್ಧಿಯವರೆಂದೂ ನೌಕರರು "ಸಾಹೇಬರು" ಎಂದೂ ಸ್ನೇಹಿತನು ಮಿತ್ರನೆಂದೂ ಕರೆಯುವರೋ ಹಾಗೆಯೇ ಸಾಪೇಕ್ಷವಾಗಿ ಆಯಾ ಕರ್ಮನಾಮಗಳಿಂದ ಆದಿತ್ಯನನ್ನು ಬಹುಪ್ರಕಾರವಾಗಿ ಬಲ್ಲವರು ಕರೆಯುತ್ತಾರೆ. ಇದರಿಂದ ಸಿದ್ಧವಾಗುವದೇನೆಂದರೆ : ವೇದಗಳಲ್ಲಿ ಏಕದೇವತಾವಾದವೇ ಪ್ರತಿಪಾದಿಸಲ್ಪಟ್ಟಿದೆ - ಎಂದು ಗೊತ್ತಾಗುತ್ತದೆ. ದೇವರು ಒಬ್ಬನೇ ಎಂದು ಹೇಳುವ ಮಾತು ಈ ವೇದಪ್ರಸಿದ್ಧಿಯಿಂದಲೇ ಬಂದಿದೆ. ನಾನಾ ಹೆಸರುಗಳಿಂದ ವ್ಯವಹರಿಸಲ್ಪಟ್ಟಾಗಲೂ ಏಕದೇವತಾಸಿದ್ಧಾಂತಕ್ಕೆ ಹಾನಿಯಿರುವದಿಲ್ಲ. ಇದರಿಂದ ಎಲ್ಲಾ ಮತಗಳಿಂದ ಪ್ರತಿಪಾದ್ಯನಾದ ದೇವರೂ ಈತನೊಬ್ಬನೇ - ಎಂದು ತಿಳಿಯಬಹುದು. ಹಿಂದೂ - ಸಿಖ್ - ಮುಸಲ್ಮಾನ - ಕ್ರೈಸ್ತ - ಜೈನ - ಬೌದ್ಧಾದಿ ಮತಗಳವರೆಲ್ಲರೂ ಸರ್ವಸಮ್ಮತವಾಗಿ ಅನುಭವಪೂರ್ವಕವಾಗಿ ಸೂರ್ಯನು ಒಬ್ಬನೇ, ಅವನೇ ಪ್ರಪಂಚದ ಬೆಳಕು - ಎಂಬಿದನ್ನು ಒಪ್ಪಿದ್ದಾರೆ. ಸೂರ್ಯನು ನಮಗೆ ಬೇಡ, ಆತನು ಬೆಳಕಲ್ಲ, ಉಷ್ಣನಲ್ಲ; ಅವನ ಕಿರಣಗಳನ್ನು ನಾವು ಮಾನ್ಯ ಮಾಡುವದಿಲ್ಲ - ಎಂದು ಹೇಳುವ ಯಾವ ಮತವೂ ಈವರೆಗೆ ತಲೆಯೆತ್ತಿರುವದಿಲ್ಲ. ಅಷ್ಟೇ ಅಲ್ಲ. ಮತಧರ್ಮಗಳ ಸ್ಥಾಪಕರೂ ಗ್ರಂಥಗಳೂ, ಪ್ರಚಾರಕರೂ, ಅನುಯಾಯಿಗಳೂ ಎಲ್ಲರೂ ಸೂರ್ಯನ ಬೆಳಕಿನಲ್ಲಿಯೇ ತಮ್ಮ ಕಾರ್ಯಗಳನ್ನು ನಿರ್ವಹಿಸಿದ್ದಾರೆ, ಈಗಲೂ ನಿರ್ವಹಿಸುತ್ತಿದ್ದಾರೆ - ಎಂಬಿದು

ಸೂರ್ಯಪ್ರಕಾಶದಷ್ಟೇ ಸತ್ಯವಾದ ಸಂಗತಿಯಾಗಿದೆ. ಸೂರ್ಯನನ್ನು ಕಾಣೆವು - ಎನ್ನುವವರು ಕುರುಡರೆನಿಸುವರೇ ಹೊರತು ಜ್ಞಾನಿಗಳೆನಿಸಲಾರರು. ಇಂಥ ಆದಿತ್ಯನು ಒಬ್ಬನೇ ಎಂಬುದನ್ನು ಬಲ್ಲ ವಿಪ್ರರು ಆತನನ್ನು ನಾನಾ ಹೆಸರುಗಳಿಂದ ಕರೆದರು - ಎಂಬುದು ವೇದವು ನಮಗೆ ತಿಳಿಸುತ್ತಿರುವ ಅಪೂರ್ವವಾದ ಉಪದೇಶವಾಗಿದೆ.

ಈಗ ಈತನನ್ನೇ ಅಗ್ನಿಯೆಂದು ಮತ್ತೊಮ್ಮೆ ತಿಳಿಸಲಾಗಿದೆ. ಈ ಮಂತ್ರದಲ್ಲಿ ಎರಡನೆಯಬಾರಿಗೆ ಬಂದಿರುವ ಅಗ್ನಿಶಬ್ದಕ್ಕೆ ವೈದ್ಯುತಾಗ್ನಿ - ಎಂದು ಅರ್ಥ ಮಾಡಿದೆ. ಮಿಂಚಿನ ಹಾಗೂ ವಿದ್ಯುಚ್ಛಕ್ತಿಯ ರೂಪದಲ್ಲಿರುವವನೂ ಸೂರ್ಯನೇ ಎಂದರ್ಥ. ಬ್ರಹ್ಮವು ಅಧಿದೈವವಾಗಿ ಸೋಪಾಧಿಕವಾಗಿ ತೋರಿಕೊಂಡಿರುವ ರೂಪವೇ ವಿದ್ಯುತ್ತು - ಎಂದು ಉಪನಿಷತ್ತಿನಲ್ಲಿದೆ. ಅನಂತರ ಯಮ, ಮಾತರಿಶ್ವನೆಂದೂ ಕರೆಯುತ್ತಾರೆ - ಎಂಬಿದರ ಅಭಿಪ್ರಾಯವು ಹೀಗಿದೆ. ''ರಶ್ಮೀನಾಂ ಸಂಯಮನಾದ್‌ಯಮಃ'' ರಶ್ಮಿಗಳನ್ನೆಲ್ಲ ತನ್ನೊಳಕ್ಕೆ ಎಳೆದುಕೊಳ್ಳುವವನು ಹಾಗೂ ಎಲ್ಲರನ್ನೂ ನಿಯಮನ ಮಾಡುವದರಿಂದಲೂ ಯಮನು ಎಂದು ಹೇಳಬಹುದು. 'ಮಾತರಿ ಎಂದರೆ ಅಂತರಿಕ್ಷದಲ್ಲಿ ಶ್ವಯತಿ-ಗಚ್ಛತಿ' (ಹೋಗುತ್ತಾನೆ) ಎಂಬ ವ್ಯುತ್ಪತ್ತಿಯಿಂದ ಆದಿತ್ಯನು ಮಾತರಿಶ್ವನೆನಿಸಿರುವನು. ಹೀಗೆ ನಾನಾ ನಾಮಗಳಿಂದ ಸ್ತುತಿಸಲ್ಪಡುವ ಆದಿತ್ಯನು ಈ ಮಂತ್ರದಲ್ಲಿ ಹೇಳಲ್ಪಟ್ಟಿರುವನೆಂದು ತಿಳಿಯಬೇಕು.

**ಕೃಷ್ಣಂ ನಿಯಾನಂ ಹರಯಃ ಸುಪರ್ಣಾ**
**ಅಪೋ ವಸಾನಾ ದಿವ ಮುತ್ಪತಂತಿ।**
**ತ ಆವವೃತ್ರನ್ ಸದನಾದೃತಸ್ಯಾದಿದ್**
**ಘೃತೇನ ಪೃಥಿವೀ ವ್ಯುದ್ಯತೇ ॥ ೨೧ ॥**

**''ಕಪ್ಪುವರ್ಣದಿಂದ ಕೂಡಿ ಚಲಿಸುತ್ತಿರುವ ಮೋಡವನ್ನು ಶೋಭನವಾದ ರಶ್ಮಿಗಳುಳ್ಳ ಸೂರ್ಯನ ಕುದುರೆಗಳು ನೀರಿನಿಂದ ತುಂಬುವವುಗಳಾಗಿ ದ್ಯುಲೋಕದ ಕಡೆಗೆ ಸಾಗುತ್ತಿರುವವು. ಆ ರಶ್ಮಿಗಳು ಉದಕಾಧಾರವಾದ ಆದಿತ್ಯಮಂಡಲದಿಂದ ಹಿಂದಿರುಗುತ್ತವೆ. ಅನಂತರವೇ ನೀರಿನಿಂದ ಭೂಮಿಯು ತೋಯಿಸಲ್ಪಡುತ್ತದೆ'' ಎಂದರ್ಥ.**

ಈ ಸೌರಸೂಕ್ತಗಳಲ್ಲಿ ಸೂರ್ಯಭಗವಂತನನ್ನು ಹೊಗಳುತ್ತಿರುವಂತೆಯೇ ಅವನ ಮಹಿಮೆಯಾದ ಕಿರಣಗಳನ್ನೂ ಪರಿವಾರಗಳಾದ ಕುದುರೆಗಳನ್ನೂ ಸ್ತೋತ್ರಮಾಡುತ್ತಿರಲಾಗಿದೆ. ಮೋಡಗಳು ಮಳೆಗರೆಯಬೇಕಾದರೆ ಅವುಗಳಲ್ಲಿ ಚೆನ್ನಾಗಿ ನೀರು ತುಂಬಿಕೊಂಡಿರಬೇಕು. ಹಾಗೆ ತುಂಬಿಕೊಳ್ಳಲು ಸೂರ್ಯನ ಕಿರಣಗಳು ಕೆಲಸಮಾಡುವವು. ಕಿರಣಗಳನ್ನೇ ಕುದುರೆಗಳೆಂದು ಭಾವಿಸಿ ಅವು

ದ್ಯುಲೋಕವಾಸಿಯಾದ ಸೂರ್ಯನ ಕಡೆಗೆ ತಿರುಗಿಕೊಂಡು ಅಲ್ಲಿಂದ ಶಕ್ತಿಯನ್ನು ಪಡೆದು ನೀರನ್ನು ಸಂಗ್ರಹಿಸಿ ಮೋಡಗಳಲ್ಲಿ ತುಂಬುತ್ತವೆ - ಎಂದು ಇಲ್ಲಿ ಸ್ತುತಿಸಲಾಗಿದೆ. ಇದು ಹೇಗೆಂದರೆ : ಕಿರಣಗಳ ಮೂಲಕವೇ ಭೂಮಿಗೂ ಸೂರ್ಯನಿಗೂ ಸಂಬಂಧವಾಗಿದೆ. ಬೆಳಕಿನ ಕಿರಣಗಳ ವ್ಯಾಪ್ತಿಯು ಸರ್ವತೋಮುಖವಾಗಿದ್ದು ಅವು ಒಮ್ಮೆ ಭೂಮಿಯ ಮೇಲಿರುವ ಸಮುದ್ರದ ನೀರನ್ನು ಸ್ವೀಕರಿಸಿ ಮೇಲಕ್ಕೇರುವವುಗಳಾಗಿ ಮೋಡಗಳಿಗೆ ತಲುಪಿಸುವವು. ಆಗ ಅಂತರಿಕ್ಷದಲ್ಲಿರುವ ಮೋಡಗಳು ಕಪ್ಪಿಟ್ಟು ಮಳೆಗರೆಯುವವು. ಇದು ಎಲ್ಲಾ ಕಾಲದಲ್ಲಿಯೂ ಸಂಭವಿಸುವದಿಲ್ಲ. ಸೂರ್ಯನು ದೇವಲೋಕವನ್ನು ಬೆಳಗದೆ ಇರುವಾಗ ಹಾಗೂ ಮನುಷ್ಯಲೋಕದಲ್ಲಿ ಆ ಕಾಲವನ್ನು ದಕ್ಷಿಣಾಯನವೆಂದು ವ್ಯವಹರಿಸುವಾಗ ಸಂಭವಿಸುತ್ತದೆ. ಮಳೆಗಾಲವು ದಕ್ಷಿಣಾಯನದಲ್ಲಿಯೇ ಸಂಭವಿಸುತ್ತದೆಯಷ್ಟೆ ? ಆದ್ದರಿಂದ ಆ ಕಾಲದಲ್ಲಿ ಮೋಡಗಳ ಸಂಚಾರವನ್ನೂ ಅವುಗಳಿಗೆ ಉದಕಪೂರಣವನ್ನೂ ನಿರ್ವಹಿಸುವ ಸೂರ್ಯನ ರಶ್ಮಿಗಳೆಂಬ ಕುದುರೆಗಳನ್ನು ಸ್ತೋತ್ರಮಾಡುತ್ತೇನೆ - ಎಂಬಿದು ಋಷಿಯ ಅಭಿಪ್ರಾಯವಾಗಿದೆ. ಹಾಗೆಯೇ ಈ ಮಹಾಕಾರ್ಯವು ಭೂಮಿಗೆ ಪರಮೋಪಕಾರವಾಗಿದೆ. ಹೇಗೆಂದರೆ ಮಳೆಗರೆಯದೆ ಭೂಮಿಯು ತೇವವಾಗುವದಿಲ್ಲ. ತೇವವಿಲ್ಲದೆ ಪೈರುಗಳು ಬೆಳೆಯುವದಿಲ್ಲ. ಒಂದು ರೀತಿಯಿಂದ ನೋಡಿದರೆ ಭೂಮಿಯ ತೇವಾಂಶವು ನೀರಿನದೇ ಆಗಿದ್ದು ಅದು ಸೂರ್ಯನಿಂದಲೇ ಅನುಗ್ರಹಿಸಲ್ಪಟ್ಟದ್ದಾಗಿದೆ. ಹಾಗೆಯೇ ಪೈರುಗಳ ಬೆಳವಣಿಗೆಯ ದೃಷ್ಟಿಯಿಂದ ಸೂರ್ಯಕಿರಣಗಳ ಉಷ್ಣಾಂಶವೂ ಪೋಷಕಸಾಮಗ್ರಿಯೇ ಆಗಿದೆ. ಆದ್ದರಿಂದ ಅಧೋಮುಖವಾಗಿ ಬೀಳುವ ಮಳೆಯಿಂದ ಪೃಥಿವಿಯನ್ನು ಶೀತವಾಗಿ ಮಾಡಿದ್ದರ ಜೊತೆಗೆ ಊರ್ಧ್ವಮುಖವಾಗಿ ಸಸ್ಯಗಳು ಬೆಳೆಯಲು ಸಹ ಬೇಕಾದ ಉಷ್ಣಾಂಶವನ್ನೂ ಸೂರ್ಯಕಿರಣಗಳೇ ನೀಡುತ್ತಿವೆ. ಇಂಥ ಸರ್ವತೋಮುಖವಾದ ಹಾಗೂ ಜಗತ್ತಿನ ಜೀವನಕ್ಕೆ ಅತ್ಯಂತ ಪ್ರಯೋಜನಕಾರಿಗಳಾದ ಆದಿತ್ಯಕಿರಣಗಳಿಗೆ ವಂದನೆಗಳು - ಎಂದು ಅಭಿಪ್ರಾಯ.

**ಹಂಸಃ ಶುಚಿಷದ್ ವಸುರನ್ತರಿಕ್ಷಸದ್ ಹೋತಾ ವೇದಿಷದ್**
**ಅತಿಥಿರ್ದುರೋಣಸತ್।**
**ನೃಷದ್ವರಸದೃತಸದ್ ವ್ಯೋಮಸದಬ್ಜಾ ಗೋಜಾ ಋತಜಾ**
**ಅದ್ರಿಜಾ ಋತಮ್ ॥ ೨೨ ॥**

**"ಹಂಸನು, ಶುಚಿಷದನು, ವಸುವು, ಅಂತರಿಕ್ಷನಿವಾಸಿಯು, ಹೋತೃವು, ವೇದಿಯಲ್ಲಿ ಕುಳಿತಿರುವವನು, ಅತಿಥಿಯು,; ಗೃಹದಲ್ಲಿರುವವನು; ಮನುಷ್ಯರಲ್ಲಿರುವವನು ;**

**ಮಂಡಲದಲ್ಲಿರುವವನು. ಋತದಲ್ಲಿರುವವನು ; ಆಕಾಶದಲ್ಲಿರುವವನು; ಅಬ್ಜನು, ಗೋಜನು, ಋತಜನು, ಅದ್ರಿಜನು, ಋತನು".**

ಈ ಮಂತ್ರವು ಕಠೋಪನಿಷತ್ತಿನಲ್ಲಿಯೂ ಬಂದಿದೆ. ಅಲ್ಲಿ ಭಾಷ್ಯಕಾರ ಶ್ರೀ ಶಂಕರರು ಈ ಮಂತ್ರಕ್ಕೆ ಪರಮಾತ್ಮನ ಪರವಾಗಿ ಅರ್ಥಮಾಡಿರುತ್ತಾರೆ. ಇಲ್ಲಿ ಶ್ರೀ ಸಾಯಣಾಚಾರ್ಯರು ಈ ಅರ್ಥವನ್ನೂ ಒಪ್ಪಿ ಪರಬ್ರಹ್ಮಮಂತ್ರಪ್ರತಿಪಾದ್ಯನಾದ ಆದಿತ್ಯನನ್ನು ಇಲ್ಲಿ ಹೊಗಳಿದೆ. ಏಕೆಂದರೆ ಆದಿತ್ಯನೆಂದರೂ ಪರಬ್ರಹ್ಮವೆಂದರೂ ಒಂದೇ-ಎಂದು ತಿಳಿಸಿದ್ದಾರೆ. ಈ ಮಂತ್ರವನ್ನು ಕರ್ಮಕಾಂಡದವರು ನಿತ್ಯಕರ್ಮವಾದ ಮಾಧ್ಯಾಹ್ನಿಕಸಂಧ್ಯಾಕಾಲಕ್ಕೆ ಸೂರ್ಯನಿಗೆ ಅರ್ಘ್ಯಪ್ರದಾನಮಾಡುವದಕ್ಕಾಗಿ ವಿನಿಯೋಗಿಸುತ್ತಾರೆ. ಆದ್ದರಿಂದ ಸೌರಸೂಕ್ತದೊಳಗೆ ಅಡಕವಾಗಿ ಹೊಂದಿಕೊಂಡಿರುವ ಈ ಮಂತ್ರವನ್ನು ಈಗ ಸೂರ್ಯಪರವಾಗಿಯೇ ವಿವರಿಸಲಾಗುವದು. ಪರಮಾತ್ಮಪರವಾದ ಅರ್ಥವನ್ನು ತಿಳಿಯಲು ವಾಚಕರು ಕಠೋಪನಿಷದ್ಭಾಷ್ಯವನ್ನೇ ನೋಡಬೇಕಾಗಿ ಪ್ರಾರ್ಥನೆ. ಸೂರ್ಯಭಗವಂತನು ಯಾವಾಗಲೂ ಸಂಚರಿಸುತ್ತಿರುವನಾದ್ದರಿಂದ **ಹಂಸ**ನೆನಿಸಿರುವನು. ಹಂತಿ ಎಂಬ ಕ್ರಿಯಾಪದಕ್ಕೆ ಗಚ್ಛತಿ ಎಂದು ಅರ್ಥವಿದೆ. ಏಕಾಕಿಯಾಗಿ ತಾನೊಬ್ಬನೇ ಸಂಚರಿಸುವ ಸೂರ್ಯನಿಗೆ ಸಮಾನನಾದ ಮತ್ತೊಬ್ಬನು ಯಾವನಿದ್ದಾನು ? ವಾಯುದೇವನೂ ಸದಾ ಸಂಚಾರಿಯೇನೋ ನಿಜ. ಆದರೆ ಸೂರ್ಯನಿಗಿಂತ ಅವನು ಹಿರಿಯನಾಗಿಯೂ ವ್ಯಾಪಕನಾಗಿಯೂ ಇದ್ದರೂ ಪ್ರತ್ಯಕ್ಷಗೋಚರನಲ್ಲ. ಇಲ್ಲಿ ಹಂಸನೆಂದರೆ ಪ್ರತ್ಯಕ್ಷಗೋಚರನಾಗಿ ಸದಾ ಸಂಚರಿಸುವವನಾಗಿರುವ ಸೂರ್ಯನು ಪೃಥಿವೀ, ಅಪ್ಪು, ತೇಜಸ್ಸುಗಳ ಪೈಕಿ ಉತ್ಕೃಷ್ಟತೇಜೋಮಯ ದೇವತೆಯಾಗಿರುವನು. ಆದ್ದರಿಂದ ಹಂಸನೆಂದು ಹೊಗಳಿದೆ. ಹಾಗೆಯೇ ಈತನು **ಶುಚಿಷದ**ನು - ಎಂದರೆ ಶುಚಿಯಾದ ತೇಜೋಮಯವಾದ ದ್ಯುಲೋಕದಲ್ಲಿ ವಾಸಿಸುತ್ತಿರುವವನು ಎಂದರ್ಥ. ಮತ್ತು ಈತನು **ವಸುವು** ಎಲ್ಲೆಲ್ಲಿಯೂ ವಾಸಿಸುವವನು. ಇಲ್ಲಿ ಭಾಷ್ಯಕಾರರು ಸರ್ವದೇಶನಿವಾಸಿಯಾದ ವಾಯುವೇ ಸೂರ್ಯನೆಂದು ತಿಳಿಸಿದ್ದಾರೆ. ಹೇಗೆಂದರೆ ವಾಯುರೂಪದಿಂದಲೂ ಇವನೇ ಇದ್ದುಕೊಂಡಿರುವನೆಂದಭಿಪ್ರಾಯ. ಸ್ತುತಿಪ್ರಕರಣವಾದ್ದರಿಂದ ವಾಯುವೆಂಬ ವ್ಯಾಪಕದೇವತಾವಾಚಕವಾದ ಶಬ್ದದಿಂದಲೂ ಸೂರ್ಯನನ್ನು ಹೆಸರಿಸಬಹುದಾಗಿದೆ. ಅನಂತರ ಇವನನ್ನು **ಅಂತರಿಕ್ಷಸದನು** - ಎಂದು ಹೊಗಳಿದೆ. ಅಂತರಿಕ್ಷವೇ ಈತನಿಗೆ ಮನೆಯು. ಆದ್ದರಿಂದ ಅಂತರಿಕ್ಷಸದನೆಂದಭಿಪ್ರಾಯ. ಅನಂತರ ಭೂಮಿಯಲ್ಲಿ ನಾನಾ ರೂಪದಿಂದ ಈತನು ಸನ್ನಿಹಿತನಾಗಿರುವನೆಂದು ತಿಳಿಸಲು ಉಪಕ್ರಮಿಸಿ ಪ್ರಥಮವಾಗಿ **ಹೋತೃ**ವೆಂದು ಸ್ತುತಿಸಿದೆ. ಯಜ್ಞದಲ್ಲಿ ದೇವತೆಗಳನ್ನು

ಕರೆಯುವವನ್ನು ಹೋತೃವೆನ್ನುವರು. ಆದಿತ್ಯನೇ ಹೋತೃರೂಪದಿಂದಿದ್ದು ಕೊಂಡಿರುತ್ತಾನೆ - ಎಂದರ್ಥ. **ವೇದಿಷದನು** ಎಂದರೆ ಯಜ್ಞವೇದಿಕೆಯಲ್ಲಿ ಗಾರ್ಹಪತ್ಯಾಗ್ನಿರೂಪದಿಂದ ಇದ್ದುಕೊಂಡಿರುವವನು - ಎಂದರ್ಥ. **ಅತಿಥಿಯು** - ಎಂದರೆ ಹೇಗೆ ಗೃಹಸ್ಥನ ಮನೆಗೆ ಅತಿಥಿಯು ಬಂದರೆ ಪೂಜ್ಯನಾಗುವನೋ ಹಾಗೆ ಆದಿತ್ಯನು ಕರ್ಮಿಗಳಿಗೆಲ್ಲ ಅಗ್ನಿಯ ರೂಪದಿಂದ ಸರ್ವದಾ ಪೂಜ್ಯನಾಗಿರುವವನು ಎಂದಭಿಪ್ರಾಯ. ಇನ್ನು **ಆದಿತ್ಯನು ದುರೋಣ**ವೆಂದರೆ ಮನೆಯು ; ಅಲ್ಲಿ ಅಡುಗೆಯೇ ಮುಂತಾದವುಗಳಿಗೆ ಸಹಾಯಕನಾಗಿ - ಲೌಕಿಕವಾದ ಅಗ್ನಿರೂಪದಿಂದ ಇದ್ದುಕೊಂಡಿರುವನಾದ್ದರಿಂದ ದುರೋಣಸದನೆನಿಸಿರುವನು. ಮನುಷ್ಯರಲ್ಲೆಲ್ಲ ಇರುವವನಾದ್ದರಿಂದ **ನೃಷದನು.** ವರಣೀಯವಾದ ಆದಿತ್ಯ ಮಂಡಲದಲ್ಲಿರುವದರಿಂದ **ವರಸದನು.** ಋತವೆಂದರೆ ಯಜ್ಞವೆಂದೂ ಅಭಿಪ್ರಾಯವಿದೆ. ಯಜ್ಞಕ್ಕೆ ಅಭಿಮಾನಿಯಾಗಿರುವ ಆದಿತ್ಯನು **ಋತಸದನು.** ಅಂತರಿಕ್ಷದಲ್ಲಿ ವಾಯುರೂಪದಿಂದಿರುವವನಾದ್ದರಿಂದ **ವ್ಯೋಮಸದನು.** ನೀರಿನಲ್ಲಿ ಹುಟ್ಟಿರುವ ಶಂಖ, ರತ್ನಗಳ ರೂಪನಾದ್ದರಿಂದ **ಅಬ್ಜನು.** ಕಿರಣಗಳಿಂದ ಹೊರತೋರುವವನಾದ್ದರಿಂದ **ಗೋಜನು.** ಸತ್ಯರೂಪನಾಗಿ ಎಲ್ಲರಿಗೂ ಕಾಣಿಸಿಕೊಳ್ಳುವದರಿಂದ **ಋತಜನು.** ಬೆಟ್ಟದಲ್ಲಿ ಹುಟ್ಟುವ ವಸ್ತುಗಳಲ್ಲಿರುವದರಿಂದ ಅದ್ರಿಜನು. ಅಬಾಧಿತಸತ್ಯರೂಪನಾದ ಆದಿತ್ಯನು **ಋತ**ನೆಂದು ಕರೆಯಲ್ಪಡುವನು.

**ಯತ್ತ್ವಾ ಸೂರ್ಯ ಸ್ವರ್ಭಾನುಸ್ತಮಸಾ ವಿಧ್ಯದಾಸುರಃ ।**
**ಅಕ್ಷೇತ್ರವಿದ್ಯಥಾ ಮುಗ್ಧೋ ಭುವನಾನ್ಯದೀಧಯುಃ ॥ ೨೩ ॥**

**"ಎಲೈ ಸೂರ್ಯನೆ, ಅಸುರನಾದ ರಾಹುವು ಕತ್ತಲೆಯಿಂದ ನಿನ್ನೊಡನೆ ಯಾವಾಗ ಸೆಣಸುವನೋ ಆಗ ಲೋಕಗಳು ತಮ್ಮ ಸ್ಥಾನವನ್ನು ತಿಳಿಯದೆ ಮೂಢವಾಗುವವು" ಎಂದು ಸರಳವಾದ ಅರ್ಥ.**

ಇಲ್ಲಿ ಛಾಯಾಗ್ರಹವಾದ ರಾಹುವೆಂಬುವನು ಸೂರ್ಯನನ್ನು ಮುಚ್ಚುವನೆಂಬ ವ್ಯಾವಹಾರಿಕದೃಷ್ಟಿಯ ವರ್ಣನೆಯಿದೆ. ಸೂರ್ಯಗ್ರಹಣಕಾಲದಲ್ಲಿ ರಾಹು ಅಥವಾ ಕೇತುವೆಂಬ ಛಾಯಾಗ್ರಹವು ಸೂರ್ಯನನ್ನು ಮುಟ್ಟುವದೆಂದೂ ಅದರಿಂದ ಮೈಲಿಗೆಯಾಗುವದೆಂದೂ ಆಗ್ಗೆ ಸ್ನಾನಮಾಡಿ ಜಪ-ದಾನಗಳನ್ನು ಮಾಡಬೇಕೆಂದೂ ಕರ್ಮಕಾಂಡದ ಆದೇಶವಿದೆ. ಇದು ಅಜ್ಞರಾದ ಜನರನ್ನು ಕುರಿತು ಹೇಳಿದ್ದೆಂಬುದು ಜ್ಞಾನಿಗಳ ಅಭಿಪ್ರಾಯವು. ಮೂಢರಾದವರಿಗೆ ಈ ದೃಷ್ಟಿಯೇ ಇದ್ದುಕೊಂಡಿರುವದು ಸಹಜವಾಗಿರುವದರಿಂದ ಮತ್ತು ಸೂರ್ಯನಿಗೆ ರಾಹುಗ್ರಹಣವು ಸಂಭವಿಸುವದು ಭೂಲೋಕದಲ್ಲಿರುವ ಜನರ ದೃಷ್ಟಿಯಿಂದ ಪ್ರತ್ಯಕ್ಷವಾಗಿರುವದರಿಂದ ರಾಹುಸ್ಪರ್ಶವು

ಒಂದು ಪರ್ವಕಾಲವೆಂದೇ ಪರಿಗಣಿಸಲ್ಪಟ್ಟಿದೆ. ಆದರೆ ಸೂರ್ಯತತ್ತ್ವವನ್ನು ಬಲ್ಲ ಋಷಿಗಳ ಅಭಿಪ್ರಾಯವೇನೆಂದರೆ; ನಿಜವಾಗಿಯೂ ಸೂರ್ಯನನ್ನು ರಾಹುವು ಹಿಡಿದಿರುವದಿಲ್ಲ. ರಾಹುವೆಂಬುವನು ಇದ್ದಾನೆಂದು ಗೊತ್ತಾಗಬೇಕಾದರೆ ಸೂರ್ಯನ ಆಶ್ರಯವೂ ಬೆಳಕೂ ಬೇಕು. ಸೂರ್ಯನಿಗೂ ರಾಹುವಿಗೂ ಬೇಕಾದಷ್ಟು ಅಂತರವಿದ್ದರೂ ಜನರ ಕಣ್ಣಿಗೆ ಸೂರ್ಯನು ಮರೆಯಾದಂತೆ ಆಗ್ಗ ಕಂಡುಬರುತ್ತಾನೆ. ಆ ಸಮಯದಲ್ಲಿಯೂ ಸೂರ್ಯನು ಸ್ವಯಂಪ್ರಕಾಶನಾಗಿಯೇ ಇದ್ದಾನೆ. ಹೀಗಿದ್ದರೂ ಜನರ ಮೌಢ್ಯವು ಸೂರ್ಯನ ವಿಷಯಕ್ಕೆ ಲೋಕಸಿದ್ಧವಾಗಿದೆ. ಆದ್ದರಿಂದ ಆ ಭಗವಾನ್ ಸೂರ್ಯದೇವನನ್ನು ರಾಹುಸ್ಪರ್ಶವೆಂಬ ಭ್ರಾಂತಿ ಜ್ಞಾನದಿಂದ ವಿವೇಚನೆಮಾಡಿಕೊಂಡು ಪರಿಶುದ್ಧವಾದ ಜ್ಯೋತಿಃಸ್ವರೂಪನನ್ನಾಗಿಯೇ ತಿಳಿಯಬೇಕು. ಅವನಿಗೆ ಎಂದೆಂದಿಗೂ ಯಾವ ಕತ್ತಲೆಯ ಭಯವೂ ಇರುವದಿಲ್ಲ. ಸೂರ್ಯನನ್ನು ಕಾಣದೆ ಇರುವಾಗ ಜನರು ಕತ್ತಲೆಯೆಂಬ ಪದಾರ್ಥವೊಂದಿದೆ - ಎಂದು ಕಲ್ಪಿಸುತ್ತಾರೆ. ಮೀಮಾಂಸಕರು "ನೀಲಂ ತಮಃ ಚಲತಿ" ಎಂದು ಅದಕ್ಕೆ ಕಪ್ಪೆಂಬ ಗುಣವನ್ನೂ ಚಲನವೆಂಬ ಕ್ರಿಯೆಯನ್ನೂ ಅಂಟಿಸಿದ್ದಾರೆ. ಹೀಗೆ ಕಲ್ಪಿತವಾದ ಪದಾರ್ಥವು ಕಡೆಗೆ ಕಲ್ಪನೆಮಾಡಿದವನನ್ನೇ ಆಶ್ರಯಿಸಿ ನಿಜವನ್ನು ಮರೆಮಾಚಿ ಮೋಹವನ್ನುಂಟುಮಾಡಿಬಿಡುವದು. ಇಂಥ ಮೋಹಪರಿಹಾರವು ವಸ್ತುಜ್ಞಾನದಿಂದ ಮಾತ್ರ ಸಾಧ್ಯವಾಗಿರುವದರಿಂದ ಬಲ್ಲವರ ಉಪದೇಶದಿಂದ ವಸ್ತುತತ್ತ್ವವನ್ನು ಅರಿತುಕೊಂಡು ಉದ್ಧಾರವಾಗಬೇಕು. ಸಾಮಾನ್ಯಜನರಿಗೆ ಇದು ಸಾಧ್ಯವಾಗದ್ದರಿಂದ ಕತ್ತಲೆಯಲ್ಲೇ ಜೀವಿಸುತ್ತಾ ತಮ್ಮ ನಿಜವಾದ ಆಶ್ರಯಸ್ಥಾನವನ್ನು ಕಾಣದೆ ತಡಕಾಡುತ್ತಿರುವರು. ಸೂರ್ಯನನ್ನು ಸ್ತುತಿಸುವ ನೆಪದಲ್ಲಿ ಈ ವಿಚಾರವನ್ನು ಇಲ್ಲಿ ಮಂತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಸೂರ್ಯನೇ ಜ್ಞಾನಕ್ಕೆ ಪ್ರತಿನಿಧಿಯು. ಆದ್ದರಿಂದ ಸೂರ್ಯನನ್ನು ಬಳಿಸಾರಿ ಕತ್ತಲೆಯ ಕಾಟದಿಂದ ಪಾರಾಗಬೇಕು. ರಾಹುವೆಂಬ ತಮಸ್ಸನ್ನೂ ದಾಟಿ ಕೃತಕೃತ್ಯರಾಗಬೇಕು - ಎಂದಭಿಪ್ರಾಯ.

**ಯದದ್ಯ ಸೂರ್ಯ ಬ್ರವೋಽನಾಗಾ ಉದ್ಯನ್ಮಿತ್ರಾಯ**
**ವರುಣಾಯ ಸತ್ಯಮ್ ।**
**ವಯಂ ದೇವತ್ರಾದಿತೇ ಸ್ಯಾಮ ತವ ಪ್ರಿಯಾಸೋ**
**ಅರ್ಯಮನ್ ಗೃಣಂತಃ ॥ ೨೪ ॥**

**"ಎಲೈ ಸೂರ್ಯನೆ, ನೀನು ಉದಯಿಸುತ್ತಾ ಈಗ ಅನುಷ್ಠಾನಕಾಲದಲ್ಲಿ ನಮ್ಮನ್ನು ಕುರಿತು ಅಪಾಪರು - ಎಂದು ದೇವತೆಗಳ ನಡುವೆ ಹೇಳಿಬಿಡುವೆಯಾದರೆ ಮಿತ್ರ ವರುಣರುಗಳಿಗೆ ನಾವು ಅಪರಾಧಿಗಳಲ್ಲದವರಾಗಿಬಿಡುವೆವು. ಮತ್ತು ಎಲೈ ಅರ್ಯಮನೆ, ನಿನ್ನನ್ನು ಸ್ತೋತ್ರಮಾಡುವವರಾಗಿ ನಿನ್ನ ಪ್ರೀತಿಪಾತ್ರರೂ ಆಗುವೆವು" ಎಂದಭಿಪ್ರಾಯ.**

ದೇವತೆಗಳಲ್ಲೆಲ್ಲ ಸೂರ್ಯನಿಗೆ ಬಹಳ ಮುಖ್ಯಸ್ಥಾನವಿದೆ. ಆತನ ಮಾತಿಗೆ ಎಲ್ಲರೂ - ಎಂದರೆ ಯಮನೂ ಸಹ ಪೂರ್ಣಗೌರವವನ್ನು ಕೊಡುತ್ತಾನೆ. ಮನುಷ್ಯನಿಗೆ ಸಂಸಾರದಲ್ಲಿ ಸಂಭವಿಸಿರುವ ಭಯಗಳಲ್ಲಿ ಮೃತ್ಯುಭಯವೇ ದೊಡ್ಡದು. ಅವನಿಗಾದರೂ ನಾವು ಅಷ್ಟೊಂದು ಏಕೆ ಹೆದರಬೇಕು ? ಎಂದರೆ ಸಮವರ್ತಿಯೆನಿಸಿದ ಆತನು ಕಟ್ಟುನಿಟ್ಟಾಗಿ ಪಾಪಪುಣ್ಯಗಳನ್ನು ಗಣಿಸಿ ಶಿಕ್ಷಿಸಿ ಬಿಡುತ್ತಾನೆ. ಆದ್ದರಿಂದ ಪಾಪಭಯವೇ ಮೃತ್ಯುಭಯಕ್ಕೆ ಮೂಲವಾಗಿರುತ್ತದೆ. ನಮ್ಮ ಪಾಪಪುಣ್ಯಕರ್ಮಗಳಿಗೆಲ್ಲ ಸೂರ್ಯನೇ ಸಾಕ್ಷಿಯಾಗಿರುವನು. ಆದ್ದರಿಂದ ಆತನು ದಿನಕ್ಕೊಮ್ಮೆ ತಾನು ಉದಯಿಸುವಾಗ ಉಳಿದ ಎಲ್ಲಾ ದೇವತೆಗಳ ಸಮಕ್ಷಮದಲ್ಲಿ ನಮ್ಮ ವಿಚಾರವಾಗಿ ಅಧಿವಚನ (ಪಕ್ಷಪಾತವಚನ)ವನ್ನು ಹೇಳಿದ್ದೇ ಆದರೆ ನಮಗೆ ಎಲ್ಲಾ ದೇವತೆಗಳ ಅನುಗ್ರಹವೂ ದೊರಕಿದಂತೆಯೇ ಸರಿ. ಆದರೆ ಸೂರ್ಯನಾದರೂ ಹೀಗೆ ಪಕ್ಷಪಾತವನ್ನು ಹೇಗೆ ಮಾಡಿಯಾನು ? ಎಂದರೆ ಹಾಗಲ್ಲ. ನಮ್ಮ ಪಾಪಗಳನ್ನು ಕಳೆಯುವ ಸಾಮರ್ಥ್ಯವು ಆತನಿಗಿದೆ. ನಾವು ಅವನನ್ನೇ ಭಜಿಸುವೆವಾದರೆ ನಮ್ಮ ಪಾಪಬುದ್ಧಿಯನ್ನೂ ಕಳೆದು ಪವಿತ್ರರನ್ನಾಗಿ ಮಾಡಿ ಅನಂತರವೇ ನಮ್ಮ ವಿಷಯಕ್ಕೆ ಅಧಿವಚನವನ್ನು ಹೇಳಬಲ್ಲನು. ಆಗ ಇದ್ದದ್ದನ್ನೇ ಹೇಳಿದಂತೆ ಆಗುವದು. ಹೀಗೆ ಸೂರ್ಯನು ನಮ್ಮಲ್ಲಿ ಕರುಣೆಯನ್ನು ತೋರಲೆಂದು ಇಲ್ಲಿ ಪ್ರಾರ್ಥಿಸಲಾಗಿದೆ. ಸೂರ್ಯನು ನಮ್ಮನ್ನು ಶಿಫಾರಸುಮಾಡುವಂತೆ - ಎಂದರೆ "ನಾವು ಪಾಪಿಗಳಲ್ಲ" ಎಂದು ಯೋಗ್ಯತಾಪತ್ರವನ್ನು ನೀಡುವಂತಾಗಬೇಕಾದರೆ ನಾವು ಪ್ರತಿದಿನವೂ ಎರಡೂ ಸಂಧ್ಯಾವೇಳೆಗಳಲ್ಲಿ ಆಯಾ ಹಗಲು - ರಾತ್ರಿಗಳಲ್ಲಿ ಮಾಡಿರಬಹುದಾದ ಪಾಪಗಳನ್ನು ಆತನಿಗೇ ಒಪ್ಪಿಸಿಬಿಡಬೇಕು. ಕಸವನ್ನೆಲ್ಲ ಗುಡಿಸಿ ಬೆಂಕಿಗೆ ಹಾಕಿಬಿಟ್ಟರೆ ಸುಟ್ಟುಬೂದಿಯಾಗುವಂತೆಯೇ ಸೂರ್ಯದೇವನಲ್ಲಿ ಅರ್ಪಿಸಲ್ಪಟ್ಟ ನಮ್ಮ ಪಾಪಗಳು ನಾಶವಾಗಿಬಿಡುವವು. **ಇದೇ ಸಂಧ್ಯಾವಂದನೆಯ ರಹಸ್ಯವು.** ತ್ರಿಕಾಲದಲ್ಲಿಯೂ ಯಾವನು ಸರಿಯಾಗಿ ಸಂಧ್ಯೆಯನ್ನಾಚರಿಸುವನೋ ಅವನು ಮೃತ್ಯುವನ್ನು ಕೂಡ ಹೆದರಿಸಬಲ್ಲನು. ಆದ್ದರಿಂದ ಸೂರ್ಯದೇವನನ್ನು ಮೊರೆಹೋಗುವಂಥ ಅನುಷ್ಠಾನವನ್ನು ನಾವು ಬಿಡಬಾರದು. ಹೀಗೆ ನಾವು ಪ್ರತಿದಿನವೂ ಆ ದೇವನನ್ನು ಭಜಿಸುವೆವಾದರೆ ಆತನಿಗೆ ಅತ್ಯಂತಪ್ರಿಯರೂ ಆಗಿಬಿಡುವೆವು. ಅವನ ಚಿಂತನೆಯೇ ನಮ್ಮ ಮನಸ್ಸನ್ನಾವರಿಸಿಬಿಟ್ಟಿದ್ದರೆ ನಾವು ಪಾಪದ ವಿಚಾರವಾಗಿ ಯೋಚಿಸುವದೂ ಅಸಾಧ್ಯವಾದೀತು. ನಮ್ಮ ಅಂತರಂಗಬಹಿರಂಗಗಳ ಕರ್ಮಗಳೆಲ್ಲವೂ ಸೂರ್ಯನಿಗೆ ಗೊತ್ತಾಗಿಬಿಡುವದರಿಂದ ಆತನಿಗೆ ವಂಚಿಸಿ ನಾವೇನೂ ಮಾಡಲಾರೆವು. ಒಂದು ವೇಳೆ ಕಾಮವಶರಾಗಿ ಮಾಡಿದೆವಾದರೆ ತಪ್ಪನ್ನು ಒಪ್ಪಿಕೊಂಡು "ಕಾಮೋ ಅಕಾರ್ಷೀತ್, ನಾಹಂ

ಕರೋಮಿ" (ಕಾಮವು ಹೀಗೆ ಮಾಡಿಸಿತು. ನಾನಲ್ಲ) ಎಂದು ಸೂರ್ಯನಿಗೆ ಬೇಡಿಕೊಂಡು ಶರಣಾಗತರಾಗಿಬಿಡಬೇಕು. ಆಗ ಕೃಪಾಳುವಾದ ಆತನಿಗೆ ನಮ್ಮ ವಿಷಯಕ್ಕೆ ಅಧಿವಚನವನ್ನು ಆಡುವ ಮನಸ್ಸಾಗುವದು. ಅವನ ಮಾತಿನಂತೆ ಉಳಿದ ದೇವತೆಗಳೂ ನಮ್ಮನ್ನು ಕಂಡಾಗ "ಓಹೋ, ಈತನು ಸೂರ್ಯಭಕ್ತನು, ಪರಿಶುದ್ಧನು, ಪುಣ್ಯಶಾಲಿಯು" ಎಂದೇ ಗುರುತಿಸುವರು. ಮಿತ್ರ, ವರುಣ-ರೆಂಬ ದೇವತೆಗಳು ಕೂಡ ನಾವು 'ಅನಾಗಸರು' (ನಿರಪರಾಧಿಗಳು) ಎಂದು ಅಂಗೀಕಾರಮುದ್ರೆಯನ್ನೊತ್ತುವರು. ಇದಕ್ಕಿಂತ ದೇವತೆಗಳ ಅನುಗ್ರಹವೆಂಬುದು ಹೆಚ್ಚಿನದೇನಿದ್ದೀತು ? ದೇವತೆಗಳ ವಿಷಯಕ್ಕೆ ನಾವು ತಿರಸ್ಕಾರಬುದ್ಧಿಯನ್ನು ತಾಳದೆ ವ್ಯವಹರಿಸುತ್ತಾ ಶುಕ್ಲಜೀವನವನ್ನು ಸಾಗಿಸಿದರೆ ಸಾಕು; ನಮ್ಮ ಜನ್ಮವು ಸಾರ್ಥಕವಾದೀತು. ಇದಕ್ಕೆಲ್ಲ ಸೂರ್ಯನೇ ನಮ್ಮನ್ನು ಕೈ ಹಿಡಿಯಬೇಕಾಗಿದೆ. ಇಂಥ ಸೂರ್ಯನನ್ನು ಇಲ್ಲಿ ಸ್ತುತಿಸಿದೆ.

**ಉತ್ಸೂರ್ಯೋ ಬೃಹದರ್ಚೀಂಷ್ಯಶ್ರೇತ್ಪುರು**
**ವಿಶ್ವಾ ಜನಿಮ ಮಾನುಷಾಣಾಮ್।**
**ಸಮೋ ದಿವಾ ದದೃಶೇ ರೋಚಮಾನಃ**
**ಕ್ರತ್ವಾ ಕೃತಃ ಸುಕೃತಃ ಕರ್ತೃಭಿರ್ಭೂತ್ ॥ ೨೫ ॥**

**"ಸರ್ವಪ್ರೇರಕನಾದ ಸೂರ್ಯನು ತನ್ನ ಅತ್ಯಧಿಕವಾದ ತೇಜಃಕಿರಣಗಳಿಂದ ಮೇಲೇರಿದವನಾಗಿ ಮನುಷ್ಯರ ಕಡೆಗೆ ತಿರುಗಿದವನಂತೆ ಕಂಡುಬರುತ್ತಾ ಪ್ರತಿಯೊಬ್ಬರಿಗೂ ಏಕರೂಪನಾಗಿ ತೋರಿಕೊಳ್ಳುತ್ತಿರುವನು. ಸರ್ವಕ್ಕೂ ಕರ್ತೃವಾಗಿ ಆ ದೇವನು ಪ್ರಜಾಪತಿಯಿಂದ ಸ್ತುತಿಕರ್ತೃಗಳ ಪ್ರಾರ್ಥನಾನುಸಾರವಾಗಿ ನೇಮಿಸಲ್ಪಟ್ಟಿರುವನು" ಎಂದರ್ಥ.**

ಈ ಮಂತ್ರದಲ್ಲಿ ಸರ್ವರಿಗೂ ಸೂರ್ಯನು ಸಮನೆಂಬುದನ್ನು ತೋರಿಸಿ ಕೊಟ್ಟಿದೆ. ನಾವು ಯಾವ ಊರಿನಲ್ಲಿಯೇ ಇರಲಿ, ಪ್ರತಿದಿನವೂ ಸೂರ್ಯನು ಬೆಳಗಿನ ವೇಳೆಯಲ್ಲಿ ಪೂರ್ವದಿಕ್ಕಿನಲ್ಲಿ ನಮಗೆ ಎದುರಾಗಿ ಕಾಣಿಸಿಕೊಳ್ಳುವನು. ಎಲ್ಲ ಊರಿನ ಪೂರ್ವಕ್ಕೆ ಬಾಗಿಲುಳ್ಳ ಎಲ್ಲರ ಮನೆಗೂ ಬೆಳಗ್ಗೆ ಆತನು ಅಭಿಮುಖನಾಗಿಯೇ ಕಂಡುಬರುವನು. "ಸೂರ್ಯನು ನನ್ನನ್ನು ನೋಡುತ್ತಿದ್ದಾನೆ. ನನ್ನ ಬಳಿಗೇ ಬರುತ್ತಿದ್ದಾನೆ" ಎಂದು ಆ ಸಮಯಕ್ಕೆ ಯಾರು ಬೇಕಾದರೂ ಭಾವಿಸಿಕೊಳ್ಳಬಹುದು. ಹೀಗಿದ್ದರೂ ಆತನೊಬ್ಬನೇ - ಎಂಬುದು ಎಲ್ಲರಿಗೂ ತಿಳಿದಿದೆ. ಬೇರೆಬೇರೆಯ ಸೂರ್ಯನಿರುವದಿಲ್ಲ. ಇದನ್ನೇ ಈ ಮಂತ್ರವು ತಿಳಿಸುತ್ತಿದೆ. ತೇಜೋಮಯನಾದ ಆ ದೇವನು ಮೇಲೇರಿದಂತೆಲ್ಲ ಮನುಷ್ಯರೇ ಮುಂತಾಗಿ ಎಲ್ಲಾ ಸ್ಥಾವರಜಂಗಮಪ್ರಾಣಿಗಳಿಗೂ ಬೆಳಕು, ಶಾಖಗಳನ್ನು ನೀಡಿ ಪೋಷಿಸುವನು. ಅವನು ಬೆಳಗದೆ ಇರುವ ಪದಾರ್ಥವಿಲ್ಲ. ಶುಚಿ, ಅಶುಚಿ ಎಂದು ನಾವು

ಭಾವಿಸುವ ಎಲ್ಲ ವಸ್ತುಗಳನ್ನೂ ತನ್ನ ಕಿರಣಗಳಿಂದ ಆತನು ಸರಿಸಮಾನವಾಗಿಯೇ ಮುಟ್ಟುತ್ತಾನೆ. ಕಾಯಿಲೆಯವರು, ಆರೋಗ್ಯವಂತರು, ಮಡಿಯಲ್ಲಿರುವವರು, ಮೈಲಿಗೆಯಲ್ಲಿರುವವರು, ಮೃತರಾದವರು, ಆಗತಾನೆ ಹುಟ್ಟಿದವರು - ಮುಂತಾಗಿ ಯಾವದನ್ನೇ ಆದರೂ ಆತನು ಸ್ಪರ್ಶಿಸದೆ ಇರುವದಿಲ್ಲ. ಹೀಗಿದ್ದರೂ ಆತನಿಗೆ ಯಾವ ದೋಷವೂ ಲೇಪವಾಗುವಂತಿಲ್ಲ. ಮನುಷ್ಯನು ವಾಯು, ನೀರು, ಭೂಮಿಗಳನ್ನು ಕೊಳಕುಮಾಡುವಂತೆ ಸೂರ್ಯನನ್ನು ಕೆಡಿಸುವಂತಿಲ್ಲ. ಅವನಿಗೆ ಏನೇನೂ ದೋಷಗಳನ್ನಾಗಲೀ ಪಕ್ಷಪಾತಾದಿ ಆರೋಪಗಳನ್ನಾಗಲೀ ಹೊರಿಸುವಂತಿಲ್ಲ. ಯಾರೊಬ್ಬರೂ ಅವನನ್ನು ದ್ವೇಷಿಸುವಂತಿಲ್ಲ. ಬಿಸಿಲಿನ ತಾಪವು ಅಧಿಕವಾಗಿ ತೊಂದರೆಗೀಡಾದವರು ಸಹ ಸೂರ್ಯನು ಬೇಡವೇ ಬೇಡ - ಎನ್ನುವಂತಿಲ್ಲ. ಹೀಗೆ ಸರ್ವೋಪಕಾರಕನೂ ಸರ್ವರಿಗೂ ಮಿತ್ರನೂ ಸರ್ವರನ್ನೂ ತನ್ನೆದುರಿಗೆ ಬರಮಾಡಿಕೊಳ್ಳುವವನೂ ಆದ ಸೂರ್ಯನನ್ನೇಕೆ ನಾವು ಗುರುತಿಸುವದಿಲ್ಲ? ಅವನನ್ನೇಕೆ ಗೌರವಿಸುವದಿಲ್ಲವೋ ತಿಳಿಯದು. ಆದರೂ ಆತನು ತನ್ನ ಸಮತ್ವದಿಂದ ಚ್ಯುತನಾಗುವದಿಲ್ಲ. ಭಜಿಸಿದವರಿಗೆ ಮಾತ್ರ ಹೆಚ್ಚಿನ ಶ್ರೇಯಸ್ಸನ್ನುಂಟುಮಾಡುವನು. ಹಿಂದೆ ಪ್ರಜಾಪತಿಬ್ರಹ್ಮನು ಪ್ರಜೆಗಳ ಸ್ತುತಿಪಾಠಗಳಿಂದ ಮೆಚ್ಚಿದವನಾಗಿ ಜಗತ್ತಿಗೆಲ್ಲ ಉಪಕಾರಕನಾಗಿ ವರ್ತಿಸುವಂತೆ ಸೂರ್ಯನನ್ನೇ ನೇಮಿಸಿದನೆಂಬುದೂ ಹಿಂದಿನ ಕಲ್ಪದಲ್ಲಿ ಅತ್ಯಂತಪುಣ್ಯಶಾಲಿಯಾಗಿ ಬಾಳಿ ಪಾಪಗಳನ್ನೆಲ್ಲ ಸುಟ್ಟುಹಾಕಿದ್ದವನೇ ಈ ಕಲ್ಪಕ್ಕೆ ಸೂರ್ಯನಾದನೆಂಬುದೂ ಉಪನಿಷತ್ತಿನಿಂದ ತಿಳಿದುಬರುತ್ತದೆ. ಇಂಥ ಸೂರ್ಯನ ಆದರ್ಶವನ್ನು ನಾವು ಅನುಸರಿಸಿ ''ಸ್ವಸ್ತಿ ಪಂಥಾಮನುಚರೇಮ ಸೂರ್ಯಾಚಂದ್ರಮಸಾವಿವ'' ಎಂಬ ವೇದವಾಕ್ಯವನ್ನು ಬೆಳಗೋಣ.

**ಸ ಸೂರ್ಯ ಪ್ರತಿ ಪುರೋ ನ ಉದ್ಗಾ**
**ಏಭಿಸ್ತೋಮೇಭಿರೇತಶೇಭಿರೇವೈಃ ।**
**ಪ್ರ ನೋ ಮಿತ್ರಾಯ ವರುಣಾಯ ವೋಚೋ**
**(ಅ) ನಾಗಸೋ ಅರ್ಯಮ್ಣೇ ಅಗ್ನಯೇ ಚ ॥ ೨೬ ॥**

**'ಎಲೈ ಸೂರ್ಯನೆ, ಸ್ತುತ್ಯರ್ಹಗಳಾದ ಈ ಚಿತ್ರವರ್ಣಗಳಾದ ಕುದುರೆಗಳಿಂದ ಕೂಡಿ ನಮ್ಮೆದುರಿಗೆ ಬರುವವನಾಗು. ಹಾಗೆಯೇ ನಮ್ಮಿಂದ ಸ್ತುತಿಸಲ್ಪಟ್ಟವನಾಗಿ ಮಿತ್ರ, ವರುಣ, ಅರ್ಯಮಾ, ಅಗ್ನಿ - ಮೊದಲಾದ ದೇವತೆಗಳಿಗೂ ನಾವು ಪಾಪಿಗಳಲ್ಲವೆಂಬುದನ್ನು ಹೇಳುವವನಾಗು' ಎಂದು ಅಭಿಪ್ರಾಯ.**

ಈ ಮಂತ್ರದಲ್ಲಿ ಈಗಾಗಲೇ ವರ್ಣಿಸಿರುವ ವಿಷಯಗಳನ್ನೇ ಕುರಿತು ಸ್ತೋತ್ರಮಾಡಿದೆ. ಸೂರ್ಯರಥದ ಬಣ್ಣಬಣ್ಣದ ಕುದುರೆಗಳು ಅವನ ವಿಭೂತಿಯನ್ನೇ ಸೂಚಿಸುತ್ತವೆ. ಅಧ್ಯಾತ್ಮವಾಗಿ ಅವನ ಕಿರಣಗಳೇ ಕುದುರೆಗಳೆನಿಸಿವೆ.

ಆತನು ಹೀಗೆ ಪ್ರಕಾಶಮಾನನಾಗಿ ಎದುರಿಗೆ ಬರುವವನಾದಾಗ ನಾವುಗಳು ಸ್ತೋತ್ರಮಾಡಲೇಬೇಕು. ಹೇಗೆ ಮಂತ್ರಿಗಳೋ ರಾಷ್ಟ್ರಪತಿಗಳೋ ಬಂದರೆ, ಅವರಿಗಾಗಿ ಕಾದಿದ್ದು ಗೌರವಿಸಿ ಕರೆತರುವೆವ್ವೋ ಹಾಗೆಯೇ ಜಗತ್ಪತಿಯಾದ ಸವಿತೃದೇವನನ್ನೂ ನಾವು ಬರಮಾಡಿಕೊಳ್ಳಬೇಕು. ಅನಂತರ ನಮ್ಮ ಇಷ್ಟಾರ್ಥಗಳನ್ನೂ ಆತನ ಮುಂದಿಡಬೇಕು. ಅದರಲ್ಲಿ ಮುಖ್ಯವಾದದ್ದು ನಾವು ಅಪರಾಧಿಗಳಲ್ಲವೆಂದು ದೇವತೆಗಳೆಲ್ಲರಿಗೂ ತಿಳಿಯಬೇಕಾದದ್ದೇ ಆಗಿರುವದು. ಮಿತ್ರ, ವರುಣ - ಮುಂತಾದ ದೇವತೆಗಳನ್ನೂ ಈ ಸೂರ್ಯಸ್ತುತಿಯಲ್ಲಿಯೇ ಪರಾಮರ್ಶಿಸಿರುವ 'ಏಕೆಂದರೆ ಆ ದೇವತೆಗಳೂ ಸೂರ್ಯನ ರೂಪಾಂತರವೇ, ಹಾಗೂ ಸೂರ್ಯನ ಅಧೀನರೇ - ಎಂದರ್ಥ. ಆದ್ದರಿಂದ ಒಬ್ಬ ಸೂರ್ಯನ ಅನುಗ್ರಹವು ಉಳಿದೆಲ್ಲ ದೇವತೆಗಳ ಅನುಗ್ರಹಕ್ಕೆ ಸಮಾನವೆಂದು ತಿಳಿಯಬೇಕು. ವಿಶೇಷವಾಗಿ ರಾತ್ರಿಕಾಲದಲ್ಲಿ ಅಗ್ನಿಯು ಸೂರ್ಯನ ಪ್ರತಿನಿಧಿಯಾಗಿರುವನು. ಅವನಿಗೂ ಸೂರ್ಯದೇವನು ನಮ್ಮ ಅನಾಗಸತ್ವವನ್ನು ಹೇಳಲೆಂಬುದು ಆಶಯವು. ವರುಣನೂ ಹಾಗೆಯೇ ನಮಗೆ ಪ್ರತ್ಯಕ್ಷದೇವತೆಯಾಗಿರುವನು. ವರುಣನೆಂದರೆ ಜಲಾಭಿಮಾನಿದೇವತೆಯು. ಅವನು ಸೂರ್ಯನ ಸಹಚರನೂ ಸ್ನೇಹಿತನೂ ಆಗಿರುವನು. ನಾವು ಪಾಪಗಳನ್ನು ಮಾಡಿದಾಗಲೆಲ್ಲ ಅವನು ನಮ್ಮ ಆಯುಷ್ಯವನ್ನು ಮೊಟಕುಮಾಡಿಬಿಡುವನು. ಆದ್ದರಿಂದ ನಾವು ಪಾಪಿಗಳಲ್ಲವೆಂಬುದನ್ನು ಆತನಿಗೂ ಮನವರಿಕೆಮಾಡಿಕೊಡಬೇಕು. ಆ ಕೆಲಸವನ್ನೂ ನಮಗಾಗಿ ಸೂರ್ಯನು ಮಾಡಲೆಂದು ಇಲ್ಲಿ ಕೇಳಿಕೊಂಡಿದೆ. ದೇವತೆಗಳೆಲ್ಲರಿಗೂ ಸೂರ್ಯನಲ್ಲಿ ವಿಶ್ವಾಸವಿರುವದೇ ಇದಕ್ಕೆ ಕಾರಣವಾಗಿದೆ.

**ವಿ ನಃ ಸಹಸ್ರಂ ಶುರುಧೋ ರದಂತ್ವೃತಾವಾನೋ ವರುಣೋ ಮಿತ್ರೋ**
**ಅಗ್ನಿಃ ಯಚ್ಛಂತು ಚಂದ್ರಾ ಉಪಮಂ ನೋ ಅರ್ಕಮಾ ನಃ ಕಾಮಂ**
**ಪೂಪುರಂತು ಸ್ತವಾನಾಃ ॥ ೨೬ ॥**

"ದುಃಖವನ್ನು ತಡೆಗಟ್ಟುವ ಹಾಗೂ ಸತ್ಯವಂತರಾದ, ವರುಣಾದಿದೇವತೆಗಳು ನಮಗೆ ಸಹಸ್ರಸಂಖ್ಯಾಕವಾದ ಧನವನ್ನು (ವಿ-ರದಂತು) ಕೊಡುವವರಾಗಲಿ. ಮತ್ತು ಆಹ್ಲಾದವನ್ನುಂಟುಮಾಡುವ ಅವರುಗಳು ನಮಗೆ ಸುತ್ತ್ಯವಾದ ಪೂಜಾಯೋಗ್ಯವಾದ (ಬುದ್ಧಿ)ಯನ್ನು ಕೊಡಲಿ. ಮತ್ತು ನಮ್ಮಿಂದ ಸ್ತುತಿಸಲ್ಪಡುವವರಾಗಿ ಇಷ್ಟಾರ್ಥಗಳನ್ನು ಪೂರೈಸುವವರಾಗಲಿ"! (ಇವರೆಲ್ಲರೂ ಎಲೈ ಸೂರ್ಯನೆ, ನಿನ್ನಿಂದ ಅನುಜ್ಞೆಯನ್ನು ಪಡೆದವರಾಗಿ ನಮಗೆ ಪ್ರಸನ್ನರಾಗಲಿ) ಎಂದಭಿಪ್ರಾಯ.

ಈ ಮಂತ್ರದಲ್ಲಿ ವಿಶೇಷವಾಗಿ ದೇವತೆಗಳಿಂದ ಧನಸಹಾಯುವನ್ನು ಬೇಡಿದೆ. ಇದು ಬಹಳ ಯೋಗ್ಯವಾಗಿದೆ. ಏಕೆಂದರೆ ನಮಗೆ ದೇವತೆಗಳೇ ಧನಾದಿಗಳನ್ನು ದಯಪಾಲಿಸಬೇಕೇ ಹೊರತು ಮನುಷ್ಯರಿಂದ ಸಾಧ್ಯವಿಲ್ಲ. ಮನುಷ್ಯರಿಗೆ ಧನವನ್ನು ನೀಡುವ ಅಧಿಕಾರವು ಬಂದರೂ ಅವರು ಮನುಷ್ಯತ್ವವನ್ನೇ ಮರೆತು ಮೆರೆಯುವದೇ ಹೆಚ್ಚು. ಹೀಗಿರುವಲ್ಲಿ ಅವರಿಂದೇನಾದೀತು ? ದೇವತಾನುಗ್ರಹವಾಗಿಬಿಟ್ಟರೆ ಎಲ್ಲಿಂದಲೋ ತಾನಾಗಿಯೇ ಧನಾದಿಗಳು ಒದಗಿಬಿಡುತ್ತವೆ. ದೇವತೆಗಳಲ್ಲಿ ಧನಪ್ರದರಾದವರೆಂದರೆ ವರುಣ, ಮಿತ್ರ, ಅಗ್ನಿಗಳೆಂದು ಇಲ್ಲಿ ಗುರುತಿಸಲಾಗಿದೆ. ಶ್ರೀಸೂಕ್ತದಲ್ಲಿಯೂ 'ಧನಮಗ್ನಿಃ....' ಎಂಬ ಮಂತ್ರದಲ್ಲಿ ಇದೇ ಅಭಿಪ್ರಾಯವಿದೆ. ಇವರುಗಳು ಸತ್ಯವಂತರೂ ಸಂಕಟಗಳಿಂದ ಭಕ್ತರನ್ನು ಪಾರುಮಾಡುವವರೂ ಆಗಿರುತ್ತಾರೆ. ಆದರೆ ಇವರುಗಳು ಆದಿತ್ಯನ ಅಧೀನರಾಗಿದ್ದುಕೊಂಡು ವರದಾನಮಾಡುವವರಾದ್ದರಿಂದ ಆದಿತ್ಯನನ್ನು ನಾವು ಮೊದಲು ಬೇಡಿಕೊಳ್ಳಬೇಕು. ಅನಂತರ ಅವನ ಅಪ್ಪಣೆಯಂತೆ ಇವರುಗಳು ಧನಪ್ರದರಾಗುವರು. ಆದರೆ ಇಷ್ಟೇ ಸಾಲದು. ಧನವನ್ನು ಹೇಗೆ, ಏತಕ್ಕೆ ವಿನಿಯೋಗಮಾಡಬೇಕೆಂಬ ಬುದ್ಧಿಯನ್ನೂ ಇವರೇ ಕೊಡಬೇಕು. ಇಲ್ಲವಾದರೆ ಕೇವಲ ಧನಮಾತ್ರವು ಅನರ್ಥವನ್ನೂ ತಂದೊಡ್ಡಬಹುದು. ಹಾಗಾಗದಂತೆ ಸ್ತುತ್ಯವಾದ ಎಂದರೆ ಮಂಗಳಕರವಾದ ಶುಭಮತಿಯನ್ನು ಕೂಡ ಈ ದೇವತೆಗಳು ನೀಡಲಿ - ಎಂದು ಪ್ರಾರ್ಥಿಸಿದೆ. ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ಒಂದುಕಡೆ ತಿಳಿಸಿರುವದೇನೆಂದರೆ: 'ಬ್ರಹ್ಮವಿದ್ಯಾಪ್ರಕರಣದಲ್ಲಿಯೂ ಧನವನ್ನು ಕೇಳಿಕೊಂಡಿರುವದರಲ್ಲಿಯೂ ಔಚಿತ್ಯವಿದೆ. ಹೇಗೆಂದರೆ ಧನವಿಲ್ಲದೆ ವೈದಿಕಕರ್ಮಗಳನ್ನು ಅನುಷ್ಠಾನ ಮಾಡಲಾಗುವದಿಲ್ಲ. ಕರ್ಮಾನುಷ್ಠಾನಗಳಿಲ್ಲದೆ ಪಾಪಗಳು ಕ್ಷಯವಾಗುವಂತಿಲ್ಲ. ಪಾಪಗಳು ಕ್ಷಯವಾಗದೆ ಅಂತಃಕರಣದಲ್ಲಿ ಬ್ರಹ್ಮವಿದ್ಯೆಯು ಬೆಳಗುವಂತಿಲ್ಲ. ಆದ್ದರಿಂದ ಧನವು ತ್ಯಾಗಕ್ಕಾಗಿ (ಖರ್ಚಿಗಾಗಿ) ಬೇಕು' - ಎಂದಿರುತ್ತಾರೆ. ಧನವನ್ನು ಹೊಂದಿರುವವರೆಲ್ಲ ಈ ಅಭಿಪ್ರಾಯವುಳ್ಳವರಾದರೆ ಲೋಕಕ್ಷೇಮವು ನಿಜವಾಗಿಯೂ ಲಭಿಸೀತು. ಆದರೆ ನಮ್ಮ ವ್ಯವಹಾರಪ್ರಪಂಚದಲ್ಲಿ ದೇವತೆಗಳಿಗೆ ಅವಕಾಶವಿಲ್ಲದಂತೆ ಕಾಮಕ್ರೋಧಲೋಭಗಳೇ ನಮ್ಮ ಅಂತಃಕರಣವನ್ನು ಆಕ್ರಮಿಸಿಬಿಟ್ಟಿರುವದರಿಂದ ಲೋಕಕಲ್ಯಾಣವು ಸಾಧಿತವಾಗದೆ ಇದೆ. ಇದನ್ನರಿತು ನಾವು ಕೂಡಲೆ ಸೂರ್ಯನನ್ನು ಸದ್ಬುದ್ಧಿಯನ್ನು ಕೊಡುವಂತೆ ಬೇಡಿಕೊಳ್ಳಬೇಕು. ಇದೇ ಗಾಯತ್ರೀಜಪದ ರಹಸ್ಯವೂ ಆಗಿದೆ. ಇರಲಿ. ಹೀಗೆ ನಮ್ಮಗಳಿಂದ ಸ್ತುತಿಸಲ್ಪಟ್ಟ ವರುಣಾದಿದೇವತೆಗಳು ಯಾವಾಗಲೂ ನಮ್ಮ ಇಷ್ಟಾರ್ಥಗಳನ್ನು ಪೂರೈಸುತ್ತಿರಲಿ - ಎಂದಭಿಪ್ರಾಯ.

**ಉದ್ವೇತಿ ಸುಭಗೋ ವಿಶ್ವಚಕ್ಷಾಃ ಸಾಧಾರಣಃ**
**ಸೂರ್ಯೋ ಮಾನುಷಾಣಾಮ್ ।**
**ಚಕ್ಷುರ್ಮಿತ್ರಸ್ಯ ವರುಣಸ್ಯ ದೇವಶ್ಚರ್ಮೇವ ಯಃ**
**ಸಮ ವಿವ್ಯಕ್ತಮಾಂಸಿ ॥ ೨೮ ॥**

**"ಶೋಭನಭಾಗ್ಯಶಾಲಿಯೂ ಜಗತ್ತಿಗೆಲ್ಲ ಕಣ್ಣಾಗಿರುವವನೂ ಎಲ್ಲಾ ಮನುಷ್ಯರಿಗೂ ದರ್ಶನಕೊಡುವ ಸರ್ವಸಾಧಾರಣದೇವತೆಯೂ ಆದ ಸೂರ್ಯನು ಮಿತ್ರ - ವರುಣರುಗಳಿಗೂ ಪ್ರಕಾಶನಾಗಿದ್ದುಕೊಂಡು ಚರ್ಮವು (ವಸ್ತುವನ್ನೆಲ್ಲ) ಆವರಿಸಿಕೊಳ್ಳುವಂತೆ ಕತ್ತಲೆಯನ್ನು ಆವರಿಸಿಕೊಂಡು ಉದಯಿಸುತ್ತಿರುವನು' -' ಎಂದಭಿಪ್ರಾಯ.**

ಈ ಮಂತ್ರದಲ್ಲಿಯೂ ಸೂರ್ಯಭಗವಂತನ ಸಾಧಾರಣಸ್ತುತಿಯಿದೆ. ರುದ್ರಾಧ್ಯಾಯದಲ್ಲಿ ಹೇಳಿರುವಂತೆ ಈ ಆದಿತ್ಯನು ಎಲ್ಲರಿಗೂ ಗೊತ್ತಿರುವ ದೇವನು. ದನಕಾಯುವವರಿಗೂ ಮನೆಗೆಲಸಮಾಡುವವರಿಗೂ ಹಾಗೂ ನೀರನ್ನು ತರುವ ಹೆಂಗಸರಿಗೆ ಕೂಡ ಈತನು ಪರಿಚಿತನು. ಈತನನ್ನು ಕಂಡಾಗಲೇ ಎಲ್ಲರೂ ಕಾರ್ಯಪ್ರವೃತ್ತರಾಗುವರು. ಎಲ್ಲರಿಗೂ ತನ್ನ ಉದಯದಿಂದ ಸುಖವನ್ನು ನೀಡುವವನೀತನು. ಇವನಂಥ ಪುಣ್ಯಶಾಲಿಗಳಿಲ್ಲ. ಏಕೆಂದರೆ ಹಿಂದಿನ ಕಲ್ಪದಲ್ಲಿ ತಾನು ಮಾಡಿದ್ದ ಅನೇಕ ತಪಸ್ಸುಗಳಿಂದ ಸಮಸ್ತಪಾಪಗಳನ್ನೂ ಸುಟ್ಟುಹಾಕಿಯೇ ಈ ಕಲ್ಪದಲ್ಲಿ ಸೂರ್ಯನಾಗಿ ಅವತರಿಸಿರುವನು. ಈತನ ಮತ್ತೊಂದು ಮಹಿಮೆಯೇನೆಂದರೆ: ಕತ್ತಲೆಯನ್ನೆಲ್ಲ ಆವರಿಸಿಕೊಂಡು ಅದನ್ನು ಕಬಳಿಸಿ ಬಿಡುವವನಾಗಿರುತ್ತಾನೆ. ಚರ್ಮವು ಹೇಗೆ ನಮ್ಮ ಮೈಯನ್ನೆಲ್ಲ ಪೂರ ಮುಚ್ಚಿಬಿಟ್ಟಿರುವದೋ ಒಳಗಿನ ರಕ್ತಮಾಂಸಾದಿಗಳಾವುವೂ ಹೊರಕ್ಕೆ ಕಾಣುವದೇ ಇಲ್ಲವೋ ಹಾಗೆ ಸಂಪೂರ್ಣವಾಗಿ ತನ್ನ ಹಾಜರಿಯ ಕಾಲದಲ್ಲಿ ಈತನು ಕತ್ತಲೆಯನ್ನೆಲ್ಲ ಅಡಗಿಸಿಟ್ಟವನಾಗಿರುತ್ತಾನೆ. ಇನ್ನು ಮಿತ್ರ-ವರುಣರೆಂಬ ದೇವತೆಗಳಿಗೂ ಈತನೇ ಬೆಳಕನ್ನು ನೀಡುವವನಾಗಿದ್ದಾನೆ. ಮತ್ತು ಜ್ಞಾನವೆಂಬ ಬೆಳಕನ್ನೂ ನೀಡಿರುತ್ತಾನೆಂದೂ ಅರ್ಥಮಾಡಬಹುದು. ಹೀಗೆ ಸೂರ್ಯದೇವನು ಉದಯಿಸುತ್ತಾ ಕಂಗೊಳಿಸುತ್ತಿರುವನು - ಎಂದು ಸ್ತೋತ್ರಮಾಡಿದೆ.

**ಉದ್ವೇತಿ ಪ್ರಸವೀತಾ ಜನಾನಾಂ ಮಹಾನ್ ಕೇತುರರ್ಣವಃ ಸೂರ್ಯಸ್ಯ ।**
**ಸಮಾನಂ ಚಕ್ರಂ ಪರ್ಯಾವಿವೃತ್ಸನ್ ಯದೇಶತೋ ವಹತಿ ಧೂರ್ಷು**
**ಯುಕ್ತಃ ॥ ೨೯ ॥**

**"ಮಹಾಂತನೂ ಎಲ್ಲರನ್ನೂ ಜಾಗೃತಗೊಳಿಸುವವನೂ ಉದಕಪ್ರದನೂ ಕರ್ಮಗಳಿಗೆ ಅನುಜ್ಞೆಯನ್ನು ಕೊಡುವವನೂ ಆದ ಸೂರ್ಯನು ಉದಯಿಸಿ ಬರುತ್ತಿರುವನು. ಹಾಗೂ ಆತನು, ಹರಿತವರ್ಣದ ಕುದುರೆಯು ಎಳೆಯುತ್ತಿರುವ ಒಂದೇ ಚಕ್ರದ ರಥವನ್ನು ತಿರುಗಾಡಿಸಲು ಇಚ್ಛಿಸುತ್ತಾ ಎದುರಾಗುತ್ತಿರುವನು"** ಎಂದಭಿಪ್ರಾಯ.

ಈ ಮಂತ್ರದಲ್ಲಿ ಮೊದಲು 'ಕೇತು'ವೆಂದು ಆದಿತ್ಯನನ್ನು ಹೆಸರಿಸಿದೆ. ಕೇತುವಂದರೆ ಬಾವುಟವೆಂದರ್ಥ. ಹೇಗೆ ಬಾವುಟಕ್ಕೆ ಈಗಲೂ ಪೂರ್ಣ ಗೌರವವುಂಟೋ, ಯಾವದಾದರೂ ಸಾರ್ವಜನಿಕಸಮಾರಂಭಗಳಲ್ಲಿ ಆಯಾ ಸಂದರ್ಭದ ನೆನಪಿಗಾಗಿ ಬಾವುಟವನ್ನು ಹಾರಿಸಿ ವಂದನೆಗಳನ್ನು ಸಲ್ಲಿಸುವರೋ ಹಾಗೆಯೇ 'ಅಹ್ನಾಂ ಕೇತುಃ'' ಹಗಲುಗಳಿಗೆ ಬಾವುಟದಂತಿರುವ ಸೂರ್ಯನು ಪ್ರತಿದಿನವೂ (ನವೋ ನವೋ ಭವತಿ ಜಾಯಮಾನಃ) ಹುಟ್ಟುತ್ತಾ ಹೊಸಬನಾಗಿಯೇ ತೋರಿಕೊಳ್ಳುತ್ತಿರುವನು. ಇಂಥವನಿಗೆ ನಾವು ಪ್ರಪ್ರಥಮವಾಗಿ ವಂದನೆಗಳನ್ನು ಸಲ್ಲಿಸಬೇಡವೆ ? ಇಷ್ಟೇ ಅಲ್ಲ. ಬಾವುಟವು ಮೇಲೆ ಗಾಳಿಯಲ್ಲಿ ಹಾರಾಡುತ್ತಾ, ಅದು ಗೋಚರಿಸಿದಂತೆಲ್ಲ ಅದನ್ನು ಕಂಡ ಜನರು ಮೇಲೆದ್ದು ಉತ್ಸಾಹದಿಂದ 'ಓಹೋ, ಈ ದಿನ ಸ್ವಾತಂತ್ರ್ಯದಿನಾಚರಣೆ' ಇತ್ಯಾದಿಯಾಗಿ ನೆನೆಸಿಕೊಂಡು ಆನಂದಿಸುವಂತೆ ಸೂರ್ಯನನ್ನು ಕಂಡ ಪ್ರಾಣಿಗಳೆಲ್ಲವೂ ಚಟುವಟಿಕೆ, ಸಂತೋಷಗಳಿಂದ ಕಾರ್ಯಪ್ರವೃತ್ತವಾಗುವವು. ಮತ್ತು ಸೂರ್ಯೋದಯವಾದಾಗ ಜನರು "ಪುಣ್ಯಾಹವಾಯಿತು"- ಎನ್ನುವರು. ಆ ಮೂಲಕ ಪುಣ್ಯಾಹದ ನಿಮಿತ್ತ ಶುಭಕರ್ಮಗಳಿಗೆ ವೈದಿಕರು ಅನುಮತಿಯನ್ನು ನೀಡಿ ಓಂ ಪುಣ್ಯಾಹಂ ; ಸ್ವಸ್ತಿ ಭವತು, ಕರ್ಮ ಋಧ್ಯತಾಂ - (ಈ ದಿನವು ಪವಿತ್ರವಾಗಿದೆ; ಒಳ್ಳೆಯದಾಗಲಿ ; ಸತ್ಕರ್ಮಗಳು ಬೆಳೆಯಲಿ) ಎಂದೆಲ್ಲ ಹೇಳಿ ಆಶೀರ್ವದಿಸುವರು. ಇವೆಲ್ಲವೂ ಸೂರ್ಯನ ದರ್ಶನಮಾತ್ರದಿಂದ ಜನರಿಗೆ ದೊರೆಯುವವು. ಹೀಗೆ ಸೂರ್ಯನು ಕರ್ಮಪ್ರಚೋದಕನಾಗಿರುವನು. ಇನ್ನು ಸೂರ್ಯನೊಡನೆಯೇ ತೋರಿಕೊಳ್ಳುವ ಆತನ ರಥ, ಅದರ ಚಕ್ರ, ಕುದುರೆಯೂ ಸಹ ಪ್ರಪಂಚದ ದೈನಂದಿನವ್ಯಾಪಾರಕ್ಕೆ ಪ್ರಚೋದಕಗಳಾಗಿರುವವು. ಹೇಗೆಂದರೆ ರಥವು ಪ್ರತಿಯೊಬ್ಬರ ಶರೀರವನ್ನೂ ಚಕ್ರವು ಅವರವರ ಕರ್ಮಗಳನ್ನೂ ಕುದುರೆಯು ಇಂದ್ರಿಯ, ಬುದ್ಧಿಗಳನ್ನೂ ಪ್ರತಿನಿಧಿಸುತ್ತವೆ. ಕರ್ಮಚಕ್ರವು ತಿರುಗುತ್ತಲೇ ಇರುವದೇ ಜಗದ್ವ್ಯಾಪಾರವು. ಸೂರ್ಯನು ತನ್ನ ಒಂದೇ ಚಕ್ರದ ರಥವನ್ನು ಜಾಣತನದಿಂದ ಅಪಾಯವಿಲ್ಲದಂತೆ ನಡೆಯಿಸುತ್ತಿರುವನು. ಏಳು ಕುದುರೆಗಳ ಕೆಲಸವನ್ನೂ ಒಂದೇ ಕುದುರೆಯೇ ಮಾಡುತ್ತಾ ಏಳು ಹೆಸರುಗಳನ್ನು ಹೊಂದಿರುವದು. ಹೀಗೆ ಸೂರ್ಯನು ತಾನು ಸವೆಯಿಸಬೇಕಾದ

ದಾರಿಯನ್ನು ಮಹಾ ಸಾಹಸದಿಂದ ಕೇವಲ ಮಿತಪರಿವಾರ, ಸೌಕರ್ಯಗಳೊಡನೆ ಕ್ರಮಿಸುತ್ತಿರುವನು. ಇದರಿಂದ ತಿಳಿಯಬರುವದೇನೆಂದರೆ: ನಾವುಗಳು ಸಹ ನಮ್ಮ ಕ್ರಿಯಾಶಕ್ತಿಯಿಂದ ಯಾರ ಸಹಾಯವನ್ನೂ ಅತಿಯಾಗಿ ಅವಲಂಬಿಸದೆ ಒದಗಿದಷ್ಟನ್ನು ಬಳಸಿಕೊಂಡು ಸಿದ್ಧಿಯನ್ನು ಹೊಂದುವದರ ಕಡೆಗೆ ಸಾಗಬೇಕೇ ಹೊರತು ನಿಲ್ಲಬಾರದು - ಎಂದಾಗುತ್ತದೆ. ಸೂರ್ಯನೇ ನಮಗೆ ಈ ವಿಷಯದಲ್ಲಿ ಆದರ್ಶನಾಗಿರುವನು. ಮಹಾತ್ಮರ ಕ್ರಿಯಾಸಿದ್ಧಿಯು ಅವರ ಆತ್ಮಬಲದಲ್ಲಿ ಇದ್ದುಕೊಂಡಿರುವದೇ ಹೊರತು ಉಪಕರಣಸಾಮಗ್ರಿಗಳಲ್ಲಲ್ಲ - ಎಂದರ್ಥ. ಈಗಿನ ಕಾಲದಲ್ಲಾದರೊ, ಉಪಕರಣಗಳು ಸಮೃದ್ಧವಾಗಿವೆ. ಆದರೇನು ? ಅಂತಃ ಶ್ಶಕ್ತಿಯಾಗಲಿ, ತಪೋಯೋಗಾದಿರೂಪವಾದ ಸಾಧನಗಳಿಂದ ಕೂಡಿದ ಮನಸ್ಸಾಗಲಿ ಇಲ್ಲದೆ ಸಿದ್ಧಿಗಳು ಮರೆಯಾಗಿಬಿಟ್ಟಿರುವವು. ಲೌಕಿಕವಾದ ಕಾರ್ಯಸಿದ್ಧಿಗಳಿಗೇ ಕೊರತೆಯಾಗಿರುವಾಗ ದೈವಿಕಸಿದ್ಧಿಯು ಆತ್ಮಬಲವಿಲ್ಲದೆ ಹೇಗೆ ದೊರಕೀತು ? ಆದ್ದರಿಂದ ನಾವು ಸೂರ್ಯನನ್ನು ಆರಾಧನೆಮಾಡಿಯೇ ಸಿದ್ಧರಾಗಬೇಕಾಗಿದೆ.

**ವಿ ಭ್ರಾ ಜ ಮಾ ನ ಉಷಸಾಮುಪಸ್ಥಾದ್ರೇಭೈರುದೇತ್ಯನುಮದ್ಯಮಾನಃ ।**
**ಏಷ ಮೇ ದೇವಃ ಸವಿತಾ ಚಚ್ಛಂದ ಯಃ ಸಮಾನಂ ನ ಪ್ರಮಿನಾತಿ**
**ಧಾಮ ॥ ೩೦ ॥**

**"ಈ ಸೂರ್ಯನು ವಿಶೇಷವಾಗಿ ಹೊಳೆಯುತ್ತಾ ಉಷಃಕಾಲಗಳ ನಡುವೆ ಸ್ತೋತ್ರಪಾಠಕರುಗಳಿಂದ ಹೊಗಳಲ್ಪಡುತ್ತಿರುವವನಾಗಿ ಉದಯಿಸುವನು. ಮತ್ತು ಯಾವ ಈ ದೇವನು ಎಲ್ಲಾ ಪ್ರಾಣಿಗಳಿಗೂ ತನ್ನ ತೇಜಸ್ಸನ್ನು ಸರಿಸಮಾನವಾಗಿ ಸಂಕೋಚವಿಲ್ಲದೆ ದಯಪಾಲಿಸುವನೋ, ಯಾರಿಗೂ (ನ ಪ್ರಮಿನಾತಿ) ಕಡಿಮೆ ಮಾಡದೆ ಕೊಡುತ್ತಿರುವನೋ ಅವನು ನನಗೆ ಕಾಮಗಳನ್ನುಂಟುಮಾಡುತ್ತಿರುವನು" ಎಂದು ಸರಳಾರ್ಥವು.**

ಈ ಮಂತ್ರದಲ್ಲಿ ಸೂರ್ಯನ ಉದಯವನ್ನು ಹೊಗಳಿದೆ. ಆತನು ಹುಟ್ಟುವ ಮುಂಚೆ ಸಂಭವಿಸುವ ಉಷಃಕಾಲವು ಪ್ರತಿದಿನವೂ ತಪ್ಪದೆ ಒದಗುತ್ತದೆ. ಉಷೆಯನ್ನು ಸ್ತ್ರೀಯೆಂದು ಭಾವಿಸಿ ಅನೇಕ ಉಷಾಮಣಿಗಳ ನಡುವೆ ವಿಶೇಷವಾಗಿ ಹೊಳೆಯುತ್ತಾ ಸೂರ್ಯನು ತೋರಿಕೊಳ್ಳುವನೆಂದು ತಿಳಿಸಿದೆ. ಮತ್ತು ಆ ಸಮಯಕ್ಕೆ ಸೂರ್ಯರಥದಲ್ಲಿರುವ ಅಪ್ಸರೆಯರೂ ಗಂಧರ್ವರೂ ಸ್ತೋತ್ರ ಮಾಡಲಾರಂಭಿಸುವರು. ಹೀಗೆ ಉದಯಿಸುತ್ತಿರುವಾಗಲೇ, ಆತನು ಪಕ್ಷಪಾತವಿಲ್ಲದಂತೆ ಎಲ್ಲರಿಗೂ ಸರಿಸಮಾನವಾಗಿ ತನ್ನ ಬೆಳಕನ್ನು ನೀಡುತ್ತಿರುವನು. ಒಂದು ಅರಮನೆಯನ್ನೂ ಭವ್ಯವಾದ ದೇವಾಲಯವನ್ನೂ ಎಷ್ಟರಮಟ್ಟಿನ ಕಿರಣಗಳಿಂದ ಪ್ರಕಾಶಿಸುವನೋ ಹಾಗೆಯೇ ಒಂದು ಗುಡಿಸಲನ್ನೂ, ಬಂದೀಖಾನೆಯನ್ನೂ

ಬೆಳಗುವನು. ಅವನ ಕಿರಣಪ್ರಸಾರಕ್ಕೆ ತಾರತಮ್ಯಗಳಿಲ್ಲ. ಅಥವಾ ವಿದ್ಯುಚ್ಛಕ್ತಿಯನ್ನು ಮಾನವನು ಹತೋಟಿಗೆ ಒಳಪಡಿಸಿ ಹೈ ಮತ್ತು ಲೋ ಟೆನ್‌ಷನ್‌ಗಳಲ್ಲಿ ಹಂಚುವಂತೆ ಸೂರ್ಯನನ್ನು ಹಂಚಲಾಗುವದಿಲ್ಲ. ಬಲ್ಬುಗಳ ವೋಲ್ಟೇಜಿಗನುಗುಣವಾಗಿ ವಿದ್ಯುಚ್ಛಕ್ತಿಯು ಬೆಳಗುವಂತೆ ಸೂರ್ಯನು ಆಯಾ ಜೀವರುಗಳ ಸ್ಥಿತಿಗತಿಗೆ ಅನುಗುಣವಾಗಿ ಮಂದ-ಮಧ್ಯಮ-ಉತ್ತಮದರ್ಜೆಯ ಪ್ರಕಾಶವನ್ನು ನೀಡುವದಿಲ್ಲ. ಎಲ್ಲರಿಗೂ ಒಂದೇ ರೀತಿಯ ಪ್ರಕಾಶವನ್ನೂ ಶಾಖವನ್ನೂ ನೀಡುತ್ತಿರುವ ಸೂರ್ಯನು ಸಮನೆನಿಸಿರುವನು. ಹೀಗೆ ಸರ್ವರಿಗೂ ಪ್ರಿಯನೂ ಪರಿಚಿತನೂ ಮಿತ್ರನೂ ಸಮಾನಭಾವದಿಂದ ವ್ಯವಹರಿಸುವವನೂ ಆದ ದೇವನು ನನ್ನ ಕಾಮಗಳನ್ನೂ ಪೂರೈಸುತ್ತಿರುವನು - ಎಂದು ಋಷಿಯು ಹೊಗಳಿರುತ್ತಾನೆ. ಒಮ್ಮೆ ಅಲೆಗ್ಸಾಂಡರ್ ಚಕ್ರವರ್ತಿಯು ತಾನು ಜಗಜ್ಜೇತನೆಂಬ ಅಹಂಕಾರದಿಂದ ಒಂದು ನದಿಯ ದಡದಲ್ಲಿ ಸೂರ್ಯೋದಯಕಾಲಕ್ಕೆ ಕುಳಿತಿದ್ದ ಒಬ್ಬ ಮಹಾತ್ಮನನ್ನು "ನಿನಗೇನು ಬೇಕು ? ಕೇಳಿಕೊ, ಕೊಡುವೆನು" ಎನ್ನಲು "ನಿನ್ನನ್ನೇ ನೀನು ಗೆದ್ದು ಕೊಳ್ಳದಿರುವವನು ಜಗಜ್ಜೇತೃವಾಗಿ ಹೇಗಾದೀಯೆ ? ನೀನೇನು ಕೊಟ್ಟೀಯೆ ? ಈಗ ನನ್ನ ಮೇಲೆ ಹೊಂಗಿರಣಗಳನ್ನು ಬೀರಿ ಅನುಗ್ರಹಿಸುತ್ತಿರುವ ಸೂರ್ಯನಿಗೆ ಅಡ್ಡಲಾಗಿ ನೀನು ನಿಲ್ಲಬೇಡ ; ಅತ್ತ ಸರಿ" ಎಂದುಬಿಟ್ಟನಂತೆ. ಆ ಮಹನೀಯನಿಗೆ[1] ಸೂರ್ಯನೇ ಸರ್ವಕಾಮಪ್ರದನೆಂಬ ಪ್ರಜ್ಞೆಯು ಚೆನ್ನಾಗಿ ಮೂಡಿತ್ತು. ಹೀಗಿರುವಲ್ಲಿ ಆತನು ಅಲೆಗ್ಸಾಂಡರನಿಗೆ ಮಣಿದಾನೇನು ? ಇದೇ ಸನಾತನ ಸಂಸ್ಕೃತಿಯ ವೈಶಿಷ್ಟ್ಯವು.

**ದಿವೋ ರುಕ್ಮ ಉರುಚಕ್ಷಾ ಉದೇತಿ**
**ದೂರೇಽರ್ಥಸ್ತರಣಿರ್ಭ್ರಾಜಮಾನಃ ।**
**ನೂನಂ ಜನಾಃ ಸೂರ್ಯೇಣ ಪ್ರಸೂತಾ**
**ಅಯನ್ನರ್ಥಾನಿ ಕೃಣ್ವನ್ನಪಾಂಸಿ ॥ ೩೧ ॥**

**"ಅಂತರಿಕ್ಷಕ್ಕೆ ಆಭರಣಪ್ರಾಯನಾದ ಹಾಗೂ ಹೆಚ್ಚಿನ ತೇಜಸ್ವಿಯಾದ ಸೂರ್ಯನು ದೂರದೇಶಗಳನ್ನೆಲ್ಲ ವ್ಯಾಪಿಸಿದವನಾಗಿ ಹೊಳೆಯುತ್ತಾ ಉದಯಿಸುತ್ತಿರುವನು. ಆಗ ಜನರೆಲ್ಲರೂ ಆ ಪ್ರೇರಕನಾದ ಸೂರ್ಯನಿಂದ ಅನುಜ್ಞಾತರಾಗಿ ತಾವು ಮಾಡಿ ಪಡೆಯಬೇಕಾಗಿರುವ ಫಲಗಳಿಗಾಗಿ ಕರ್ಮಗಳನ್ನು ಮಾಡುವರು" ಎಂದಭಿಪ್ರಾಯ.**

ಈ ಮಂತ್ರದಲ್ಲಿ ವಿಶೇಷಸ್ತುತಿಯೇನೂ ಕಂಡುಬರುವದಿಲ್ಲವಾದರೂ ಸೂರ್ಯನು ಅಂತರಿಕ್ಷಕ್ಕೆ ಒಡವೆಯಂತೆ ಇದ್ದಾನೆಂಬ ಸ್ತುತಿಯಿದೆ. "ಹತ್ತು ಕಟ್ಟುವ

---

1. ಈ ಮಹಾತ್ಮನ ಹೆಸರು DIOGENES ಎಂದು ಬಲ್ಲವರು ತಿಳಿಸುತ್ತಾರೆ.

ಕಡೆ ಒಂದು ಮುತ್ತು ಕಟ್ಟು" ಎಂದಂತೆ ಸೂರ್ಯನು ಅಂತರಿಕ್ಷದಲ್ಲಿರುವ ಜ್ಯೋತಿಗಳೆಲ್ಲಕ್ಕೂ ಆಭರಣಪ್ರಾಯನಾಗಿರುವನು. ಆತನ ಬೆಳಕಿನ ಪ್ರಭಾವದಿಂದ ಭೂಮಿಯಲ್ಲಿರುವ ಜನರಿಗೆ ಅಂತರಿಕ್ಷದಲ್ಲಿರುವ ಇನ್ನೂ ಎಷ್ಟೋ ಜ್ಯೋತಿರ್ಮಂಡಲಗಳು ಕಾಣುವದೇ ಇಲ್ಲ. ಅದಕ್ಕಾಗಿಯೇ ವಿಜ್ಞಾನಿಗಳು ಸೂರ್ಯಗ್ರಹಣಸಮಯವನ್ನು ಕಾದಿದ್ದು ಮಂಡಲವು ಪೂರ್ಣವಾಗಿ ಮುಚ್ಚಲ್ಪಟ್ಟಾಗ ಏನಾದರೂ ಹೊಸಬೆಳಕು ಕಂಡೀತೋ - ಎಂದು ವೀಕ್ಷಿಸುವರು. ಆದರೆ ಫಲಿತಾಂಶವೇನೂ ಆಶಾದಾಯಕವಾಗಿರುವದಿಲ್ಲ. ಸೂರ್ಯನು ಬೆಳಗುತ್ತಿರುವವರೆಗೆ ಭೂಲೋಕದ ಜನರ ದೃಷ್ಟಿಯಿಂದ ಆತನನ್ನು ಮೀರಿಸುವ ಜ್ಯೋತಿಯು ಕಂಡುಬರಲಾರದು. ಹೀಗೆ ಸೂರ್ಯಭಗವಂತನು ಅಂತರಿಕ್ಷಾಭರಣನಾಗಿ ವಿರಾಜಮಾನನಾಗಿರುವನು.

ಇನ್ನು ಆತನು ಕರ್ಮಗಳಿಗೆ ಪ್ರೇರಕನೆಂಬುದನ್ನು ಈಗಾಗಲೇ ತಿಳಿಸಿದ್ದಾಗಿದೆ. ವಿಶೇಷವಾಗಿ ಫಲಾರ್ಥಿಗಳಾದವರು ಮಾಡುವ ಶಾಸ್ತ್ರೀಯಕರ್ಮಗಳನ್ನು ತೆಗೆದುಕೊಂಡರೆ ಫಲಪ್ರಾಪ್ತಿಗೂ ಕರ್ಮಾನುಷ್ಠಾನಕ್ಕೂ ಅಂತರವಿದ್ದೇ ಇರುವದರಿಂದ "ಇಂಥವನು ಇಂಥ ಕರ್ಮವನ್ನು ಮಾಡಿರುವದರಿಂದ ಇಂಥ ಫಲಕ್ಕೆ ಅರ್ಹನಾಗಿರುತ್ತಾನೆ." ಎಂದು ದೃಢಪಡಿಸಲು ಸೂರ್ಯನೇ ಬೇಕು. ಆದ್ದರಿಂದಲೇ ಅವನನ್ನು "ಕರ್ಮಸಾಕ್ಷಿ"ಯೆಂದು ಕರೆಯುವರು. ಮತ್ತು ಕರ್ಮಗಳಿಗೆ ದೊರಕುವ ಫಲಗಳೆಂಬಿವು ಕೂಡ ಸೂರ್ಯನ ಪ್ರಸಾದವಾಗಿಯೇ ಇರುವವು. ಉದಾಹರಣೆಗೆ ಒಬ್ಬನು ಪುತ್ರಕಾಮೇಷ್ಟಿಯನ್ನು ಮಾಡಿ ಗಂಡುಮಗುವನ್ನು ಪಡೆದದ್ದೇ ಆದರೆ ಆತನ ಜೀವನ, ಪತ್ನಿಯ ಜೀವನ ಹಾಗೂ ಆಕೆಯು ಗರ್ಭವತಿಯಾಗಿ ಸುಖಪ್ರಸವವನ್ನು ಪಡೆಯುವದು, ಅನಂತರ ಆ ಮಗುವಿನ ಆಯುರಾರೋಗ್ಯಾದಿ ಸಮಸ್ತಫಲಗಳಿಗೂ ಸೂರ್ಯನೇ ದಾತೃವಾಗಿರುವನಲ್ಲವೆ? ಹೀಗೆಯೇ ಲೌಕಿಕಕರ್ಮಗಳಿಗೂ ತಿಳಿಯಬೇಕು. ಒಬ್ಬ ಹೂದೋಟದವನು ಹಾಕಿರುವ ಗಿಡಗಳಲ್ಲಿ ಹೂವುಗಳು ಅರಳಲು ಸೂರ್ಯನೇ ಬೇಕು. ಹೀಗೆ ಪ್ರಾಣಿಗಳ ಸಮಸ್ತಕರ್ಮಗಳಿಗೂ ಫಲಗಳಿಗೂ ಮೂಲನಾದ ಆದಿತ್ಯನಿಗೆ ನಮಸ್ಕಾರ - ಎಂದಭಿಪ್ರಾಯ.

**ಯತ್ರಾಚಕ್ರುರಮೃತಾ ಗಾತುಮಸ್ಮೈ, ಶ್ಯೇನೋ**
**ನ ದೀಯನ್ ಅನ್ವೇತಿ ಪಾಥಃ ।**
**ಪ್ರತಿ ವಾಂ ಸೂರ ಉದಿತೇ ವಿಧೇಮ**
**ನಮೋಭಿರ್ಮಿತ್ರಾವರುಣೋತ ಹವ್ಯೈಃ** ॥ ೩೨ ॥

**"ಅಮೃತರಾದ ದೇವತೆಗಳು ಅಂತರಿಕ್ಷದಲ್ಲಿ ಸೂರ್ಯನಿಗೆ ಮಾರ್ಗದರ್ಶನವನ್ನು ಮಾಡಿದವರಾಗಿರುವರು. ಆ ಮಾರ್ಗದಲ್ಲಿಯೇ ಸುಪರ್ಣನಂತೆ ಆದಿತ್ಯನು ಸಾಗುತ್ತಿರುವನಷ್ಟೆ! ಆತನ ಉದಯದ ಅನಂತರ, ಎಲೈ ಮಿತ್ರಾವರುಣದೇವತೆಗಳಿರಾ, ನಿಮ್ಮನ್ನು ಪ್ರಾತಃ ಸವನಕಾಲದಲ್ಲಿ ನಾವು ಹವಿಸ್ಸುಗಳಿಂದ ಆರಾಧಿಸುವೆವು" - ಎಂದು ಅಭಿಪ್ರಾಯ.**

ಈ ಮಂತ್ರದಲ್ಲಿ ಅರ್ಧಭಾಗವು ಸೂರ್ಯನ ಸ್ತುತಿಯಾಗಿದೆ. ಉಳಿದ ಭಾಗವು ಮಿತ್ರಾವರುಣರನ್ನು ಕುರಿತ ಪೂಜಾಪರಿಚರ್ಯೆಗಳ ರೂಪವಾಗಿದೆ. ದೇವತೆಗಳೆಲ್ಲರೂ ಸೂರ್ಯನಿಗೆ ಮಿತ್ರರು. ಸೂರ್ಯನೂ ಎಲ್ಲಾ ದೇವತೆಗಳಿಗೂ ಮಿತ್ರನು. ಆದ್ದರಿಂದ ಕಾಲಗಣನೆಯ ನಿಮಿತ್ತವಾಗಿ ಸೂರ್ಯನು ಸಂಚಾರಮಾಡಲು ಅನುಕೂಲಿಸುವಂತೆ ಪೂರ್ವಪಶ್ಚಿಮವಾಗಿ ಸೂರ್ಯನ ಪಥವನ್ನು ದೇವತೆಗಳು ಗೊತ್ತುಪಡಿಸಿಕೊಟ್ಟಿದ್ದಾರೆ. ಆ ಹಾದಿಯನ್ನೇ ಹಿಡಿದು ಆದಿತ್ಯನು ಚಲಿಸುವಾಗ ಪ್ರಾತಃ, ಮಧ್ಯಾಹ್ನ, ಸಾಯಂಕಾಲಗಳು ಸಂಭವಿಸುತ್ತವೆ. ಇದರಿಂದ ಯಜಮಾನರುಗಳಿಗೆ ಆಯಾ ಸವನ (Period)ಕ್ಕೆ ತಕ್ಕಂತೆ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಲು ಸಾಧ್ಯವಾಗುತ್ತದೆ. ಹೀಗೆ ಪರಸ್ಪರಮಿತ್ರರಾಗಿ ನಡೆದುಕೊಳ್ಳುವ ದೇವತೆಗಳಲ್ಲಿ ಸೂರ್ಯನು ಒಬ್ಬನಾಗಿದ್ದು ಜಗಚ್ಚಕ್ರಪ್ರವೃತ್ತಿಗೆ ನಿಮಿತ್ತನಾಗಿದ್ದಾನೆ. ಒಬ್ಬ ಋಷಿಯು (ವಸಿಷ್ಠನು) ಈ ನಿಯಮವನ್ನು ಕಂಡುಕೊಂಡವನಾಗಿ ಈ ಮಂತ್ರದಲ್ಲಿ ಸೂರ್ಯನನ್ನು ಮಿತ್ರನೆಂದೂ ಶೋಭನವಾದ ಪತನವುಳ್ಳ ಶ್ಯೇನದಂತೆ ಗಂಭೀರವಾಗಿ ಸಂಚರಿಸುತ್ತಿರುವ ಕ್ರಿಯಾಶೀಲನೂ ದಕ್ಷನೂ ಆದ ದೇವತೆಯೆಂದೂ ಸ್ತುತಿಸುತ್ತಿದ್ದಾನೆ. ಇದರಿಂದ ಕಾಲದ ಬೆಲೆಯು ಏನೆಂಬುದು ತಿಳಿದೀತು. ನಾವು ಸೋಮಾರಿಗಳಾಗಿ ಕೂತಿದ್ದಲ್ಲಿ ಸೂರ್ಯನೇನೂ ಕಾಯುವದಿಲ್ಲ. ಆದ್ದರಿಂದಲೇ ಕಳೆದುಹೋದ ಕಾಲವು ಹಿಂದುರುಗಿ ಬರುವದಿಲ್ಲ. ಈ ಅರ್ಥದಲ್ಲಿ ಹಣಕ್ಕಿಂತಲೂ ಕರ್ತವ್ಯನಿಷ್ಠರಿಗೆ ಕಾಲವೇ ಹೆಚ್ಚು ಬೆಲೆಯುಳ್ಳದ್ದಾಗಿರುವದು. ನಮಗೆ ಕೆಲವು ಸಂದರ್ಭಗಳಲ್ಲಿ ಹಣವು ಸಾಲದಿದ್ದರೆ ಬೇರೊಬ್ಬರಿಂದ ಸಾಲವಾಗಿ ಪಡೆದುಕೊಂಡು ವ್ಯವಹಾರವನ್ನು ದಾಟಿಸಬಹುದು. ಆದರೆ ಸಮಯವನ್ನು ಹಾಗೆ ಸಾಲವಾಗಿ ಪಡೆಯಲಾದೀತೆ? ಇದನ್ನೇ ಕುರಿತು ಶ್ರೀಶಂಕರಾಚಾರ್ಯರು "ಕಾಲಃ ಕ್ರೀಡತಿ ಗಚ್ಛತ್ಯಾಯುಃ" ಎಂದು ಎಚ್ಚರಿಸಿದ್ದಾರೆ. ಹೀಗಿರುವಲ್ಲಿ ಕೆಲವರು ಸುಮ್ಮನೆ ಹರಟೆ ಹೊಡೆಯುತ್ತಾ ತಮಗೆ ಸಂಬಂಧವಿಲ್ಲದ ಮಾತುಗಳನ್ನು ಆಡುತ್ತಾ ಕಾಲಕಳೆಯುತ್ತಿದ್ದರೆ, ಅಂಥ ಅಪವ್ಯಯನಿರತರಾದವರನ್ನು ನೋಡಿದರೆ ನಿಜವಾಗಿಯೂ ಎಷ್ಟು ಕೋಪವುಂಟಾದೀತು? ದೇವತೆಗಳ ಪ್ರಪಂಚದಲ್ಲಿಯೂ ಹೀಗೆಯೇ ವ್ಯರ್ಥಕಾಲಕ್ಷೇಪವನ್ನು ಮಾಡುತ್ತಾ ಕಾಲಕಾಲಕ್ಕೆ ವಿಹಿತಕರ್ಮಗಳನ್ನು ಮಾಡದೆ ಇರುವ ಅಜ್ಞರ ಬಗ್ಗೆ ಕೋಪವಿದೆ. ಆದ್ದರಿಂದ ನಾವು 'ಬೈದು

ಹೇಳುವವರು ಬದುಕುವದಕ್ಕೆ ಹೇಳಿದರು' ಎಂದೇ ತಿಳಿಯಬೇಕು ಇರಲಿ. ಯಾವ ದೇವತೆಯನ್ನೇ ತೆಗೆದುಕೊಳ್ಳಿರಿ, ಕ್ರಿಯಾರಹಿತನೂ ಆಲಸ್ಯವಂತನೂ ಆ ಗುಂಪಿನಲ್ಲಿ ಸಿಗುವದೇ ಇಲ್ಲ. ಆದ್ದರಿಂದ ದೇವತಾನುಸಂಧಾನವು- ಅದರಲ್ಲಿಯೂ ಸೂರ್ಯನ ನಿಗದಿಯಾದ ಕಾಲಗತಿಯು - ನಮ್ಮನ್ನು ಎಚ್ಚರಿಸುತ್ತದೆ. ಈಗಿನ ಕಾಲಕ್ಕೆ ಗಡಿಯಾರಗಳೇನೊ, ಕಾಸಿಗೊಂದು ಕೊಸರಿಗೊಂದು ಸಿಗುತ್ತವೆ. ಆದರೆ ಕಾಲಕ್ಕೆ ಬೆಲೆಯನ್ನು ನೀಡಿ ಸಮಯಕ್ಕೆ ಸರಿಯಾಗಿ ನಡೆದುಕೊಳ್ಳುವವರು ಮಾತ್ರ ಅಪರೂಪವಾಗುತ್ತಿದ್ದಾರೆ. ಹೀಗೆ ಕಾಲಾತೀತವಾಗಿ ನಡೆದುಕೊಳ್ಳುವದನ್ನು ದೇವಹೇಳನ (ಅಪರಾಧ)ವೆಂದೇ ಶಾಸ್ತ್ರದಲ್ಲಿ ಕರೆದಿದ್ದಾರೆ. ಆದರೆ ಯಾರು ಸೂರ್ಯಾರಾಧಕರೋ ಅವರು ಈ ಪಾಪಕ್ಕೆ ಸಿಲುಕುವದಿಲ್ಲ. ಏಕೆಂದರೆ ಅವರಿಗೆ ಕಾಲಕ್ಕೆ ಸರಿಯಾಗಿ ನಡೆದುಕೊಳ್ಳುವದೇ ಸ್ವಭಾವವಾಗಿಬಿಟ್ಟಿರುತ್ತದೆ. ನಾವು ಈ ಕಾಲವನ್ನು ಸಾರ್ಥಕಗೊಳಿಸಿಕೊಂಡು ಕರ್ತವ್ಯಗಳನ್ನು ಕೈಬಿಡದೆ ಮಾಡಿ ದೇವತೆಗಳ ಪ್ರಸಾದಕ್ಕೆ ಪಾತ್ರರಾಗಬೇಕಾದರೆ ಸೂರ್ಯನನ್ನೇ ಆಶ್ರಯಿಸಬೇಕು ಎಂಬುದು - ಋಷಿಯ ಅಭಿಪ್ರಾಯ. ಇನ್ನು ಮಿತ್ರಾವರುಣರೆಂಬ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವ ಪುಣ್ಯಕಾರ್ಯವು ಬೆಳಗಿನ ವೇಳೆಯಲ್ಲಿಯೇ ಸೂರ್ಯೋದಯವಾದೊಡನೆ ಆಗಬೇಕು. ಕಾಲಕ್ಕೆ ಸರಿಯಾಗಿ ಹಾಜರಾಗದಿದ್ದರೆ ಒಬ್ಬ ಅಧಿಕಾರಿಯನ್ನು ಕೂಡ ನಾವು ಭೇಟಿಮಾಡಲಾಗುವದಿಲ್ಲ. ಹೀಗಿರುವಲ್ಲಿ ಕಾಲವನ್ನು ಮೀರಿ ಆರಾಧನೆಮಾಡಿದರೆ ದೇವತೆಗಳು ಸಿಕ್ಕುತ್ತಾರೆಯೆ ? ಆದ್ದರಿಂದ ಶಾಸ್ತ್ರಗಳು ಗೊತ್ತಾದ ಕಾಲವನ್ನು ಮೀರಿ ಮಾಡಿದ ಆರಾಧನಾ - ಜಪ - ಯಜ್ಞಾದಿಗಳು ರಾಕ್ಷಸರ ಪಾಲಾಗಿಬಿಡುತ್ತವೆ ಎಂದು ಹೇಳುತ್ತವೆ. ನಮ್ಮ ಆಲಸ್ಯಕ್ಕೆ ಇದೇ ಶಿಕ್ಷೆಯಾಗಿರುತ್ತದೆ. ಇನ್ನುಮೇಲಾದರೂ ನಾವು ದೇವತಾಕಾರ್ಯಗಳನ್ನು ಸಕಾಲಕ್ಕೆ ಮಾಡುವದನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಳ್ಳಬೇಕು. ಆರಾಧ್ಯ ದೇವತೆಗಳನ್ನು ಯಾವ ಕಾರಣದಿಂದಲೂ ಕಾಯಿಸಬಾರದು. ದೇವಾಲಯದ ಅರ್ಚಕರುಗಳು ಕಟ್ಟುನಿಟ್ಟಾಗಿ ಈ ಶಿಸ್ತನ್ನು ಜಾರಿಗೆ ತರಬೇಕು. ಆಗ್ಗೆ ವೈದಿಕಕರ್ಮಗಳ ಮಹತ್ತ್ವವೇನೆಂಬುದು ಜನರಿಗೆ ತಿಳಿದೀತು. ಅಂತೂ ಮಿತ್ರಾವರುಣರುಗಳನ್ನು ಸೂರ್ಯೋದಯಕಾಲಕ್ಕೆ ಆರಾಧಿಸಿರಿ ಎಂದು ಇಲ್ಲಿ ತಿಳಿಸಿದೆ.

**ಉದುತ್ಯದ್ದರ್ಶತಂ ವಪುರ್ದಿವ ಏತಿ ಪ್ರತಿಹ್ವರೇ ।**
**ಯದೀಮಾಶುರ್ವಹತಿ ದೇವ ಏತಶೋ**
**ವಿಶ್ವಸ್ಮೈ ಚಕ್ಷಸೇ ಅರಮ್ ॥ ೩೩ ॥**

**"ದರ್ಶನೀಯವಾದ ಆ ಮಂಡಲವು ಅಂತರಿಕ್ಷಕ್ಕೆ ಸಮೀಪದಲ್ಲಿ (ದ್ಯುಲೋಕದಲ್ಲಿ) ಉದಯಿಸುತ್ತಿದೆ. ಈ ಮಂಡಲವನ್ನು ಹರಿತವರ್ಣವಾದ ಅಶ್ವವು ಎಲ್ಲರಿಗೂ ದೃಷ್ಟಿಗೋಚರವಾಗುವದಕ್ಕಾಗಿ ಧರಿಸುತ್ತಿದೆ" - ಎಂದು ಅಭಿಪ್ರಾಯ.**

ಈ ಮಂತ್ರದಲ್ಲಿ ಸೂರ್ಯಮಂಡಲದ ವರ್ಣನೆಯಿದೆ. ಮಂಡಲದ ಒಳಗೆ ಇರುವ ದೇವತೆಯೇ ಸೂರ್ಯನೆನಿಸಿದರೂ ವ್ಯವಹಾರದಲ್ಲಿ ಮಂಡಲ ವಿಶಿಷ್ಟವಾಗಿಯೇ ಸೂರ್ಯನೆಂದು ಕರೆಯುತ್ತಾರೆ. 'ರಾಯರು ಬರುತ್ತಿದ್ದಾರೆ' ಎಂಬಲ್ಲಿ ಕೋಟು ಶರಟುಗಳ ಸಮೇತವಾಗಿಯೇ ವ್ಯವಹಾರಮಾಡುವಂತೆಯೇ ಇದು. ಈ ಸೂರ್ಯಮಂಡಲವು ಚಿನ್ನದ ಪಾತ್ರೆಯಂತೆ ಆದಿತ್ಯನನ್ನು ಮುಚ್ಚಿರುತ್ತದೆ. ಎಂದರೆ ಆಧ್ಯಾತ್ಮಿಕದೃಷ್ಟಿಯಿಂದ ಚೇತನನಾದ ಅಂತರ್ಯಾಮಿ ಪುರುಷನನ್ನು ಅಜ್ಞ ಜನರಿಗೆ ಮರೆಮಾಡಿರುತ್ತದೆ. ಇದು ಹಾಗಿರಲಿ. ಮಂಡಲದ ಮಹಿಮೆಯೂ ಕಡಿಮೆಯದಲ್ಲ. ಅದು ಅಂತರಿಕ್ಷದಲ್ಲಿ ತೋರಿಕೊಂಡಂತೆಲ್ಲ ಜಗತ್ತು ಕತ್ತಲೆಯಿಂದ ಮುಕ್ತಿಯನ್ನು ಹೊಂದುತ್ತದೆ. ಮಂಡಲವೇ ರಥವೆನಿಸಿದಾಗ ಕಿರಣಗಳೇ ಕುದುರೆಯೆನಿಸುವವು. ಕಿರಣಗಳ ಪ್ರಸಾರವೇ ಕುದುರೆಯ ಗತಿಯೆನಿಸುತ್ತದೆ. ಇದರಿಂದ ಲೋಕವೆಲ್ಲವೂ ಎಚ್ಚರವಾಗುತ್ತದೆ. ಹೀಗೆ ಕಿರಣಗಳ ದರ್ಶನಕಾಲವು ಸೂರ್ಯನ ಆರಾಧನಾಸಮಯವಾಗಿದೆ. ಸೂರ್ಯಮಂಡಲವನ್ನು ಯಾರೂ ಪ್ರದಕ್ಷಿಣೆ ಮಾಡಲಾಗುವದಿಲ್ಲವಾದ್ದರಿಂದ ಋಷಿಗಳು ಅದನ್ನು ಪ್ರತಿನಿಧಿಸುವ ಬೀಜಾಕ್ಷರಮಂತ್ರಗಳಿಂದ ಒಂದು ಕಲ್ಪಿತಮಂಡಲವನ್ನು ರಚಿಸಿ ಆರಾಧಕರಿಗೆ ಅನುಕೂಲಮಾಡಿಕೊಟ್ಟಿದ್ದಾರೆ. ಇಂಥ ಮಂಡಲವು ರಂಗೋಲಿಗಳಿಂದ ಅಥವಾ ಚಿನ್ನ, ಬೆಳ್ಳಿ, ತಾಮ್ರಗಳಿಂದ ನಿರ್ಮಿಸಲ್ಪಟ್ಟಿರುತ್ತದೆ. ಭಾವುಕರಾದವರು ಇದನ್ನೇ ಸೂರ್ಯನೆಂದು ಭಾವಿಸಿ ಪೂಜಿಸಿ ಪ್ರದಕ್ಷಿಣೆ ನಮಸ್ಕಾರಗಳನ್ನರ್ಪಿಸಬೇಕು. ಈ ಕ್ರಮವು ಸ್ಮೃತಿವಿಹಿತವಾಗಿದ್ದರೂ ಶ್ರುತಿಯ ಬೆಂಬಲವುಳ್ಳದ್ದಾಗಿರುವದರಿಂದ ಅನುಷ್ಠೇಯವಾಗಿದೆ. ಸೂರ್ಯನಮಸ್ಕಾರವು ಆರೋಗ್ಯಸಾಧನೆಗೆ ಹೆಚ್ಚಿನ ಉಪಾಯವಾಗಿದೆ. ಆದರೆ ಇತ್ತೀಚೆಗೆ ಇದನ್ನು ಯಾಂತ್ರಿಕವಾಗಿ ಮಾಡುವದು ಕಂಡುಬರುತ್ತಿದೆ. ಹಾಗಾಗದಂತೆ ಸೂರ್ಯನಮಸ್ಕಾರವನ್ನು ಮಾಡುವ ಸಾಧಕರೆಲ್ಲರಿಗೂ ಸೂರ್ಯಭಗವಂತನ ವೈದಿಕವಾದ ಮಹಿಮೆಯನ್ನೂ ವಿಭೂತಿಗಳನ್ನೂ ಮನದಟ್ಟುಮಾಡಿಕೊಡುವದು ಒಳ್ಳೆಯದು. ಇದರಿಂದ ಮುಂದೆ ಅಧ್ಯಾತ್ಮ ಪ್ರಪಂಚಕ್ಕೆ ಪ್ರವೇಶವು ಸುಲಭವಾಗಲಿದೆ. ಸೂರ್ಯನಮಸ್ಕಾರಕ್ರಮವನ್ನು ಸಚಿತ್ರವಾಗಿ ವಿವರಿಸುವ ಅನೇಕ ಗ್ರಂಥಗಳಿರುವದು ನಿಜ. ಕೆಲವು ವೇಳೆ ಅವುಗಳಲ್ಲಿ ಯೋಗಶಾಸ್ತ್ರದ ಪ್ರಕ್ರಿಯೆಯನ್ನೂ ಸೇರಿಸಿ ಪ್ರಾಣಾಯಾಮಾದಿಗಳೊಡನೆ ವ್ಯಾಖ್ಯಾನ ಮಾಡಲಾಗಿರುತ್ತದೆ. ಇವೆಲ್ಲ ಯುಕ್ತವಾದದ್ದೇ ಆದರೂ ದೇವತೆಯ ವಿಷಯಕ್ಕೆ

'ಭಾವನೆ'ಯಾಗಲಿ 'ಜ್ಞಾನ'ವಾಗಲಿ ಇಲ್ಲವಾದರೆ ಸಾಧಕನಿಗೆ ಬೇಸರವುಂಟಾಗಿ ನಡುವೆ ಬಿಟ್ಟುಬಿಡುವ ಸಂಭವವಿರುತ್ತದೆ. ಈ ಕೊರತೆಯನ್ನು ವೇದಗಳಲ್ಲಿರುವ ತಿಳಿವಳಿಕೆಯಿಂದಲೇ ತುಂಬಬೇಕು.

**ಶೀರ್ಷ್ಣಃ ಶೀರ್ಷ್ಣೋ ಜಗತಸ್ತಸ್ಥುಷಸ್ಪತಿಂ ಸಮಯಾ ವಿಶ್ವಮಾರಜಃ ।**
**ಸಪ್ತ ಸ್ವಸಾರಃ ಸುವಿತಾಯ ಸೂರ್ಯಂ ವಹಂತಿ ಹರಿತೋ ರಥೇ ॥ ೩೪ ॥**

**"ಸರ್ವಕ್ಕೂ ಪ್ರಧಾನನಾಗಿ ತಲೆಗಳಿಗೆಲ್ಲ ಮುಖ್ಯತಲೆಯಂತೆ (ಅಗ್ರಗಣ್ಯನಾಗಿರುವ), ಸ್ಥಾವರಜಂಗಮಗಳಿಗೆ ಪತಿಯಾದ ಸೂರ್ಯನನ್ನು ಲೋಕಕಲ್ಯಾಣಕ್ಕಾಗಿ ಎಲ್ಲಾ ಪ್ರಾಣಿಗಳಿಗೂ ಅಗತ್ಯವಾದಷ್ಟು ಮಾತ್ರ ಹತ್ತಿರದಲ್ಲಿ (ಸಂಚರಿಸುವಂತೆ) ಏಳು ಕುದುರೆಗಳು ಬೇರೆಯ ಯಾವ ಬೆಂಬಲವನ್ನೂ ಬಯಸದೆ ಕೊಂಡೊಯ್ಯುತ್ತಿರುವವು"- ಎಂದರ್ಥ.**

ಈ ಮಂತ್ರದಲ್ಲಿ ಮುಖ್ಯವಾಗಿ ಸೂರ್ಯನನ್ನು ಸ್ಥಾವರಜಂಗಮಗಳಿಗೆಲ್ಲ ಕಿರೀಟಪ್ರಾಯನಾದ ಪುಣ್ಯಜೀವಿಯೆಂದು ಹೊಗಳಿದೆ. ಸೃಷ್ಟಿಯಲ್ಲಿ ನಿಜವಾಗಿಯೂ ಸೂರ್ಯನಂಥ ಪವಿತ್ರವೂ ತೇಜೋಮಯವೂ ಉನ್ನತವೂ ಆದ ಮತ್ತೊಂದು ವಸ್ತುವಿಲ್ಲ. ಸೂರ್ಯವಂಶದ ರಾಜರುಗಳೆಲ್ಲ ಪರಿಶುದ್ಧರೆನಿಸಿ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆದಿದ್ದಾರೆ. ಶ್ರೀರಾಮನೇ ಇದಕ್ಕೆ ಉದಾಹರಣೆ. ಅವನ ಸತ್ಯವನ್ನೂ ಪರಾಕ್ರಮವನ್ನೂ ಪಾವಿತ್ರ್ಯವನ್ನೂ ಪ್ರಶ್ನಿಸುವಂತೆಯೇ ಇಲ್ಲ. ಹೀಗಿರುವಲ್ಲಿ ಸೂರ್ಯನಲ್ಲಿರುವ ಈ ಗುಣಗಣಗಳ ವಿಷಯಕ್ಕೆ ಹೇಳುವದಾದರೂ ಏನಿದೆ ? ಇಂಥ ಸೂರ್ಯನನ್ನು ಜಗತ್ತಿನ ಪ್ರಾಣಿಗಳಿಗೆ ಉಪಯೋಗಕರನನ್ನಾಗಿ ಮಾಡಬೇಕಾದರೆ ಅವನನ್ನು ರಥದಲ್ಲಿ ಕುಳ್ಳಿರಿಸಿ ನಡೆಯಿಸಿಕೊಂಡು ಹೋಗುವ ಕುದುರೆಗಳು ಜವಾಬ್ದಾರಿಯನ್ನು ನಿರ್ವಹಿಸಬೇಕಾಗುವದು. ಅವುಗಳನ್ನೇ ಇಲ್ಲಿ ಹೊಗಳಲಾಗಿದೆ. ಹೇಗೆಂದರೆ : ಸೂರ್ಯನು ಭೂಮಿಗೆ ಈಗಿರುವ ದೂರಕ್ಕಿಂತ ಹತ್ತಿರ ಬಂದರೆ ಪ್ರಾಣಿಗಳು ಸುಟ್ಟೇಹೋಗಿಬಿಡುವವು. ದೂರವಾದರೆ ಶೀತದಿಂದ ಸಾಯುವರು. ಹೀಗಾಗದಂತೆ ರಥಚಲನೆಯನ್ನು ಮಾಡಬೇಕಾದರೆ ಕುದುರೆಗಳ ಮಹತ್ತ್ವವು ಎಂಥದ್ದಾಗಿರಬೇಕು ? ಸಾರಥಿಯೇನೋ ರಥವನ್ನು ನಿಯಂತ್ರಿಸುವದು ನಿಜ. ಆದರೆ ಅವನೇ ರಥವನ್ನೆಳೆದಾನೆ ? ಬಸ್ಸು ಕೆಟ್ಟುಹೋದರೆ ಡ್ರೈವರ್ ಏನು ಮಾಡಬಲ್ಲನು ? ಇಲ್ಲಿಯಾದರೊ, ಕುದುರೆಗಳು ಬಸ್ಸಿನಂತೆ ಅಚೇತನಗಳಲ್ಲ. ಮತ್ತು ಇಂಧನವಿದ್ದರೆ ಮಾತ್ರ ನಡೆಯುವ ಯಂತ್ರದಂತೆ ಪರತಂತ್ರಗಳಲ್ಲ. ಅವು ಸ್ವತಃ ಸಮರ್ಥವಾಗಿದ್ದು ತಮ್ಮ ಸ್ವಂತಬಲದಿಂದಲೇ ಸೂರ್ಯರಥವು ಒಂದಿಷ್ಟೂ ಮಾರ್ಗತಪ್ಪದೆ ಒಂದೇ ರೀತಿಯಲ್ಲಿ ಸಾಗುವಂತೆ ನೋಡಿಕೊಳ್ಳುತ್ತಾ ಗುರಿಯನ್ನು ಮುಟ್ಟುವವು. ಹೀಗೆ ಕುದುರೆಗಳ ಮಹತ್ತ್ವವನ್ನು ಮನಗಂಡ ವಸಿಷ್ಠನೆಂಬ ಋಷಿಯು ಈ ಮಂತ್ರದಲ್ಲಿ

ವಿಶೇಷವಾಗಿ ಕುದುರೆಗಳನ್ನೂ ಹೊಗಳಿರುತ್ತಾನೆ. ಒಟ್ಟಿನಲ್ಲಿ ಸೂರ್ಯಭಗವಂತನ ಪರಿವಾರವೆಲ್ಲವೂ ಆತನಂತೆಯೇ ಜಗತ್ತಿನ ಕ್ಷೇಮಲಾಭಗಳಿಗೆ ಬದ್ಧಕಂಕಣವಾಗಿದ್ದುಕೊಂಡು ಸ್ತೋತ್ರಾರ್ಹವಾಗಿರುವವು - ಎಂದು ಅಭಿಪ್ರಾಯ.

**ತಚ್ಚಕ್ಷುರ್ದೇವಹಿತಂ ಶುಕ್ರಮುಚ್ಚರತ್ ।**
**ಪಶ್ಯೇಮ ಶರದಃ ಶತಂ ಜೀವೇಮ ಶರದಃ ಶತಮ್ ॥ ೩೫ ॥**

**"ಆ ಪ್ರಸಿದ್ಧವಾದ ಎಲ್ಲವನ್ನೂ ಬೆಳಗುವ, ದೇವತೆಗಳಿಗೆ ಪ್ರಿಯವಾದ ನಿರ್ಮಲವಾದ ಸೂರ್ಯಮಂಡಲವು ಮೇಲೇರಿರುತ್ತದೆ. ಅದನ್ನು ನಾವು ನೂರು ವರ್ಷಗಳ ಕಾಲವೂ ನೋಡುತ್ತಿರೋಣ; ಬದುಕಿರೋಣ" ಎಂದಭಿಪ್ರಾಯವು.**

ಹಿಂದಿನ ಮಂತ್ರದಂತೆಯೇ ಇಲ್ಲಿಯೂ ಸೂರ್ಯಮಂಡಲವನ್ನು ಸ್ತುತಿಸಿರುತ್ತದೆ. ಆ ಮಂಡಲವು ದೇವತೆಗಳಿಗೆ ಹಿತವಾಗಿದೆ ; ಪ್ರಿಯವಾಗಿದೆ. ಏಕೆಂದರೆ ಮಾರ್ತಾಂಡಮಂಡಲೋದಯವನ್ನು ಅನುಸರಿಸಿಯೇ ತಿಥಿ, ವಾರ, ನಕ್ಷತ್ರ, ಯೋಗ, ಕರಣ - ಗಳೆಂಬ ಪಂಚಾಂಗಗಳನ್ನು ಉಚ್ಚಾರ ಮಾಡಿ ದೇವತೆಗಳಿಗೆ ಉಪಚಾರಗಳು ಅರ್ಪಿಸಲ್ಪಡುವವು. ಪೂಜಾದಿಕೈಂಕರ್ಯಗಳು ನೆರವೇರುವವು ಮತ್ತು ಮಂಡಲವು ಮೇಲಕ್ಕೇರಿದಂತೆಲ್ಲ ಪ್ರಾತಃ-ಸಂಗವ-ಮಧ್ಯಾಹ್ನ ಕಾಲಗಳನ್ನೂ, ಪಶ್ಚಿಮಕ್ಕೆ ಇಳಿದಂತೆಲ್ಲ ಅಪರಾಹ್ನ-ಸಾಯಂಕಾಲಗಳನ್ನೂ ಗಣನೆಮಾಡಲಾಗುತ್ತದೆ. ಆಯಾಕಾಲಕ್ಕೆ ಸರಿಯಾಗಿ ದೇವ-ಪಿತೃ-ಮನುಷ್ಯರಿಗೆ ಹವಿರರ್ಪಣೆಯನ್ನೂ ಕರ್ಮಾನುಷ್ಠಾನವನ್ನೂ ಬಲ್ಲವರು ಮಾಡುವರು. ಇದೆಲ್ಲವೂ ಸೂರ್ಯಮಂಡಲ ದರ್ಶನದಿಂದಲೇ ಸಾಧ್ಯವಾಗುವದು. ಆದ್ದರಿಂದ ದೇವಹಿತವೆಂದು ಸ್ತುತಿಸಲಾಗಿದೆ.

ಇಂಥ ಮಂಡಲವನ್ನು ನಾವು ನೋಡುತ್ತಾ ನೂರುವರ್ಷಗಳು ಬದುಕಿರೋಣ ಎಂಬಿದು ಬಹಳ ಅರ್ಥಗರ್ಭಿತವಾಗಿದೆ. ಮನುಷ್ಯನ ಆಯುಸ್ಸು ನೂರು ವರ್ಷಗಳೆಂಬಿದು ಒಂದು ಲೆಕ್ಕಾಚಾರ. ಇದನ್ನು ಶ್ರುತಿಯಲ್ಲಿಯೇ ಹೇಳಿದೆ. ಆದರೆ ನೂರು ಎಂಬಿದನ್ನು ಕರಾರುವಾಕ್ಕಾಗಿ ಹಿಡಿಯದೆ ಮುಂದುವರೆಯಿಸಲೂಬಹುದು. ಉಪನಿಷತ್ತಿನಲ್ಲಿ ಒಂದು ಕಡೆ ಪುರುಷನ ಆಯುಷ್ಯವನ್ನು (24 + 44 + 48) 116 ವರ್ಷಗಳೆಂದಿದೆ. ಜ್ಯೋತಿಷ್ಕರು 120 ವರ್ಷಗಳವರೆಗೂ ಹಿಗ್ಗಿಸಿದ್ದಾರೆ. ಹೇಗೇ ಆಗಲಿ, ಜೀವಿಸಿರುವಷ್ಟು ಕಾಲವೂ ನಾವು ಸೂರ್ಯಮಂಡಲದರ್ಶನವನ್ನು ಮಾಡುತ್ತಿರಬೇಕಾದರೆ ನಮಗೆ ಕಣ್ಣುಗಳು ಚೆನ್ನಾಗಿ ಕಾಣುತ್ತಿರಬೇಕು. ಅದು ಸೂರ್ಯನ ಅನುಗ್ರಹದಿಂದಲೇ ಸಾಧ್ಯವಾಗುತ್ತದೆ. ಹಾಗೆಯೇ ನಮ್ಮ ಉಳಿದ ಎಲ್ಲಾ ಇಂದ್ರಿಯಗಳೂ ದೇಹವೂ ಮನಸ್ಸೂ ನಿತ್ಯನೂತನವಾಗಿದ್ದು, ಬದುಕಿರುವಷ್ಟೂ

ಕಾಲವೂ ದೇವತಾರಾಧನೆಗೂ ಲೋಕಸೇವೆಗೂ ವಿನಿಯೋಗವಾಗಬೇಕಾದರೆ ವೇದಾತ್ಮನಾದ ಆದಿತ್ಯನ ಕೃಪೆಯು ತೀರ ಅಗತ್ಯವೆಂದು ಹೇಳಬೇಕಾಗಿಲ್ಲ. ಯಜುರ್ವೇದಿಗಳು ಇದೇ ಅರ್ಥದ ಮಂತ್ರವೊಂದನ್ನು ಮಾಧ್ಯಾಹ್ನಿಕ ಸಂಧ್ಯಾಕಾಲಕ್ಕೆ ಸೂರ್ಯಪ್ರಾರ್ಥನೆಗಾಗಿ ಬಳಸುವದನ್ನೂ ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

**ಬಣ್ಮಹಾಂ ಅಸಿ ಸೂರ್ಯ ಬಳಾದಿತ್ಯ ಮಹಾಂ ಅಸಿ ।**
**ಮಹಸ್ತೇ ಸತೋ ಮಹಿಮಾ ಪನಸ್ಯತೇಽದ್ಧಾ ದೇವ ಮಹಾನ್ ಅಸಿ ॥ ೩೬ ॥**

**"ಎಲೈ ಸೂರ್ಯನೆ, ನೀನು ತೇಜಸ್ಸಿನಿಂದ ಹೆಚ್ಚಿನವನಾಗಿರುವೆ. ಇದು ನಿಜ. ಹಾಗೆಯೇ ಬಲಿಷ್ಠನೂ ಆಗಿರುವೆ. ನಿನ್ನ ಮಹಿಮೆಯು ಬಲ್ಲವರಿಂದ ಸ್ತುತಿಸಲ್ಪಡುತ್ತಿದೆ. ಎಲೈ ದೇವನೆ, ವೀರ್ಯದಿಂದಲೂ ನೀನೂ ಅಧಿಕನೆಂಬುದು ಸತ್ಯವೇ" ಎಂದಭಿಪ್ರಾಯ.**

ಈ ಮಂತ್ರದಲ್ಲಿ ಸೂರ್ಯದೇವತೆಯನ್ನು ಪ್ರತ್ಯಕ್ಷವಾಗಿ ಕಂಡುಕೊಂಡ ಋಷಿಯು ಅವನನ್ನು ಹೊಗಳುತ್ತಿದಾನೆ. ಸೂರ್ಯನು ಎಲ್ಲರಿಗೂ ಪ್ರತ್ಯಕ್ಷನೇ ಅಲ್ಲವೆ? ಎಂದರೆ ಹಾಗಲ್ಲ. ಸೂರ್ಯಮಂಡಲವೂ ಅಲ್ಲಿಂದ ಹೊರಟಿರುವ ಕಿರಣಗಳೂ ಎಲ್ಲರಿಗೂ ಕಾಣುತ್ತಿದ್ದು ಅನುಭವದಲ್ಲಿರುವದು ನಿಜ. ಸೂರ್ಯನೊಬ್ಬನೇ ಏಕೆ? ಭೂಮಿ, ಚಂದ್ರ, ಜಲ, ಗಾಳಿ - ಎಲ್ಲವೂ ಸರ್ವಮಾನವರಿಗೂ ಗೋಚರವಾಗಿಯೇ ಇವೆ. ಆದರೆ ಆಯಾ ಅಭಿಮಾನಿ ದೇವತೆಗಳ ಸಾಕ್ಷಾತ್ಕಾರವು ಮಾತ್ರ ಎಲ್ಲರಿಗೂ ಆಗಿಲ್ಲ. ಹಾಗೆ ಆಗಿದ್ದರೆ, ದೇವತೆಯ ಅರಿವು ಅಂತಃಕರಣದಲ್ಲಿ ಮೂಡಿದ್ದರೆ, ಮನುಷ್ಯನು ಇಷ್ಟೊಂದು ಪಾಪಗಳನ್ನು ಎಂದಿಗೂ ಮಾಡುತ್ತಿರಲಿಲ್ಲ. ಆದ್ದರಿಂದ ಋಷಿಗಳಾದವರಿಗೆ ಮಾತ್ರವೇ ದೇವತಾಸಾಕ್ಷಾತ್ಕಾರವೂ ದೇವತೆಗಳೊಡನೆ ವ್ಯವಹಾರವೂ ಸಿದ್ಧಿಸಿರುತ್ತದೆ. ಋಷಿ-ಎಂಬ ಶಬ್ದವೇ ಅತೀಂದ್ರಿಯವಾದ ಜ್ಞಾನವುಳ್ಳವನನ್ನು ಹೇಳುತ್ತದೆ. ನಾವೆಲ್ಲರೂ ಋಷಿಗಳ ವಂಶದವರೇ ಆದರೂ ದೇವತಾಜ್ಞಾನಸಾಕ್ಷಾತ್ಕಾರಗಳಿಲ್ಲದೆ "ನುಷಿ"(ಕೀಟ)ಗಳಾಗಿದ್ದೇವೆ. ಈಗಲಾದರೂ ಋಷಿಗಳ ಸಂಸ್ಕೃತಿಯ ಕಡೆಗೆ ನಾವು ತಿರುಗಬೇಕು. ಪ್ರಕೃತ ಜಮದಗ್ನಿಋಷಿಯು ಕಂಡುಕೊಂಡಿರುವ ಈ ಋಕ್ಕಿನಲ್ಲಿ ಸೂರ್ಯನನ್ನು ನೇರವಾಗಿ ಸ್ತುತಿಸಿದೆ. ಸಂಬೋಧನಾವಿಭಕ್ತಿಪ್ರಯೋಗವು ಆತನ ದೇವತಾಜ್ಞಾನವನ್ನು ಎತ್ತಿಹಿಡಿಯುತ್ತಿದೆ. ಸೂರ್ಯನನ್ನು ತೇಜೋವಂತನೆಂದೂ, ಬಲಿಷ್ಠನೆಂದೂ, ವೀರ್ಯವಂತನೆಂದೂ, ತಿಳಿಸುತ್ತಾ ಇದು ನಿಜ, (ಬಟ್) ಎಂದು ಋಷಿಯು ಎರಡು ಬಾರಿ ಆಣೆಮಾಡಿ ಹೇಳುತ್ತಿದಾನೆ. ಹೀಗೆ ಹೇಳಬೇಕಾದರೆ ಅವನಿಗೆ ಆದಿತ್ಯನ ಯೋಗೈಶ್ವರ್ಯಶಕ್ತಿವಿಭೂತಿಮಹಿಮಾದಿಗಳು ಚೆನ್ನಾಗಿ

ಮನದಟ್ಟಾಗಿರುವವೆಂಬುದರಲ್ಲಿ ಸಂಶಯವೇ ಇಲ್ಲ. ಆದಿತ್ಯನ ಮಹಿಮೆಯನ್ನು ಹೆಚ್ಚುಹೆಚ್ಚಾಗಿ ನಾವು ಅನುಸಂಧಾನ ಮಾಡಿಕೊಳ್ಳಬೇಕಾದರೆ ಶ್ರೀಮದ್ರಾಮಾಯಣಾಂತರ್ಗತವಾದ "ಆದಿತ್ಯಹೃದಯ" ಸ್ತೋತ್ರವನ್ನು ಸೂರ್ಯನಮಸ್ಕಾರ ಪೂಜಾವಿಧಿಗಳಲ್ಲಿ ಅಡಕವಾಗಿರುವ ಪೌರಾಣಿಕಶ್ಲೋಕಗಳನ್ನೂ ಪಠನ ಮಾಡಬೇಕು. ಅರ್ಥವಿಚಾರವನ್ನೂ ಮಾಡಬೇಕು. ಆಗ ಆದಿತ್ಯದೇವತೆಯಲ್ಲಿ ನಮಗೆ ಭಕ್ತಿಶ್ರದ್ಧೆಗಳು ಸಹಜವಾಗಿ ಉಂಟಾಗಲಿವೆ.

**ಬಟ್ ಸೂರ್ಯ ಶ್ರವಸಾ ಮಹಾನ್ ಅಸಿ**
**ಸತ್ರಾ ದೇವ ಮಹಾನ್ ಅಸಿ ।**
**ಮಹ್ನಾ ದೇವಾನಾಮಸುರ್ಯಃ**
**ಪುರೋಹಿತೋ ವಿಭುಜ್ಯೋತಿರದಾಭ್ಯಮ್ ॥ ೩೭ ॥**

**"ಎಲೈ ಸೂರ್ಯನೆ, ನೀನು ಶ್ರವಣದಿಂದ ಹಿರಿಯನಾಗಿರುವೆ. ಎಲೈ ದೇವನೆ, ದೇವತೆಗಳ ನಡುವೆ ನೀನು ಹೆಚ್ಚಿನವನಾಗಿರುವೆ. ರಾಕ್ಷಸರನ್ನು ಸಂಹರಿಸುವವನೂ ಆಗಿರುವೆಯಷ್ಟೆ. ಹಾಗೂ ದೇವತೆಗಳಿಗೆ ಹಿತೋಪದೇಶವನ್ನು ನೀಡುವವನಾಗಿರುವೆ; ನಿನ್ನ ಜ್ಯೋತಿಯು ಯಾರೊಬ್ಬರಿಂದಲೂ ಹಿಂಸೆ ಮಾಡಲಾಗದ್ದಾಗಿರುವದು" ಎಂದು ಅಭಿಪ್ರಾಯ.**

ಈ ಮಂತ್ರದಲ್ಲಿಯೂ ಋಷಿಯು ಸೂರ್ಯನ ಹೆಚ್ಚುಗಾರಿಕೆಯನ್ನು ತಿಳಿಸಿದ್ದಾನೆ. ಆತನು ಶ್ರವಣದಲ್ಲಿ ಹಿರಿಯನು ಎಂದರೆ ಪ್ರಜಾಪತಿರೂಪನಾಗಿ ಬ್ರಹ್ಮವಿದ್ಯೆಯನ್ನು ಪರಮಾತ್ಮನಿಂದ ಮೊದಲು ಪಡೆದುಕೊಂಡವನು. 'ಭಗವಂತನು ಹಿರಣ್ಯಗರ್ಭನನ್ನು ಉಂಟುಮಾಡಿ ಅವನಿಗೆ ವೇದಗಳನ್ನು ಅನುಗ್ರಹಿಸಿದನು' ಎಂದು ಉಪನಿಷತ್ತಿನಲ್ಲಿದೆ. ಗೀತೆಯಲ್ಲಿಯೂ "ಇಮಂ ವಿವಸ್ವತೇ ಯೋಗಮ್ ಎಂಬ ಶ್ಲೋಕದಲ್ಲಿ ಅಧ್ಯಾತ್ಮಯೋಗವನ್ನು ಸೃಷ್ಟಿಯ ಆದಿಯಲ್ಲಿ ಭಗವಂತನು ಸೂರ್ಯನಿಗೆ ಪ್ರಪ್ರಥಮವಾಗಿ ಉಪದೇಶಿಸಿದನು - ಎಂದೇ ಇದೆ. ಆದ್ದರಿಂದ ಈತನು ಶ್ರೋತೃಗಳಲ್ಲಿ ಹಿರಿಯನೆನಿಸಿರುವನು. ಆದ್ದರಿಂದಲೇ ದೇವತೆಗಳಲ್ಲಿ ಹೆಚ್ಚಿನವನಾಗಿರುವನು. ಹಿರಣ್ಯಗರ್ಭನ ಪುತ್ರನಾಗಿ ಅವತರಿಸಿರುವ ಈ ಅರ್ಕನು ಹಿಂದಿನ ಸೃಷ್ಟಿಯಲ್ಲಿದ್ದ ಪಾಪಗಳನ್ನೆಲ್ಲ ಸುಟ್ಟುಬೂದಿಮಾಡಿಕೊಂಡು ಪವಿತ್ರರಾದ, ಜೀವರುಗಳ ನಡುವೆ ಪ್ರಥಮನಾಗಿರುವನು. ಆದ್ದರಿಂದಲೇ ಇವನಿಗೆ ಆದಿತ್ಯ ಪದವಿಯು ದೊರಕಿರುವದು. ಇನ್ನು ಈತನು ರಾಕ್ಷಸಸಂಹಾರಕನು ಹೇಗೆಂದರೆ : ಇವನ ಹಾಜರಿಯಲ್ಲಿ ರಾಕ್ಷಸರು ಕಾಣಿಸಿಕೊಳ್ಳುವದೇ ಇಲ್ಲ. ಅವರೆಲ್ಲ ನಿಶಾಚರರು (ರಾತ್ರಿಯಲ್ಲಿಯೇ ಸಂಚಾರಮಾಡುವವರು) ಎನಿಸಿರುವರು. ಸೂರ್ಯನು ಗೋಚರಿಸುವಷ್ಟು ಕಾಲವೆಲ್ಲವೂ ದೇವಪಿತ್ರಾದಿಪುಣ್ಯಜೀವಿಗಳಿಗೇ ವ್ಯವಹಾರಕ್ಕೆ ತಕ್ಕದ್ದಾಗಿರುವದು. ಹೀಗೆ ಸೂರ್ಯನು ಅಸುರರನ್ನೆಲ್ಲ ಹಿಮ್ಮೆಟ್ಟಿಸಿರುವನು, ಮತ್ತು

ಈತನು ಒಂದು ರೀತಿಯಲ್ಲಿ ದೇವತೆಗಳಿಗೆ 'ಪುರೋಹಿತ' ನೆನಿಸಿರುವನು. ಅಗ್ನಿಯು ದೇವತೆಗಳ ಪುರೋಗಾಮಿಯಾಗಿದ್ದು ಹವಿಸ್ಸನ್ನು ತಂದು ತಲುಪಿಸುವದರಿಂದ ಪುರೋಹಿತನೆನಿಸಿದರೆ ಈತನು ದೇವತೆಗಳಿಗೆ ತತ್ತ್ವೋಪದೇಶವನ್ನು ನೀಡುವದರಿಂದ ಪುರೋಹಿತನಂತೆ ಹಿತಚಿಂತಕನಾಗಿರುವನು. ಸೂರ್ಯನೇ ಪ್ರಜಾಪತಿಯೆನಿಸಿರುವದರಿಂದ ಇವನಿಂದ ಇಂದ್ರ-ವಿರೋಚನರು ಆತ್ಮೋಪದೇಶವನ್ನು ಪಡೆದುಕೊಂಡದ್ದು, ಹಾಗೂ ಯಾಜ್ಞವಲ್ಕ್ಯರು ನೇರವಾಗಿ ಈತನಿಂದ ಬ್ರಹ್ಮ(ವೇದ)ವನ್ನು ಪಡೆದುಕೊಂಡದ್ದು - ಸಹ ಪುರಾಣಪ್ರಸಿದ್ಧವಾಗಿದೆ. ಇನ್ನು ಈತನ ಬೆಳಕನ್ನು ಯಾರೂ ತಡೆಯಲಾರರು, ಪೀಡಿಸಲಾರರು - ಎಂಬುದೂ ಗೊತ್ತಿರುವ ವಿಷಯವು. ಅಪರೂಪಕ್ಕೆ ರಾಹುಕೇತುಗಳು ಕೆಲವು ಘಳಿಗೆಗಳ ಕಾಲ ಗ್ರಹಣಕಾಲದಲ್ಲಿ ಈತನನ್ನು ಪೀಡಿಸಿದಂತೆ ಕಂಡರೂ ಆಗಲೂ ಪೂರ್ಣವಾಗಿ ಕತ್ತಲಾಗುವದಿಲ್ಲ. ಆದ್ದರಿಂದ ಸೂರ್ಯಜ್ಯೋತಿಯು ಅಪ್ರತಿಹತವಾಗಿರುವದು. ಇಂಥ ಸೂರ್ಯನನ್ನು ಋಷಿಯು ಹೊಗಳಿರುತ್ತಾನೆ.

**ನಮೋ ಮಿತ್ರಸ್ಯ ವರುಣಸ್ಯ ಚಕ್ಷಸೇ**
**ಮಹೋ ದೇವಾಯ ತದೃತಂ ಸಪರ್ಯತ ।**
**ದೂರೇದೃಶೇ ದೇವಜಾತಾಯ ಕೇತವೇ**
**ದಿವಸ್ಪುತ್ರಾಯ ಸೂರ್ಯಾಯ ಶಂಸತ ॥ ೩೮ ॥**

**"ಎಲೈ ಋತ್ವಿಜರುಗಳಿರಾ, ನೀವು ಮಿತ್ರಾವರುಣದೇವತೆಗಳನ್ನು ಕಂಡುಕೊಂಡಿರುವ ಮಹಾದೇವನಾದ ಹಾಗೂ ದೂರದಲ್ಲಿದ್ದರೂ ಕಾಣಿಸಿಕೊಳ್ಳುತ್ತಿರುವ, ದೇವತೆಗಳಿಗಾಗಿಯೇ ಹುಟ್ಟಿರುವ, ಜಗತ್ತಿಗೆಲ್ಲ ಜ್ಞಾನಪ್ರದನೂ, ದ್ಯುಲೋಕಪುತ್ರನೂ ಆದ ಸೂರ್ಯನಿಗೆ ನಮಸ್ಕಾರ ಮಾಡಿ ಯಾಗಾದಿಕರ್ಮಗಳನ್ನು ಆಚರಿಸಿ ಆತನನ್ನು ಉಪಚರಿಸಿರಿ" ಎಂದರ್ಥ.**

ಇಲ್ಲಿಂದ ಮುಂದಕ್ಕೆ ಹನ್ನೆರಡು ಋಕ್ಕುಗಳು ಪೂರ ಸೂರ್ಯನ ಸ್ತೋತ್ರರೂಪವಾಗಿವೆ. ಸೂರ್ಯನ ಮಗನೇ ಆದ **'ಅಭಿತಪಾ'** ಎಂಬ ಋಷಿಯು ಇವುಗಳ ದ್ರಷ್ಟಾರನಾಗಿದ್ದಾನೆ. ದ್ವಾದಶಾದಿತ್ಯರನ್ನು ಕುರಿತು ಈ ದ್ವಾದಶಋಕ್ಕುಗಳು ಹೊರಟಿವೆ. ಇವುಗಳನ್ನು ಸೂರ್ಯೋದಯಕ್ಕೆ ಸ್ವಲ್ಪ ಮುಂಚೆಯೇ ಪಠನ ಮಾಡಲಾರಂಭಿಸಿ ಸೂರ್ಯೋದಯದ ಸಮಯಕ್ಕೆ ಇಲ್ಲಿರುವ ನಾಲ್ಕನೆಯ ಮಂತ್ರವಾದ 'ಯೇನ ಸೂರ್ಯ ಜ್ಯೋತಿಷಾ' ಎಂಬಲ್ಲಿಂದ ಪಠಿಸುತ್ತಾ ವಾಗ್ಯತನಾಗಿ ಉಪಸ್ಥಾನಮಾಡಬೇಕೆಂದು ವೇದಭಾಷ್ಯಕಾರರು ತಿಳಿಸಿರುತ್ತಾರೆ. ಇಲ್ಲಿ ಸೂರ್ಯನು ಮಿತ್ರಾವರುಣರೆಂಬ ದೇವತೆಗಳನ್ನೂ ತನ್ನಲ್ಲಿ ಕಂಡುಕೊಂಡು - ಎಂದರೆ ಅರಿತುಕೊಂಡು ಆ ದೇವತೆಗಳಿಗೂ ಆತ್ಮನಾಗಿರುವನೆಂದೂ ದೇವತೆಗಳೆಲ್ಲರಿಗೂ ದೇವನೆನಿಸಿ ಮಹಾದೇವನೆಂದು ಹೊಗಳಲ್ಪಡುವನೆಂದೂ ತಿಳಿಸಿದೆ. ಮತ್ತು

ಬಹುದೂರದಲ್ಲಿದ್ದರೂ ಎಲ್ಲರಿಗೂ ಈತನು ಕಾಣಿಸಿಕೊಳ್ಳುವದು ವಿಶೇಷವೇ ಸರಿ. ಏಕೆಂದರೆ ಆಕಾಶದಲ್ಲಿ ಕೆಲವೇ ಮೈಲುಗಳ ಎತ್ತರದಲ್ಲಿರುವ ವಸ್ತುವೂ ಕೂಡ ನಮಗೆ ದೃಗ್ಗೋಚರವಾಗುವದಿಲ್ಲ. ಹೀಗಿರುವಲ್ಲಿ ಲಕ್ಷಾಂತರಮೈಲುಗಳ ಎತ್ತರದಲ್ಲಿರುವ ಸೂರ್ಯನು ಎಲ್ಲರಿಗೂ ತಾನು ಸ್ಪಷ್ಟವಾಗಿ ಕಾಣಿಸಿಕೊಳ್ಳುವದರ ಜೊತೆಗೆ ನಮ್ಮೊಡನೆ ಭೂಮಿಯಲ್ಲಿರುವ ವಸ್ತುಗಳೂ ನಮಗೆ ಕಾಣಿಸುವಂತೆ ಬೆಳಗುತ್ತಾನೆಂದರೆ ಆತನ ಮಹಿಮೆಯನ್ನು ಹೇಳತಕ್ಕದ್ದೇನಿದೆ? ಇಂಥ ಸೂರ್ಯನು ದ್ಯುಲೋಕದಲ್ಲಿ ಕಾಣಿಸಿಕೊಳ್ಳುವದರಿಂದ ದ್ಯುಲೋಕಪುತ್ರನೆಂದಿದೆ. ಜಗತ್ತಿನ ಜನರಿಗೆ ಈತನು ಲೌಕಿಕಪಾರಮಾರ್ಥಿಕಜ್ಞಾನವನ್ನೂ ಅಂತರಂಗಪ್ರೇರಕನಾಗಿ ನೀಡುತ್ತಿರುವನು. ಇಂಥವನಿಗೆ ನಿಮ್ಮ ಕರ್ಮಗಳನ್ನೆಲ್ಲ ಸಮರ್ಪಣೆ ಮಾಡಿರಿ - ಎಂದಭಿಪ್ರಾಯ.

**ಸಾ ಮಾ ಸತ್ಯೋಕ್ತಿಃ ಪರಿಪಾತು ವಿಶ್ವತೋ ದ್ಯಾವಾ ಚ ಯತ್ರ ತತನನ್ನಹಾನಿ ಚ ।**
**ವಿಶ್ವಮನ್ಯನ್ನಿವಿಶತೇ ಯದೇಜತಿ ವಿಶ್ವಾಹಾಪೋ ವಿಶ್ವಾಹೋದೇತಿ ಸೂರ್ಯಃ ॥ ೩೯ ॥**

**"ನಾನು ಹೇಳಿದ ಆ ನಿಜವಾದ ನುಡಿಯು ನನ್ನನ್ನು ಸರ್ವತ್ರವೂ ಕಾಪಾಡಲಿ ; ಆ ಮಾತಿನ ಬಲದಿಂದ ದ್ಯುಲೋಕ, ಪೃಥಿವ್ಯಾದಿಗಳೂ, ಹಗಲುಗಳೂ, ರಾತ್ರಿಗಳೂ ಉಂಟಾದವು. ಅಲ್ಲಿಯೇ ಪ್ರಪಂಚವೆಲ್ಲವೂ ಅಡಕವಾಗಿದ್ದು ವಿಶ್ರಾಂತಿಯನ್ನು ಹೊಂದಿದೆ. ಈ ಭೂತಗಳು ಪ್ರಾಣನವ್ಯಾಪಾರಮಾಡುವದು, ನೀರು ಹರಿಯುತ್ತಿರುವದು, ಸೂರ್ಯನು ಉದಯಿಸುತ್ತಿರುವದು - ಎಲ್ಲವೂ ಆ ಸತ್ಯದಿಂದಲೇ ; ಅದು ನನ್ನನ್ನು ರಕ್ಷಿಸಲಿ ! " ಎಂದಭಿಪ್ರಾಯ.**

ಈ ಮಂತ್ರದಲ್ಲಿ - ಹಿಂದೆ ಸೂರ್ಯನನ್ನು ಸ್ತುತಿಸುವಾಗ ಪ್ರಸ್ತಾಪಿಸಿರುವ ಎಲ್ಲ ವಿಷಯಗಳೂ ಸತ್ಯವಾಗಿರುವದರಿಂದ ಆ ಸತ್ಯವಾಕ್ಯವು ನನ್ನನ್ನು ಕಾಪಾಡಲಿ ! ಎಂದು ಋಷಿಯು ಪ್ರಾರ್ಥಿಸಿದ್ದಾನೆ. ಇದರಿಂದ ಸೂರ್ಯನನ್ನು ಕುರಿತು ಈವರೆಗೆ ಮಾಡಿರುವ ಸ್ತೋತ್ರಗಳೆಲ್ಲವೂ ಯಥಾಶ್ರುತವೂ ವಸ್ತುನಿಷ್ಠವೂ ಆಗಿದ್ದು ಅವು ಸತ್ಯವಾದ ಗುಣಗಳ ಗಾನವೇ ಹೊರತು ಮೃಷಾಸ್ತುತಿಯಲ್ಲ - ಎಂದು ತಿಳಿಸಿದಂತಾಗಿದೆ. ಏಕೆಂದರೆ ಸ್ತುತಿಯನ್ನು ಮಾಡುವಾಗ ಸುಳ್ಳುಸುಳ್ಳಾಗಿಯೂ ಹೊಗಳುವದುಂಟು. ಈಗಿನ ಕಾಲದಲ್ಲಂತೂ ಹೆಚ್ಚಿನ ಜಾಹಿರಾತುಗಳಿಗೆ ಅನೃತವೇ ಮೂಲವಾಗಿರುತ್ತದೆ. ಅವುಗಳಿಂದ ಆಕರ್ಷಿತರಾಗಿ ಮೋಸಹೋಗುವವರೂ ಇದ್ದಾರೆ. ಆದರೆ ಋಷಿಯ ಬಾಯಲ್ಲಿ ಅಂಥ ಟೊಳ್ಳುಮಾತುಗಳು ಬರಬಲ್ಲವೆ? ಎಂದಿಗೂ ಇಲ್ಲ. ಸೂರ್ಯನ ವಿಷಯವಾಗಿ ಪ್ರಸ್ತಾಪಿಸಲ್ಪಟ್ಟಿರುವ ಹಾಗೂ ಸೂರ್ಯಾಂತರ್ಗತನಾದ ಪರಮಪುರುಷನನ್ನೂ ಅವನ ವಿಭೂತಿಶಕ್ತಿ

ಮಹಿಮೈಶ್ವರ್ಯಾದಿಗಳನ್ನೂ ಸರ್ವಜ್ಞತ್ವಸರ್ವಶಕ್ತಿತ್ವಸರ್ವೇಶ್ವರತ್ವಾದಿಗಳನ್ನೂ ಕುರಿತು ವರ್ಣಿಸಿರುವ ಸ್ತುತಿಗಳೆಲ್ಲವೂ ನಿತ್ಯಸತ್ಯವಾಗಿರುವವು. ''ಆ ಸತ್ಯದ ಬಲದಿಂದಲೇ ಗಾಳಿಯು ಬೀಸುತ್ತಿರುವದು, ಸೂರ್ಯನು ಬೆಳಗುತ್ತಿರುವದು, ದ್ಯುಲೋಕವು ನಿಂತಿರುವದು, ಮಾತುಗಳಿಗೆಲ್ಲ ಬೆಲೆಯುಂಟಾಗಿರುವದು. ಹೀಗೆ ಸತ್ಯದಲ್ಲಿ ಎಲ್ಲವೂ ಅಡಗಿವೆ. ಆದ್ದರಿಂದ ಸತ್ಯವೇ ಪರಮದೈವವು ಎಂದು ತೈತ್ತಿರೀಯೋಪನಿಷತ್ತಿನಲ್ಲಿದೆ. ಅದೇ ಅಭಿಪ್ರಾಯವನ್ನು ಈ ಮಂತ್ರವೂ ಪುಷ್ಟೀಕರಿಸುತ್ತಿದೆ. ಇಡಿಯ ಪ್ರಪಂಚಕ್ಕೇ ಈಗಲೂ ಸತ್ಯವೇ ಆಧಾರವಾಗಿದೆ. ಸತ್ಯವಂತನನ್ನು ಜನರು ನಂಬುತ್ತಾರೆಯೇ ಹೊರತು ಸುಳ್ಳು ಹೇಳುವವನನ್ನಲ್ಲ. ವ್ಯಾಪಾರ - ವ್ಯವಹಾರಗಳಲ್ಲಿ ಕೂಡ ನೂರಕ್ಕೆ ತೊಂಭತ್ತರಷ್ಟು ಈಗಲೂ ಸತ್ಯ ಎಂದರೆ ನಂಬಿಕೆಯ ಬಲದಿಂದಲೇ ಸಾಗುತ್ತಿದೆ. ಸುಳ್ಳು ಹೇಳುವವನು ಸಮೂಲವಾಗಿ ನಾಶವಾಗಿಬಿಡುವನು. ಮೇಲುನೋಟಕ್ಕೆ ಕೆಲವು ಸಲ ಸುಳ್ಳು ಗೆದ್ದಂತೆ ಕಂಡುಬಂದರೂ ಗೋಪ್ಯವಾಗಿರುವ ಸತ್ಯವು ಯಾವಾಗಲಾದರೊಮ್ಮೆ ತನ್ನನ್ನು ಪ್ರಕಟಿಸಿಕೊಂಡೇ ತೀರುತ್ತದೆ. ಆದ್ದರಿಂದ ಎಂದಿಗೂ ಸತ್ಯವನ್ನು ಸೋಲಿಸಲಾಗುವದಿಲ್ಲ. ಕಾಮ, ಭಯ, ಲೋಭವಶರಾಗಿ ಸತ್ಯವನ್ನು ಬಿಡಬಾರದು. ಸತ್ಯವೇ ಪರಮದೈವವು. ಸತ್ಯವೇ ನಾರಾಯಣನು, ನಾರಾಯಣನೇ ಸತ್ಯವು. ಹೀಗೆ ಸತ್ಯವೇ ಎಲ್ಲೆಲ್ಲಿಯೂ ನೆಲಸಿರುವದು. ಅದನ್ನು ನಾನು ಪ್ರಮಾಣವಾಗಿಟ್ಟುಕೊಂಡು ನನ್ನ ಪುರುಷಾರ್ಥಗಳನ್ನು ಸಾಧಿಸಿಕೊಳ್ಳುವೆನು - ಎಂದು ಇಲ್ಲಿ ಋಷಿಯು 'ಸತ್ಯ'ನೆಂಬ ಹೆಸರಿನಿಂದ ಆದಿತ್ಯನನ್ನು ಸ್ತುತಿಸಿರುತ್ತಾನೆ.

**ನ ತೇ ಅದೇವಃ ಪ್ರದಿವೋ ನಿವಾಸತೇ**
**ಯದೇತಶೇಭಿಃ ಪತರೈರಥರ್ಯಸಿ ।**
**ಪ್ರಾಚೀನಮನ್ಯದನುವರ್ತತೇ ರಜ**
**ಉದನ್ಯೇನ ಜ್ಯೋತಿಷಾಯಾಸಿ ಸೂರ್ಯ ॥ ೪೦ ॥**

**"ಎಲೈ ಸೂರ್ಯನೆ, ನಿನ್ನ ಸಮೀಪದಲ್ಲಿ ಪುರಾತನನಾಗಿದ್ದರೂ ಯಾವ ಅಸುರನೂ ವಾಸಮಾಡಲಾರನು. ಹೇಗೆಂದರೆ : ನೀನು ಓಡಾಡುವ ಸ್ವಭಾವದ ನಿನ್ನ ಕುದುರೆಗಳಿಂದ ರಥವನ್ನು ಜೋಡಿಸಲು ಬಯಸುವೆಯಾದರೆ (ಅಸುರರು ಇಲ್ಲವಾಗುವರು). ಮತ್ತು ನಿನ್ನ ಉದಯದೊಡನೆ ಮತ್ತೊಂದು ಬೆಳಕು ಯಾವಾಗಲೂ ಹಿಂಬಾಲಿಸುವದು" ಎಂದು ಮಂತ್ರಾರ್ಥ.**

ಈ ಮಂತ್ರದಲ್ಲಿ ಅದೇವಶಬ್ದದಿಂದ ರಾಕ್ಷಸನನ್ನು ಎಂದರೆ ಕತ್ತಲೆಯನ್ನು ಸ್ವೀಕರಿಸಬೇಕು. ಸೂರ್ಯನೊಡನೆಯಾಗಲಿ, ಅವನ ಹಿಂಬಾಲಕನಾಗಿಯಾಗಲಿ ಕತ್ತಲೆಯು ಇರುವದು ಸಾಧ್ಯವೆ ? ಆದ್ದರಿಂದ ಯಾವ ಕಡೆಗೆ ಸೂರ್ಯನು ತನ್ನ

ರಥದಲ್ಲಿ ಕುಳಿತು ಪ್ರಯಾಣಮಾಡುವನೋ ಅಲ್ಲಿ ಸೂರ್ಯನ ಮುಂದಾಗಲಿ, ಹಿಂದಾಗಲಿ ಯಾವ ಅಸುರನೂ ಹಿಂಬಾಲಿಸಲಾರನು. ಸೂರ್ಯೋದಯಕ್ಕೆ ಮುಂಚೆಯೇ ಅರುಣೋದಯವಾಗುವದೂ, ಸೂರ್ಯನು ಅಸ್ತನಾದಮೇಲೂ ತಿಳಿಬೆಳಕು ಸ್ವಲ್ಪ ಕಾಲವಿರುವದೂ ಪ್ರಸಿದ್ಧವಾಗಿದೆ. ಹೀಗೆ ಸೂರ್ಯನನ್ನು ಎಡೆಬಿಡದೆ ಆವರಿಸಿರುವ ಜ್ಯೋತಿಯು ಸೂರ್ಯನದೇ ಕೊಡುಗೆಯಾಗಿರುತ್ತದೆ ಮತ್ತು ಸೂರ್ಯನ ಬೆಳಕಿನ ಏಕದೇಶನಾದ ಚಂದ್ರನೂ, ಅಗ್ನಿಯೂ ಆದಿತ್ಯನ ಹಿಂಬಾಲಕರೆಂದು ಶಾಸ್ತ್ರಗಳಲ್ಲಿ ಕರೆದಿದೆ. ಚಂದ್ರನು ಸೂರ್ಯನೊಡನೆ ಇದ್ದಾಗ ಮಾತ್ರ ಕಾಣಿಸಿಕೊಳ್ಳುವದೇ ಇಲ್ಲ. ಇದೇ ಅಮಾವಾಸ್ಯೆಯು. ಹಾಗೆಯೇ ಸೂರ್ಯನಿಗೆ ದೂರನಾದಂತೆಲ್ಲ ಸ್ವಲ್ಪಸ್ವಲ್ಪವಾಗಿ ಕಾಣಿಸಿಕೊಳ್ಳುವದೂ ಸೂರ್ಯನ ಅನುಗ್ರಹದಿಂದಲೇ ಆಗಿರುತ್ತದೆ. ಚಂದ್ರನಿಗೆ ಸ್ವಂತವಾದ ಬೆಳಕಿರುವದಿಲ್ಲ. ಅಗ್ನಿಯಲ್ಲಾದರೋ ರಾತ್ರಿಕಾಲಕ್ಕೆ ಸೂರ್ಯನು ತನ್ನ ತೇಜಸ್ಸನಿಟ್ಟಿರುವನೆಂದೇ ವೇದವು ''ಅಗ್ನಿಂ ವಾ ಆದಿತ್ಯಃ ಸಾಯಂ ಪ್ರವಿಶತಿ'' ಎಂದು ಸ್ಪಷ್ಟವಾಗಿ ಹೇಳುತ್ತದೆ. ಸೂರ್ಯನ ಮರಿಬೆಳಕುಗಳಾದ ಚಂದ್ರಾಗ್ನಿಗಳ ಸನ್ನಿಧಾನದಲ್ಲಿ ಕೂಡ ಅಸುರರು ಸುಳಿಯಲಾರರೆಂದಮೇಲೆ ಸೂರ್ಯನ ಸಮೀಪದಲ್ಲಿ ಅವರು ಹೇಗೆ ತಾನೆ ಇದ್ದಾರು ? ಅಂತೂ ಜಗತ್ತಿಗೆ ಸೂರ್ಯನು ಏಕಮೇವಾದ್ವಿತೀಯವಾದ ಬೆಳಕಾಗಿದ್ದುಕೊಂಡು ತನ್ನ ಅಂಶಭೂತರಾದ ಚಂದ್ರಾಗ್ನಿಗಳೊಡನೆಯೂ ಪ್ರಕಟವಾಗುತ್ತಾ ಅಸುರರನ್ನು ನಾಶಗೊಳಿಸುತ್ತಿರುವನು. ಇಂಥ ಸೂರ್ಯನಿಗೆ ವಂದನೆಗಳು - ಎಂದು ಋಷಿಯ ಅಭಿಪ್ರಾಯ.

**ಯೇನ ಸೂರ್ಯ ಜ್ಯೋತಿಷಾ ಬಾಧಸೇ ತಮೋ**
**ಜಗಚ್ಚ ವಿಶ್ವಮುದಿಯರ್ಷಿ ಭಾನುನಾ ।**
**ತೇನಾಸ್ಮದ್ವಿಶ್ವಾಮನಿರಾಮನಾಹುತಿ**
**ಮಪಾಮೀವಾಮಪದುಃಷ್ವಪ್ನ್ಯಂ ಸುವ ॥ ೪೧ ॥**

**"ಎಲೈ ಸೂರ್ಯನೆ, ಯಾವ ಬೆಳಕಿನಿಂದ ನೀನು ಕತ್ತಲೆಯನ್ನು ಬಾಧಿಸುವೆಯೋ ಹಾಗೂ ಯಾವ ಕಿರಣಗಳಿಂದ ವಿಶ್ವವನ್ನು ಎಚ್ಚರಗೊಳಿಸುವೆಯೋ ಆ ತೇಜಸ್ಸಿನಿಂದ ನಮ್ಮಗಳ ಅನ್ನಾಭಾವವನ್ನು ಹೋಗಲಾಡಿಸುವವನಾಗು ; ಮತ್ತು (ಅದಕ್ಕೆ ಕಾರಣವಾದ) ಅನಾಹುತಿಗಳನ್ನೂ ರೋಗರುಜಿನಗಳನ್ನೂ ಕಳೆಯುವವನಾಗು ; ಮತ್ತು ನಮ್ಮ ದುಃಸ್ವಪ್ನಗಳನ್ನೂ ಪರಿಹರಿಸುವವನಾಗು" ಎಂದಭಿಪ್ರಾಯ.**

ಈ ಮಂತ್ರದಲ್ಲಿ ಮತ್ತೊಮ್ಮೆ ಸೂರ್ಯನ ತೇಜಸ್ಸನ್ನು ಕುರಿತು ಜಗತ್ತನ್ನು ಎಚ್ಚರಗೊಳಿಸುವಂತೆಯೂ ಅನ್ನಾಭಾವವನ್ನು ನೀಗುವಂತೆಯೂ ಪ್ರಾರ್ಥಿಸಿದೆ. ವಿಶ್ವದ ಎಲ್ಲಾ ದೇಶಗಳಲ್ಲಿಯೂ ಸೂರ್ಯನು ಉದಯಿಸುತ್ತಾನಾದರೂ

ಸೂರ್ಯನೇ ಅನ್ನವನ್ನು ನೀಡುವ ದೇವತೆಯೆಂಬುದು ಆಫ್ರಿಕ - ಮುಂತಾದ ಅನೇಕ ದೇಶಗಳ ಜನರಿಗೆ ಗೊತ್ತಿರಲಾರದು. ನಾವು ಅಂಥ ದೇಶಗಳಲ್ಲಿ ಹುಟ್ಟದೆ ದೈವಾನುಗ್ರಹದಿಂದ ಭಾರತದಲ್ಲಿ ಜನಿಸಿ ಋಷಿಸಂಸ್ಕೃತಿಯ ನೆರವಿನಿಂದ ಅನ್ನವನ್ನು ಪಡೆದಿರುತ್ತೇವೆ. ಭಾರತೀಯನಾದ ಈ ಮಂತ್ರದ್ರಷ್ಟೃವಾದ ಋಷಿಯು ಸೂರ್ಯನನ್ನು ಕತ್ತಲೆಯನ್ನು ಕಳೆಯುವ ಜ್ಯೋತಿ ಎಂದು ಮಾತ್ರ ಪರಿಗಣಿಸದೆ ಅನ್ನದಾತ ನೆಂಬುದನ್ನೂ ಕಂಡುಕೊಂಡಿರುತ್ತಾನೆ. ಆತನು ಹೇಗೆ ಅನ್ನದಾತನಾಗುವನೆಂಬುದಕ್ಕೆ ಅನಾಹುತಿಗಳನ್ನು ಕಳೆಯುವ ಮೂಲಕ - ಎಂದು ತಿಳಿಸಿದ್ದಾನೆ. ಕನ್ನಡಭಾಷೆಯಲ್ಲಿ 'ಅನಾಹುತ' ಎಂದರೆ ಏನೋ ನಡೆಯಬಾರದ್ದು ನಡೆಯಿತು - ಎಂಬರ್ಥವಿದೆ. ಯಾವದಾದರೂ ಅಪಘಾತವಾದರೆ, ಬಿರುಗಾಳಿ, ಮಳೆ, ಭೂಕಂಪಗಳಾದರೆ ಅನಾಹುತವಾಯಿತೆನ್ನುವರು. ಆದರೆ ಸಂಸ್ಕೃತಭಾಷೆಯಲ್ಲಿ ಈ ಪದಕ್ಕೆ ಬೇರೆಯ ಅರ್ಥವಿದೆ. ಹಾಗೂ ಇದೇ ಶಬ್ದವನ್ನು ದೀರ್ಘವಿಶಿಷ್ಟವಾಗಿ 'ಅನಾಹೂತ' ಎಂದು ಬೇರೊಂದರ್ಥದಲ್ಲಿಯೂ ಬಳಸುತ್ತಾರೆ. ಆಹೂತ ಎಂದರೆ 'ಆಹ್ವಾನಿತ' ಎಂದರ್ಥ. ಅನಾಹೂತ - ಎಂದರೆ ಕರೆಯದೆ ಬಂದಿರುವವನು - ಎಂದರ್ಥ.

ಸಾಮಾನ್ಯವಾಗಿ ಗಣ್ಯರು ಯಾರೂ ಕರೆಯದೆ ಬರುವದಿಲ್ಲ. ಇನ್ನು ಯಜ್ಞಕಾಲಕ್ಕೆ ದೇವತೆಗಳನ್ನು ಕರೆಯದೆ ಇದ್ದರೆ ಹಾಗೂ ಯಜ್ಞವನ್ನೇ ಕೈಗೊಳ್ಳದಿದ್ದರೆ ದೇವತೆಗಳು ಹೇಗೆ ಬಂದಾರು? ಇದನ್ನೇ ದೇವಹೇಳನ (ದೇವಾಪಮಾನ) ವೆನ್ನುವರು. ಇದು ಅನರ್ಥಕ್ಕೆ ಕಾರಣವೆಂಬುದು ಸ್ಪಷ್ಟವಾಗಿದೆ. ಇದರಿಂದಲೇ ಕ್ಷಾಮಡಾಮರಗಳು ಸಂಭವಿಸಿ ಅನ್ನಾಭಾವವುಂಟಾಗುತ್ತದೆ. ಅಗ್ನಿಯಲ್ಲಿ ಆಹುತಿಯನ್ನರ್ಪಿಸದೆ, ಅದು ಸೂರ್ಯನನ್ನು ತಲುಪದೆ ಇದ್ದಾಗ ಮಳೆ ಬರುವದಿಲ್ಲ. ಯಜ್ಞಮಾಡದೆ ಇದ್ದಾಗಲೂ ನೈಸರ್ಗಿಕನಿಯಮಾನುಗುಣವಾಗಿ ಮಳೆ ಬರುತ್ತದೆಯಲ್ಲವೆ? ಯಜ್ಞವೇಕೆ? ಎಂದರೆ, ಬರುತ್ತದೆ ; ನಿಜ, ಆದರೆ ಅದು ಅಕಾಲದಲ್ಲೋ, ಅದೇಶದಲ್ಲಿಯೋ, ಅತಿಯಾಗಿಯೋ - ಸಂಭವಿಸಿ ಜನಜೀವನವನ್ನು ಹಾಳುಮಾಡಲೂಬಹುದು. ಇರಲಿ, ಯಜ್ಞಫಲವಾಗಿ ಬರುವ ಮಳೆಯು ಕಾಲವೃಷ್ಟಿಯೆನಿಸಿ ಪೃಥಿವಿಯನ್ನು ಸಸ್ಯಸಮೃದ್ಧವಾಗಿ ಮಾಡಲಿದೆ. ಇಂಥ ಮಳೆಗೆ 'ಆಹುತಿ'ಗಳೇ ಕಾರಣವು. ಆದ್ದರಿಂದ ನಾವು ದೇವತೆಗಳನ್ನು ಆಹ್ವಾನಿಸದೆ ಅವರನ್ನೆಲ್ಲ 'ಅನಾಹೂತ'ರನ್ನಾಗಿ ಮಾಡುವ ಅಪರಾಧದಿಂದಲೂ ಯಜ್ಞವನ್ನೇ ಕೈಬಿಟ್ಟು

ಆಹುತಿಗಳ ಲೋಪದಿಂದ 'ಅನಾಹುತಿಕರ್ತೃ'ಗಳಾಗಿ ಹಾಳಾಗದಂತೆಯೂ ಸೂರ್ಯನು ರಕ್ಷಿಸಲಿ - ಎಂದು ಇಲ್ಲಿ ಕೇಳಿಕೊಂಡಿದೆ.

ಇನ್ನು ದುಃಸ್ವಪ್ನಗಳ ವಿಚಾರ. ಸ್ವಪ್ನಗಳೇನೂ ಮಾನವನ ಅಧೀನದಲ್ಲಿರುವದಿಲ್ಲ. ಅವು ತಮ್ಮಷ್ಟಕ್ಕೆ ತಾವೇ ಕಾಣಿಸಿಕೊಳ್ಳುವವು. ಯಾವ ಮನಃಶಾಸ್ತ್ರಜ್ಞರಿಗೂ ಕನಸುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಉಪಾಯವು ಈವರೆಗೂ ಹೊಳೆದಂತೆ ಕಾಣುವದಿಲ್ಲ. ವಿಜ್ಞಾನಿಗಳು ಯಾರೂ ಬೇರೊಬ್ಬರ ಕನಸಿಗೆಹೋಗಿ ಅದನ್ನು ನಿಯಂತ್ರಣಮಾಡುವದನ್ನೂ ಈವರೆಗೆ ಕಲಿತಿಲ್ಲ. ಆದ್ದರಿಂದ ದೇವದೇವನಾದ ಸೂರ್ಯನಲ್ಲಿ ಬೇಡಿಕೊಂಡು ನಮ್ಮ ಚಿತ್ತವು ದುಃಸ್ವಪ್ನ-ದುಶ್ಶಕುನ-ದುರ್ಗತಿ-ದೌರ್ಮನಸ್ಯಗಳಿಂದ ಮುಕ್ತಿಯನ್ನು ಹೊಂದುವಂತೆ ಏರ್ಪಡಿಸಿಕೊಳ್ಳಬೇಕು. ಸೂರ್ಯನು ಈ ದಿಶೆಯಲ್ಲಿ ನಮಗೆ ಹೇಗೆ ಸಹಾಯಕನಾಗಬಹುದೆಂದರೆ : ಆತನ ಪ್ರೇರಣೆಯಿಂದ ನಮ್ಮ ಬುದ್ಧಿಯು ಪವಿತ್ರವಾಗುವದು. ಆಗ ಶುಭಾಲೋಚನೆಗಳೇ ಮನಸ್ಸಿಗೆ ಬರುವವು. ಅದಕ್ಕೆ ತಕ್ಕಂತೆ ನಾವು ಶುಭಕರ್ಮಗಳನ್ನೇ ಮಾಡುತ್ತಿದ್ದರೆ ಕೆಟ್ಟಕನಸುಗಳು ಬೀಳಲಾರವು. ಒಂದು ವೇಳೆ ಕನಸು ಬಿದ್ದರೂ ಪುಣ್ಯಫಲದಿಂದ ಶುಭವಾಗಿಯೇ ಅಭ್ಯುದಯ ಮಯವಾಗಿಯೇ ತೋರಿಕೊಳ್ಳುವದು. ಅಂಥ ಶುಭಸ್ವಪ್ನಗಳು ನಮ್ಮ ಪುಣ್ಯವನ್ನೇ ಗುರುತಿಸುವವು. ಹೀಗೆ ಸೂರ್ಯೋಪಾಸನೆಯು ನಮ್ಮನ್ನು ಶುಭಲೋಕಗಳಿಗೆ ಕರೆದೊಯ್ಯುವ ಸಾಧನವಾಗಿದೆ. ಆದ್ದರಿಂದಲೇ ಋಷಿಯು ಹಾಗೆಂತ ಇಲ್ಲಿ ಆದಿತ್ಯನನ್ನು ಪ್ರಾರ್ಥಿಸಿದ್ದಾನೆ.

**ವಿಶ್ವಸ್ಯ ಹಿ ಪ್ರೇಷಿತೋ ರಕ್ಷಸಿ ವ್ರತಮಹೇಳಯನ್**
**ಉಚ್ಚರಸಿ ಸ್ವಧಾ ಅನು ।**
**ಯದದ್ಯ ತ್ವಾ ಸೂರ್ಯೋಪಬ್ರವಾಮಹೈ ತಂ ನೋ**
**ದೇವಾ ಅನುಮಂಸೀರತ ಕ್ರತುಮ್ ॥ ೪೨ ॥**

**"ಎಲೈ ಸೂರ್ಯನೆ, ನೀನು ಸಿಟ್ಟುಗೊಳ್ಳದೆ ಪ್ರಪಂಚದಲ್ಲಿರುವ ಎಲ್ಲಾ ಯಜ್ಞಕರ್ತೃಗಳ ಕರ್ಮವನ್ನೂ ಕಾಪಾಡುತ್ತಿರುವೆ. ಹವಿರರ್ಪಣೆಯನ್ನನುಸರಿಸಿ ಮೇಲಕ್ಕೇರುತ್ತಿರುವೆ. ಈಗ ಎಂದರೆ ಈ ದಿನ ನಾವು ನಿನ್ನನ್ನು ಸ್ತುತಿಸುವೆವಾದರೆ ಆಗ ಇಂದ್ರಾದಿದೇವತೆಗಳು ಯಜ್ಞವನ್ನು ಅಂಗೀಕರಿಸುವವರಾಗುವರು".**

ಈ ಮಂತ್ರದಲ್ಲಿ ಸೂರ್ಯನನ್ನು ಯಜ್ಞರಕ್ಷಕನೆಂದೂ ಇಂದ್ರಾದಿದೇವತೆಗಳು ಯಜ್ಞದಲ್ಲಿ ಹವಿರ್ಭಾಗವನ್ನು ಸ್ವೀಕರಿಸುವಂತೆ ಪ್ರೇರಿಸುವವನೆಂದೂ

ಹೊಗಳಿರುತ್ತದೆ. ಬಹಳಮಟ್ಟಿಗೆ ಯಜ್ಞಗಳೆಲ್ಲವೂ ಹಗಲಿನಲ್ಲಿಯೇ ನಡೆಯುತ್ತವೆ. ಏಕೆಂದರೆ ಸೂರ್ಯನ ಸಾನ್ನಿಧ್ಯವಿದ್ದಾಗ ಯಜ್ಞಕ್ಕೆ ವಿಘ್ನಮಾಡುವ ರಾಕ್ಷಸರು ಬರುವದಿಲ್ಲ. ಆದರೆ ಹಗಲುಹೊತ್ತಿನಲ್ಲಿಯೂ ರಾಕ್ಷಸರು ಯಜ್ಞವಿಘ್ನಕಾರಕರಾದದ್ದು ರಾಮಾಯಣಾದಿಗಳಲ್ಲಿ ಪ್ರಸಿದ್ಧವಾಗಿದೆಯಲ್ಲ ? ಎಂದರೆ ಅವು ವಿಶೇಷಸಂದರ್ಭಗಳೇ ಸರಿ. ಬಹಳಮಟ್ಟಿಗೆ ರಾತ್ರಿವೇಳೆಯಲ್ಲೇ ರಾಕ್ಷಸಸಂಚಾರವಿರುವದರಿಂದ ಯಾಗಾದಿಗಳನ್ನಾಗಲಿ, ಸತ್ಕರ್ಮಗಳನ್ನಾಗಲಿ, ಶಿಷ್ಟರು ರಾತ್ರಿಯಲ್ಲಿ ಮಾಡುವದಿಲ್ಲ. ಸೂರ್ಯೋದಯಾನಂತರವೇ ಮಾಡುತ್ತಾರೆ. ರಾತ್ರಿಯಲ್ಲಿ ಮಾಡುವ ಯಜ್ಞಗಳು ಶತ್ರುನಾಶಾದಿಫಲವುಳ್ಳ ಅಭಿಚಾರಿಕಕ್ರಿಯೆಗಳಾಗಿರುವವು. ಅವು ಶಿಷ್ಟಪರಿ ಗ್ರಹೀತವಲ್ಲ. ಆದ್ದರಿಂದ ಸೂರ್ಯನ ಬೆಳಕು ಹರಿದಕೂಡಲೆ ಯಜ್ಞ-ಆಹ್ನಿಕ- ವ್ರತ-ಪರ್ವಾದಿ ಪುಣ್ಯಕೆಲಸಗಳು ಆರಂಭವಾಗುವವು. ಅಂಥ ಸತ್ಕರ್ಮಗಳನ್ನು ಮಾಡುವ ಯಜಮಾನರುಗಳನ್ನೆಲ್ಲ ಸೂರ್ಯನು ತನ್ನ ಸಾನ್ನಿಧ್ಯದಿಂದ ಅನುಗ್ರಹಿಸುವನು. ಅವನಿಗೆ ಬೇಸರವಿಲ್ಲ, ಕೋಪವಿಲ್ಲ. ಆತನು ಎಲ್ಲರಿಗೂ ಮಿತ್ರನೆಂದೇ ಪ್ರಸಿದ್ಧನಾಗಿರುವನು. ಋಷಿಯು ಈ ಮಂತ್ರದಲ್ಲಿ ಲೋಕಮಿತ್ರನಾದ ಸೂರ್ಯನನ್ನು ಹೊಗಳಿ ಕರ್ಮರಕ್ಷಕನೆಂದು ಸ್ತುತಿಸಿರುತ್ತಾನೆ. ಯಜಮಾನರುಗಳು ಅವನಿಗೆ ಅರ್ಪಿಸುವ ಹವಿಸ್ಸನ್ನು ಸ್ವೀಕರಿಸಿ ಆತನು ಮುಂದೆ ಸಾಗುತ್ತಿರುವನು. ಇದರಿಂದ ಕಾಲಚಕ್ರಪರಿವರ್ತನವಾಗುವದು. ಹೀಗೆ ಸೂರ್ಯನ ಉದಯದಿಂದ ಪ್ರಾರಂಭವಾದ ಹಾಗೂ ಅನುಜ್ಞಾತವಾದ ಕರ್ಮಗಳನ್ನೇ ಇಂದ್ರಾದಿದೇವತೆಗಳು ಅಂಗೀಕರಿಸಿ ತಮ್ಮ ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸುವರು. ಯಜ್ಞವನ್ನು ಪರಿಪೂರ್ತಿಗೊಳಿಸುವರು.

**ತಂ ನೋ ದ್ಯಾವಾಪೃಥಿವೀ ತನ್ನ ಆಪ ಇಂದ್ರಃ**
**ಶೃಣ್ವನ್ತು ಮರುತೋ ಹವಂ ವಚಃ ।**
**ಮಾ ಶೂನೇ ಭೂಮ ಸೂರ್ಯಸ್ಯ ಸಂದೃಶಿ**
**ಭದ್ರಂ ಜೀವಂತೋ ಜರಣಾಮಶೀಮಹಿ** ॥ ೪೩ ॥

**"ದ್ಯಾವಾಪೃಥಿವಿಗಳೂ ಅಬ್ದೇವತೆಗಳೂ, ಇಂದ್ರನೂ, ಮರುದ್ದೇವತೆಗಳೂ ನಮ್ಮ ಆಹ್ವಾನದ ಮಾತುಗಳನ್ನು ಕೇಳುವವರಾಗಲಿ ! ಮತ್ತು ನಾವು ಸೂರ್ಯನ ಸಂದರ್ಶನ ನಿಮಿತ್ತವಾಗಿ ದುಃಖಿಗಳಾಗದೆ ಇರೋಣ ! ಮತ್ತು ಬಹುಕಾಲ ಬದುಕಿದ್ದವರಾಗಿ ಮಂಗಳವನ್ನು ಕಂಡು ವೃದ್ಧರಾಗಿ ಬಾಳೋಣ !"**

ಈ ಮಂತ್ರದಲ್ಲಿ ಸೂರ್ಯನ ಜೊತೆಗೆ ದ್ಯುಲೋಕದೇವತಾದಿಗಳನ್ನೂ ಕುರಿತು ಪ್ರಾರ್ಥಿಸಲಾಗಿದೆ. ಮನುಷ್ಯನ ಆಯುಷ್ಯವು ದೇವತೆಗಳ ದೃಷ್ಟಿಯಿಂದ ತೀರ ಮೊಟಕಾಗಿರುವದು. ಆದರೇನು ? ದೀರ್ಘಕಾಲದ ಬಾಳಿಗಿಂತಲೂ ಬಾಳಿನ

ಅವಧಿಯನ್ನೆಲ್ಲ ಶುಭಕರವಾದ ಕರ್ಮಗಳಿಂದಲೂ, ಆಲೋಚನೆಗಳಿಂದಲೂ ಕಳೆಯುತ್ತಾ ಶರೀರಾವಯವಸೌಷ್ಠವವುಳ್ಳವರಾಗಿದ್ದು, ದೇವತಾರಾಧನೆಗಳಿಗಾಗಿ ದೇಹೇಂದ್ರಿಯಸಂಘಾತಗಳನ್ನು ಬಳಸುತ್ತಿದ್ದರೆ ಸಾಕು. ಅದಕ್ಕಿಂತ ಮಿಗಿಲಾದ ಭಾಗ್ಯವಿರುವದಿಲ್ಲ. ನಮ್ಮ ಆಯುಷ್ಯದ ಎಲ್ಲಾ ದಿನಗಳೂ ಸೂರ್ಯೋದಯದಿಂದಲೇ ಮೊದಲಾಗುತ್ತವೆ. ಆದರೂ ದಿನಗಳೆಲ್ಲವನ್ನೂ ನಾವು ದೇವತಾರಾಧನೆಯನ್ನು ಮಾಡುತ್ತಾ "ಸುದಿನ"ಗಳಾಗಿ ದಾಟುವುದು ಅಪರೂಪವೇ ಸರಿ. ಆದರೆ ದೇವತೆಗಳು ಅನುಗ್ರಹಮಾಡಿದರೆ ದಿನದಿನವೂ "ಸುದಿನ"ವೇ ಆಗಲಿದೆ. ಅದಕ್ಕಾಗಿ ಋಷಿಯು ಇಲ್ಲಿ ದ್ಯುಲೋಕದೇವತೆ, ಪೃಥಿವೀದೇವತೆ, ಜಲದೇವತೆ, ಇಂದ್ರ- ಮರುದ್ದೇವತೆಗಳನ್ನು ಆಹ್ವಾನಿಸುತ್ತಾ ತನ್ನ ಸ್ತುತಿರೂಪವಾದ ಕಲ್ಯಾಣವಾಕ್ಯಗಳನ್ನು ಕೇಳಬೇಕೆಂಬ ಪ್ರಾರ್ಥನೆಯನ್ನು ಮುಂದಿಟ್ಟಿರುತ್ತಾನೆ. ಮತ್ತೆಮತ್ತೆ ದೇವತೆಗಳನ್ನು ಕರೆಯಲು ನಿಮಿತ್ತವೇನಾದರೂ ಇರಬೇಕು. ಆ ನಿಮಿತ್ತವನ್ನು ಕಾಲರೂಪಿಯಾದ ಸೂರ್ಯನು ಒದಗಿಸಿಕೊಡುವನು. ಸೂರ್ಯನ ಉದಯವೇ ದೇವತಾಹ್ವಾನಕ್ಕೆ ನಿಮಿತ್ತವು. ಆತನ ಸಂಚಾರವೇ ಕಾಲಗಣನೆಗೆ ಮೂಲವು. ಸದಾಕಾಲವೂ ನಾವು ದೇವತಾರಾಧನತತ್ಪರರಾಗಿರಬೇಕಾದರೆ ಸೂರ್ಯನು ನಮಗೆ ಪ್ರಾಣರೂಪದಿಂದ ಅನುಗ್ರಹಿಸಬೇಕು. ಆ ಪ್ರಾಣನೇ ಇಂದ್ರಿಯಗಳು, ವಾಕ್ಕು, ಮನಸ್ಸುಗಳಿಗೆ ಚೇತನವನ್ನೂ ಶಕ್ತಿಯನ್ನೂ ತುಂಬಬೇಕು. ಹೀಗೆ ಪ್ರಾಣರೂಪಿಯಾದ ಆದಿತ್ಯನು ತನ್ನ ಅನುಗ್ರಹದಿಂದ ಜೀವರುಗಳ ಜೀವವನ್ನು ಮಂಗಳಮಯವಾಗಿರಿಸುವನು. ವಾರ್ಧಕ್ಯವು ಶರೀರಕ್ಕೆ ಬರುವದು ಸ್ವಭಾವವಾದರೂ ಮನಸ್ಸಿಗೆ ವಾರ್ಧಕ್ಯವಾಗಲಿ, ಬೇಸರವಾಗಲಿ -ಅಂಟದಿರಬೇಕಾದರೆ ಸೂರ್ಯೋಪಾಸನೆಯನ್ನು ಮಾಡಿರಬೇಕು. ಆಗ ನಾವು ಸಾರ್ಥಕಬಾಳನ್ನು ಅನುಭವಿಸಿದವರಾಗುವೆವು. ಹಾಗಾಗಲಿ! ಎಂದು ಇಲ್ಲಿ ಕೇಳಲಾಗಿದೆ.

**ವಿಶ್ವಾಹಾ ತ್ವಾ ಸುಮನಸಃ ಸುಚಕ್ಷಸಃ**
**ಪ್ರಜಾವಂತೋ ಅನಮೀವಾ ಅನಾಗಸಃ ।**
**ಉದ್ಯಂತಂ ತ್ವಾ ಮಿತ್ರಮಹೋ ದಿವೇ ದಿವೇ**
**ಜ್ಯೋಗ್ಜೀವಾಃ ಪ್ರತಿಪಶ್ಯೇಮ ಸೂರ್ಯ ॥ ೪೪ ॥**

**"ಎಲೈ ಸೂರ್ಯನೆ, ನಿನ್ನನ್ನು ನಾವು ಪ್ರೀತಿಯುಕ್ತವಾದ ಮನಸ್ಸಿನಿಂದಲೂ, ಒಳ್ಳೆಯ ನೋಟದಿಂದಲೂ, ಪುತ್ರಾದಿಸಂಪದ್ಯುಕ್ತರಾಗಿಯೂ, ರೋಗವಿಲ್ಲದವರಾಗಿಯೂ, ಅಪರಾಧಗಳಿಲ್ಲದವರಾಗಿಯೂ ಯಾವಾಗಲೂ ಆರಾಧಿಸುವಂತಾಗಲಿ! ಮತ್ತು ಎಲೈ ಮಿತ್ರರಿಗೆ ಪೂಜಾರ್ಹನೆ, ನಾವು ಪ್ರತಿದಿನವೂ ಹುಟ್ಟುತ್ತಿರುವ ನಿನ್ನನ್ನು ದರ್ಶನಮಾಡುತ್ತಾ ಬದುಕುವವರಾಗೋಣ!"**

ಈ ಮಂತ್ರದಲ್ಲಿ ಪ್ರತಿದಿನವೂ ನಾವು ಸೂರ್ಯದರ್ಶನ ಮಾಡೋಣ - ಎಂಬ ಪ್ರಾರ್ಥನೆಯೂ ಅನಂತರ ಆತನ ಆರಾಧನೆಯನ್ನು ವಿಶಿಷ್ಟವಾಗಿ ಮಾಡೋಣವೆಂಬ ಹಾರೈಕೆಯೂ ಇದೆ. ಮನುಷ್ಯರೆಲ್ಲರಿಗೂ ಪ್ರತಿದಿನವೂ ಬೆಳಗ್ಗೆ ಸೂರ್ಯನು ಕಾಣಿಸಿಕೊಳ್ಳಲಾರಂಭಿಸಿ ಅಸ್ತಮಾನಕಾಲದವರೆಗೂ ದೃಗ್ಗೋಚರನೇ ಆಗಿರುತ್ತಾನೆ. ಹೀಗಿರುವಲ್ಲಿ ಈ ಪ್ರಾರ್ಥನೆಯಲ್ಲಿರುವ ವಿಶೇಷವೇನು ? ಎಂದು ಯಾರಾದರೂ ಕೇಳಬಹುದಾಗಿದೆ. ಸೂರ್ಯನು ಎಲ್ಲರಿಗೂ ಕಾಣಿಸುವದೇನೋ ನಿಜ. ಆದರೆ ಆತನನ್ನು ಕಂಡಾಗ ಎಷ್ಟು ಜನರಿಗೆ ಆತನು ದೇವತೆಯೆಂದೂ, ಜೀವನಾಧಾರನೆಂದೂ, ಪೂಜ್ಯನೆಂದೂ ಮನಸ್ಸಿಗೆ ಬಂದೀತು ? ಹಾಗೆ ಬಾರದೆ ಇರುವವರಿಗೆ ಸೂರ್ಯೋದಯವಾದಂತೆಯೇ ಅಲ್ಲ. ಅಂತರಂಗದಲ್ಲಿ ಜ್ಞಾನಸೂರ್ಯನು ಉದಯಿಸದೆ ಬಹಿರಂಗದಲ್ಲಿ ಬೆಳಕು ಕಂಡ ಮಾತ್ರಕ್ಕೆ ಪುರುಷಾರ್ಥವು ದೊರಕೀತೆ ? ಪ್ರಾಕೃತಜನರ ಪಾಡು ಇಷ್ಟೇ. ಕೆಲವರಿಗೆ ಆಯಾ ದಿನ ಯಾವ ತಿಥಿ, ಮಾಸ, ನಕ್ಷತ್ರಗಳೆಂಬುದೇ ತಿಳಿದಿರುವದಿಲ್ಲ. ವಾರವು ಮಾತ್ರ ಸಾಮಾನ್ಯವಾಗಿ ನೆನಪಿರುತ್ತದೆ. ಅದು ಕೂಡ ಸೂರ್ಯನಿಗಾಗಿ ಅಲ್ಲ. ಲೌಕಿಕನಿಮಿತ್ತಕ್ಕಾಗಿ - ಎಂದೇ ಹೇಳಬೇಕು. ಏಕೆಂದರೆ ಬಹುಜನರಿಗೆ ಭಾನುವಾರದ ನೆನಪು 'ರಜಾ' ನಿಮಿತ್ತವಾಗಿ ಮಾತ್ರವೇ ಇರುವದು. ಆ ದಿನವೇ ಅವರು ತಡವಾಗಿ ಏಳುತ್ತಾರೆ. ಸೋಮಾರಿಗಳಾಗಿ ಕಾಲಹಾಕುತ್ತಾರೆ; ಮನರಂಜನೆ, ಭೋಗವಿಲಾಸಗಳಲ್ಲಿ ಕಾಲವನ್ನು ಕಳೆಯುತ್ತಾರೆ. ಇಂಥವರಿಗೆ ಸೂರ್ಯನ ನೆನಪು ಒಮ್ಮೆಯಾದರೂ ಮನಸ್ಸಿನಲ್ಲಿ ಬಂದೀತೆ ? ಅವರು ಸೂರ್ಯನಿಗೆ ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆಯೆ ? ವಿಚಾರಮಾಡಬೇಕು. ಆದ್ದರಿಂದ ಋಷಿಯು ಇಲ್ಲಿ ಸೂರ್ಯನ ಸನ್ನಿಧಿಯನ್ನು ನಾವು ಮರೆಯದಂತೆ ಇರಬೇಕೆನ್ನುವದಕ್ಕಾಗಿ ದರ್ಶನದಿಂದ ಆರಾಧನೆಯವರೆಗಿನ ಕರ್ತವ್ಯಗಳನ್ನು ನೆನಪು ಮಾಡಿಕೊಟ್ಟಿರುತ್ತಾನೆ. ಬದುಕನ್ನು ಹಸನಾಗಿ ಮಾಡುವ ದೇವತೆಯ ಬಗ್ಗೆ ಎಚ್ಚರಿಸಿರುತ್ತಾನೆ.

ಇಷ್ಟೇ ಅಲ್ಲ, ನಾವು ಸೂರ್ಯನನ್ನು ಭಕ್ತಿಪೂರ್ವಕವಾಗಿ ಹೃದಯಕ್ಕೆ ತಂದುಕೊಂಡು ನಮ್ಮ ಕುಟುಂಬದವರೆಲ್ಲರನ್ನೂ ಆತನ ಆರಾಧನೆ ಮಾಡುವಂತೆ ಎಚ್ಚರಿಸಿ ನಮ್ಮೊಡನೆ ಸೇರಿಸಿಕೊಂಡು, ಸಾತ್ವಿಕಭಾವದಿಂದ ನಮ್ರರಾಗಿ ಪ್ರತಿದಿನವೂ ಸೂರ್ಯನ ದರ್ಶನವನ್ನು ಮಾಡಿ ದೇವತಾಪರಾಧಗಳಿಂದ ಬಿಡುಗಡೆಯನ್ನು ಹೊಂದಿದವರಾಗಿ ಬಾಳಬೇಕೆಂದೂ ಋಷಿಯು ತಿಳಿಸಿರುತ್ತಾನೆ. ಹೀಗೆ ದಿನದಿನವೂ ಸೂರ್ಯನನ್ನು ಕಂಡು ಗೌರವವನ್ನು ಸಲ್ಲಿಸುವದು ಆರ್ಯರ ಪದ್ಧತಿಯಾಗಿದೆ.

**ಮಹಿಜ್ಯೋರ್ತಿರ್ಬಿಭ್ರತಂ ತ್ವಾ ವಿಚಕ್ಷಣ ಭಾಸ್ವಂತಂ**
**ಚಕ್ಷುಷೇ ಚಕ್ಷುಷೇ ಮಯಃ ।**
**ಆರೋಹಂತಂ ಬೃಹತಃ ಪಾಜಸಸ್ಪರಿ ವಯಂ ಜೀವಾಃ**
**ಪ್ರತಿಪಶ್ಯೇಮ ಸೂರ್ಯ ॥ ೪೫ ॥**

**"ಎಲೈ ವಿಚಕ್ಷಣನಾದ ಸೂರ್ಯನೆ, ಮಹತ್ತಾದ ಬೆಳಕನ್ನು ಹೊಂದಿ ವಿಭ್ರಾಜಮಾನನಾಗಿ, ನೋಡುವವರೆಲ್ಲರ ಕಣ್ಣಿಗೂ ಸುಖವುಂಟುಮಾಡುತ್ತಾ ಹೆಚ್ಚಿನ ಬಲಸಂಪನ್ನನಾದ ಸಮುದ್ರರಾಜನ ಮೇಲೇರಿ ಸಾಗುತ್ತಿರುವ ನಿನ್ನನ್ನು ನಾವು ಪ್ರತಿದಿನವೂ ಕಾಣುವೆವು."**

ಈ ಮಂತ್ರದಲ್ಲಿ ಸಮುದ್ರಕ್ಕೂ ಸೂರ್ಯನಿಗೂ ಹೋಲಿಸಿ, ಸೂರ್ಯನ ಮಹತ್ತ್ವವನ್ನು ವರ್ಣಿಸಲಾಗಿದೆ. ಸಮುದ್ರರಾಜನು ಅಪಾರಗಂಭೀರನು. ವಿಶಾಲವಾದ ಸುತ್ತುವಳಿಯದಿಂದ ಕೂಡಿರುವನು. ಸಮುದ್ರವನ್ನು ದಾಟುವದೇನೂ ಸುಲಭವಲ್ಲ. ಆದರಲ್ಲಿಯೂ ಪ್ರತಿದಿನವೂ ಒಂದು ನಿಮಿಷವೂ ಕಾಲವ್ಯತ್ಯಾಸ ವಿಳಂಬವಿಲ್ಲದೆ ಏಕಾಕಿಯಾಗಿ ನಿರಾಲಂಬನವಾದ ಆಕಾಶದಲ್ಲಿ ಸಂಚರಿಸುತ್ತಾ ಸಮುದ್ರವನ್ನು ಅತಿಕ್ರಮಿಸುವದೆಂಬುದು ಅತ್ಯದ್ಭುತವಾದ ಕಾರ್ಯವೇ ಸರಿ. ಸೂರ್ಯನಾದರೊ, ಈ ಕಾರ್ಯವನ್ನು ನಿರ್ವಹಿಸುತ್ತಿರುವನು. ನೀರಿನ ಮೇಲೆ ನಿಂತು ನೋಡಿದರೆ ಅಥವಾ ಸಮುದ್ರದಡದಲ್ಲಿಯೇ ನಿಂತು ಸೂರ್ಯನ ಸಂಚಾರದ ವೈಖರಿಯನ್ನು ಗಮನಿಸಿದರೆ ಈ ಮಹಿಮೆಯು ತಿಳಿದೀತು. ಕೆಲವು ವೇಳೆ ಪಶ್ಚಿಮ ಸಮುದ್ರಗಳಲ್ಲಿ ಸೂರ್ಯನು ಮುಳುಗುವದನ್ನೂ, ಪೂರ್ವಸಮುದ್ರದಲ್ಲಿ ಏಳುವದನ್ನೂ ನಾವು ನೋಡಿರಬಹುದು. ಆದರೇನು? ಸಮುದ್ರಕ್ಕೂ ಸೂರ್ಯನಿಗೂ ಲಕ್ಷಾಂತರ ಮೈಲುಗಳ ಅಂತರವಿದ್ದು ನಮ್ಮ ಬರಿಗಣ್ಣಿಗೆ ಹಾಗೆ ಮುಳುಗಿದಂತೆ - ಎದ್ದಂತೆ ಸೂರ್ಯನು ಕಂಡುಬರುವನು. ಆದ್ದರಿಂದ ಸೂರ್ಯನ ಸಂಚಾರಪಥವನ್ನು ನಾವು ನೆನೆದಾಗ ಹಾಗೂ ಸಮುದ್ರರಾಜನ ಗಾಂಭೀರ್ಯವಿಸ್ತಾರಗಳನ್ನು ಮನಸ್ಸಿಗೆ ತಂದುಕೊಂಡಾಗ ನಮ್ಮ ಮಾನವತ್ವವು ಎಷ್ಟು ಅಲ್ಪವೆಂದು ತಿಳಿದೀತು. ಸೂರ್ಯನ ಮಹತ್ವವೂ ಮನಸ್ಸಿಗೆ ಬಂದೀತು. ಹೀಗೆ ದರ್ಶನೀಯನಾಗಿ, ತೇಜಃಪುಂಜನಾಗಿ ನಮ್ಮನ್ನು ಎಲ್ಲಾ ವಿಧದಿಂದಲೂ ಪೋಷಿಸಿ ಸುಖಿಗೊಳಿಸುತ್ತಿರುವ ಸೂರ್ಯಭಗವಂತನನ್ನು ದರ್ಶನಮಾಡುತ್ತಾ, ನೂರು ವರ್ಷಗಳು ಬಾಳೋಣ - ಎಂದು ಇಲ್ಲಿ ಕೇಳಿಕೊಳ್ಳಲಾಗಿದೆ.

**ಯಸ್ಯ ತೇ ವಿಶ್ವಾ ಭುವನಾನಿ ಕೇತುನಾ**
**ಪ್ರಚೇರತೇ ನಿ ಚ ವಿಶಂತೇ ಅಕ್ತುಭಿಃ ।**
**ಅನಾಗಾಸ್ತ್ವೇನ ಹರಿಕೇಶ ಸೂರ್ಯಾಹ್ನಾಹ್ನಾನೋ**
**ವಸ್ಯಸಾ ವಸ್ಯಸೋದಿಹಿ ॥ ೪೬ ॥**

**"ಎಲೈ ಹರಿತವರ್ಣವಾದ ಕೇಶಗಳುಳ್ಳ ಸೂರ್ಯನೆ, ನಿನ್ನ ಪ್ರಜ್ಞಾನದ ಬೆಳಕಿನಿಂದ ಸಮಸ್ತಜಗತ್ತೂ ಓಡಾಡುವದು - (ಎಂದರೆ ಚೇತನವಾಗಿರುವದು) ಹಾಗೂ ರಾತ್ರಿಯಲ್ಲಿ ವಿಶ್ರಾಂತಿಯನ್ನು ಹೊಂದುವದು. ಆ ನೀನು ನಮ್ಮನ್ನು ಅಪರಾಧಗಳಿಲ್ಲದ(ವರನ್ನಾಗಿ ಮಾಡಿ) ಅತ್ಯಂತಶ್ರೇಯಸ್ಕರವಾದ ಮುಂದುಮುಂದಿನ ದಿನಗಳಿಂದ ಉದಯಿಸುವವನಾಗು" ಎಂದಭಿಪ್ರಾಯ.**

ಈ ಮಂತ್ರದಲ್ಲಿ ಋಷಿಯು ಬ್ರಹ್ಮಾಂಡವೆಲ್ಲವೂ ಪ್ರಜ್ಞಾನಸೂರ್ಯನಿಂದಲೇ ಬದುಕಿದ್ದು ಚೇಷ್ಟೆಮಾಡುತ್ತಿದೆಯೆಂದು ಸೂರ್ಯಾಂತರ್ಗತತತ್ತ್ವವನ್ನೇ ಸ್ತುತಿಸಿದ್ದಾನೆ. ಮತ್ತು ಆಧಿದೈವಿಕವಾಗಿ ನಮಗೆ ಕಂಡುಬರುತ್ತಿರುವ ಸೂರ್ಯನನ್ನು ಮುಂದುಮುಂದಿನ ದಿನಗಳಲ್ಲಿ ನಮ್ಮೆಲ್ಲರಿಗೂ ಹೆಚ್ಚು ಹೆಚ್ಚಿನ ಶ್ರೇಯಸ್ಸನ್ನೂ, ಕಲ್ಯಾಣವನ್ನೂ ಕೊಡುವಂಥವನಾಗಿ ಉದಯಿಸುವಂತೆಯೂ ಕೇಳಿಕೊಂಡಿದ್ದಾನೆ. ವ್ಯವಹಾರಪ್ರಪಂಚದಲ್ಲಿ ಇದು ಹೆಚ್ಚು ಅಗತ್ಯವಾದ ಪ್ರಾರ್ಥನೆಯಾಗಿದೆ. ಏಕೆಂದರೆ ಪ್ರತಿಯೊಬ್ಬನ ಬದುಕಿನಲ್ಲಿಯೂ ಕಳೆದುಹೋಗಿರುವ ದಿನಗಳಿಗಿಂತಲೂ ಬರಲಿರುವ ದಿನಗಳೇ ಮುಖ್ಯವಾಗಿರುವವು. ಆದಕ್ಕಾಗಿಯೇ ಜನರು ಭವಿಷ್ಯವನ್ನು ತಿಳಿಯಲು ಕಾತರರಾಗಿರುವರು. ಆದರೆ ಸೂರ್ಯನು ಉದಯಿಸದೆ ಮುಂದಿನ ದಿನಗಳು ಬರಲಾರವೆಂಬುದೂ ಎಲ್ಲಾ ದಿನಗಳಲ್ಲಿಯೂ ನಮ್ಮೊಡನೆಯೇ ಇರುವ ಸೂರ್ಯನು ಭವಿಷ್ಯವನ್ನು ಉತ್ತಮಗೊಳಿಸಬಲ್ಲ ದೇವತೆಯೆಂದೂ ಆದಕ್ಕಾಗಿ ಅವನನ್ನು ಪ್ರಾರ್ಥಿಸಬೇಕೆಂದೂ ಅಜ್ಞಜನರಿಗೆ ತಿಳಿದಿರುವದಿಲ್ಲ. ಭವಿಷ್ಯದಿನಗಳ ಪರಿಣಾಮಗಳೂ ನಿರೀಕ್ಷೆಗಳೂ ಮನುಷ್ಯನಿಗೆ ಹೇಗಿರುತ್ತದೆಯೆಂಬುದನ್ನು ಒಂದೆರಡು ಉದಾಹರಣೆಗಳಿಂದ ತಿಳಿಯಬಹುದು. ಒಬ್ಬ ಹುಡುಗಿಗೆ ಗಂಡು ಗೊತ್ತಾಗಿದ್ದು ವಿವಾಹವಾಗಲಿರುವಾಗ, ಒಬ್ಬ ವಿದ್ಯಾರ್ಥಿಗೆ ಅಂತಿಮ (Final) ಪರೀಕ್ಷೆಯ ಫಲಿತಾಂಶವು ಹೊರಬೀಳಲಿರುವಾಗ, ಒಬ್ಬ ಪ್ರಥಮಗರ್ಭಿಣಿಗೆ ಹೆರಿಗೆಯ ದಿನಗಳು ಸಮೀಪಿಸುತ್ತಿರುವಾಗ, ತಂದೆಯಾದವನಿಗೆ ದೂರದೇಶದಿಂದ ಬಹಳ ವರ್ಷಗಳ ಅನಂತರ ಹಿಂದಿರುಗಿ ಬರಲಿರುವ ಕೀರ್ತಿಶಾಲಿಯಾದ ಮಗನನ್ನು ಕಾಣಬೇಕೆಂದಿರುವಾಗ - ಆಯಾ ವ್ಯಕ್ತಿಯ ದೃಷ್ಟಿಯಿಂದ ಭವಿಷ್ಯದಿನಗಳು ಎಷ್ಟೊಂದು ಸ್ವಾರಸ್ಯಕರವಾಗಿರುವವಲ್ಲವೆ? ಆದರೆ ಆ ಭವಿಷ್ಯದಿನಗಳನ್ನು

ಮಂಗಳಮಯವಾಗಿ ಮಾಡುವಂತೆ ಸೂರ್ಯನನ್ನು ಕೇಳಿಕೊಳ್ಳಬೇಕೆಂದು ಎಷ್ಟು ಜನರಿಗೆ ತಾನೆ ಹೊಳೆದಿದ್ದೀತು ? ಇಲ್ಲಿ ಋಷಿಯು ಅಂಥ ಪ್ರಾರ್ಥನೆಯನ್ನು ಸಲ್ಲಿಸಿರುತ್ತಾನೆ. ಆತನು ಇಡಿಯ ಜಗತ್ತಿಗೇ ಒಳ್ಳೆಯ ದಿನಗಳು ಬರಲೆಂದೂ ಸೂರ್ಯನು ಸರ್ವರಿಗೂ ಕಲ್ಯಾಣಕರನಾಗಿ ಉದಯಿಸಲೆಂದೂ ನಮ್ಮೆಲ್ಲರ ಪರವಾಗಿ ಬೇಡಿಕೊಂಡಿರುತ್ತಾನೆ. ಮಂಗಳಗಳಿಗೆಲ್ಲ ಮಂಗಳನಾದವನು ಭಗವಂತನೇ ಸರಿ. ಆತನೇ ಸೂರ್ಯರೂಪದಿಂದ ದಿನವೂ ದರ್ಶನವನ್ನು ಕೊಡುತ್ತಾನೆ. ನಮ್ಮೊಡನೆ ಇರುತ್ತಾನೆ. ನಮಗೆ ಅನ್ನವನ್ನೂ ಶಕ್ತಿಯನ್ನೂ ಆಯುಷ್ಯವನ್ನೂ ಆರೋಗ್ಯವನ್ನೂ ನೀಡುತ್ತಾನೆ. ಇಂಥ ಪ್ರತ್ಯಕ್ಷದೇವನನ್ನು ಮರೆಯದೆ - ನಮ್ಮ ಏನೇ ಅವಸರಗಳಿದ್ದರೂ, ಸಮಸ್ಯೆಗಳಿದ್ದರೂ, ಸುಖದುಃಖಗಳಿದ್ದರೂ ಬದಿಗಿಟ್ಟು - ಸ್ವಲ್ಪಕಾಲವಾದರೂ ನೆನೆಯಬೇಕು.

**ಶಂ ನೋ ಭವ ಚಕ್ಷಸಾ ಶಂ ನೋ ಅಹ್ನಾ**
**ಶಂ ಭಾನುನಾ ಶಂ ಹಿಮಾ ಶಂ ಘೃಣೇನ ।**
**ಯಥಾ ಶಮಧ್ವನ್ ಶಮಸದ್ ದುರೋಣೇ**
**ತತ್ಸೂರ್ಯ ದ್ರವಿಣಂ ಧೇಹಿ ಚಿತ್ರಮ್ ॥ ೪೭ ॥**

**"ಎಲೈ ಸೂರ್ಯನೆ, ನೀನು ತೇಜಸ್ಸಿನಿಂದ ನಮಗೆ ಸುಖಕರನಾಗು. ಹಾಗೆಯೇ ಹಗಲಿನಿಂದಲೂ, ರಶ್ಮಿಗಳಿಂದಲೂ, ತಂಪಿನಿಂದಲೂ ಬಿಷ್ಣ್ಯದಿಂದಲೂ ಶಂಕರನಾಗಿ ಆಗು. ನಮಗೆ ಜೀವನ ಪಯಣದಲ್ಲಿ ಹಾದಿಯಲ್ಲಿ ಹಾಗೂ ಮನೆಯಲ್ಲಿಯೂ ಸಹ ಹೇಗಿದ್ದರೆ ನೀನು ಸುಖಕರನಾಗಬಲ್ಲೆಯೋ ಹಾಗೆ ಆಗು. ಪೂಜನೀಯವಾದ ಐಶ್ವರ್ಯವನ್ನೂ ಕೊಡು" ಎಂದರ್ಥ.**

ಈ ಮಂತ್ರದಲ್ಲಿ 'ಶಂ' ಎಂಬುದು ಮತ್ತೆ ಮತ್ತೆ ಬಂದಿದೆ. ಋಗ್ವೇದದಲ್ಲಿ ಇಂಥ ಮಂತ್ರಗಳು ಇನ್ನೂ ಇವೆ. ಪ್ರಕೃತ ಋಷಿಯು ಇಲ್ಲಿ ಸೂರ್ಯನನ್ನು ಎಲ್ಲಾ ರೀತಿಯಿಂದಲೂ ಸುಖಕರನಾಗುವಂತೆ ಕೇಳಿಕೊಂಡಿರುತ್ತಾನೆ. ಇದು ಹೇಗೆ ಸಾಧ್ಯ? ಎಂದು ಕೇಳಬಹುದಾದರೂ ಪ್ರಾರ್ಥನೆಯು ಸಮರ್ಪಕವಾಗಿದೆ. ಹೇಗೆಂದರೆ : ಸೂರ್ಯನ ತೇಜಸ್ಸು ಬೇಸಗೆಯಲ್ಲಿ ಬಹಳ ತೀಕ್ಷ್ಣವಾಗಿರುವದು. ಹಾಗಿಲ್ಲವಾದರೆ ಸಮುದ್ರದ ನೀರು ಕಾದು ಆವಿಯಾಗುವದಿಲ್ಲ. ಆವಿಯಾಗದೆ ಮೋಡವಾಗದೆ ಮಳೆಯು ಬರುವದಿಲ್ಲ. ಆದ್ದರಿಂದ ಸಮುದ್ರಪ್ರಾಂತ್ಯದಲ್ಲೆಲ್ಲ ತೀಕ್ಷ್ಣನಾಗಿರುವಂತೆಯೇ ಆಗ ಅವನನ್ನು ಬೇಡಿಕೊಳ್ಳಬೇಕು. ನಮಗೆಲ್ಲರಿಗೂ - ಎಂದರೆ ನಾವು ವಾಸಿಸುವ ಜಾಗಗಳಲ್ಲಿ ನಾವು ಸಹಿಸಿಕೊಳ್ಳುವಷ್ಟುಮಟ್ಟಿಗೆ ತೇಜೋಮಯನಾಗಿದ್ದರೆ ಸಾಕು. ಅಥವಾ ಅವನು ತನ್ನ ಸ್ವಭಾವವನ್ನು

ಬದಲಾಯಿಸಲಾರನೆಂದಾದರೆ ನಮಗಾದರೂ ಆ ತೇಜಸ್ಸನ್ನು ತಡೆದುಕೊಳ್ಳುವಂಥ ಶಕ್ತಿಯನ್ನು ಕೊಟ್ಟರೂ ಸರಿ. ಹೀಗೆ ಆತನು ಎಲ್ಲಾ ರೀತಿಯಿಂದಲೂ ಸುಖಕರನಾಗಬೇಕು ಎಂದಭಿಪ್ರಾಯ. ಹಾಗೆಯೇ ಸೂರ್ಯನ ರಶ್ಮಿಗಳು, ಬಿಸಿಲಿನ ಝಳ, ಉಷ್ಣಾಂಶ, ತೇವಾಂಶ - ಗಳಿಂದ ಆಯಾ ಸಮಯಕ್ಕೆ ಹೊಂದುವಂತೆ ಸಮಶೀತೋಷ್ಣಹವೆಯನ್ನು ನೀಡಬೇಕೆಂದು ಋಷಿಯು ಇಲ್ಲಿ ಪ್ರಾರ್ಥಿಸಿದ್ದಾನೆ. ಇದರಿಂದ ನಮ್ಮ ಋಷಿಗಳಿಗೂ ಹವಾಮಾನದ ವಿಜ್ಞಾನವಿತ್ತೆಂದು ತಿಳಿಯಬಹುದು. ಈಗಿನ ಕಾಲಕ್ಕೆ ಹವಾನಿಯಂತ್ರಣಸಾಧನಗಳಿವೆಯಾದರೂ ಅವು ವಿದ್ಯುಚ್ಛಕ್ತಿಯ ಅಧೀನಕ್ಕೊಳಪಟ್ಟವೆಯಾದ್ದರಿಂದ ಪರಾಧೀನವಾಗಿವೆ. ಮತ್ತು ಆಯಾ ಸಾಧನಗಳಿರುವ ಸ್ಥಳದಲ್ಲಿ ಹವೆಯ ನಿಯಂತ್ರಣವಿರಬಹುದೇ ಹೊರತು ಸರ್ವತ್ರವೂ ಇರುವದಿಲ್ಲ. ಆಯಾ ಜಾಗವನ್ನು ಬಿಟ್ಟು ಹೊರಬಂದರೆ ಮತ್ತೆ ಸ್ವಾಭಾವಿಕಸ್ಥಿತಿಗೆ ಹೊಂದಿಕೊಳ್ಳಬೇಕಾಗುವದು. ಸೂರ್ಯನ ಪ್ರಸಾದದಿಂದ ಸರ್ವತ್ರವೂ ಸಹನೀಯವೂ ಶಂ(ಸುಖ)ಕರವೂ ಆದ ಹವೆಯಿದ್ದರೆ ಎಂಥ ಪ್ರಯೋಜನವಾದೀತು ? ಅದನ್ನೇ ಋಷಿಯು ಇಲ್ಲಿ ಎಲ್ಲಾ ರೀತಿಯಿಂದಲೂ ಸುಖಕರನಾಗೆಂದು ಸೂರ್ಯನನ್ನು ಪ್ರಾರ್ಥಿಸಿರುತ್ತಾನೆ. ಮತ್ತು ನಮ್ಮ ಜೀವನದ ಎಲ್ಲಾ ಹಂತಗಳಲ್ಲಿಯೂ ಸುಖಕರನಾಗುವಂತೆಯೂ ಕೇಳಿದ್ದಾನೆ. ಜೀವನಕ್ರಮದಲ್ಲಿ ಏರಿಳಿತಗಳು ಸ್ವಾಭಾವಿಕವೇ ಸರಿ. ಆದರೆ ಇಳಿತವೊಂದೇ ನಮ್ಮ ಪಾಲಿಗೆ ಪ್ರಾರಬ್ಧವಶದಿಂದ ಗಂಟುಬಿದ್ದುದಾದರೆ ಅದನ್ನು ಸೂರ್ಯನೇ ತಡೆಯಬೇಕು. ಆಗಲಾದರೂ ನಾವು ಭಗವಂತನಿಗೆ ಶರಣುಹೋಗಲೇಬೇಕಾಗುವದು. ಆದ್ದರಿಂದ ನಾವು ಪ್ರತಿದಿನವೂ ಸೂರ್ಯರೂಪಿಯಾದ ಭಗವಂತನನ್ನು ಆರಾಧಿಸುತ್ತಿದ್ದಲ್ಲಿ ಇಂಥ ಸತತವಾದ ಇಳಿತಗಳಿಂದ ಪಾರಾಗಿ ಆತನ ಅನುಗ್ರಹವು ದೊರೆತಕೂಡಲೆ ಏರಬಹುದು. ಇದೇ ಜೀವನದ ರಹಸ್ಯವು.

ಇನ್ನು ಋಷಿಯು ಸೂರ್ಯನನ್ನು "ದ್ರವಿಣಂ ಧೇಹಿ" (ಧನವನ್ನು ಉಂಟು ಮಾಡು) ಎಂದು ಕೇಳಿರುತ್ತಾನೆ. ಇಲ್ಲಿ ಧನವೆಂದರೆ ಉಪಯುಕ್ತವಾದ ಹಾಗೂ ಭಗವದಾರಾಧನೆಗೆ ಅನುಕೂಲವಾಗುವಂಥ ದ್ರವ್ಯವನ್ನು ಕೊಡು ಎಂದರ್ಥ. ಉದಾಹರಣೆಗೆ ದೇವರಿಗೆ ಅಭಿಷೇಕಕ್ಕೆ ಹಾಲು ಬೇಕು - ಎಂದಿಟ್ಟುಕೊಳ್ಳೋಣ. ಹಾಲನ್ನು ಕೊಡುವ ಗೋವನ್ನೂ ಅದನ್ನು ಪೋಷಿಸುವ ಅನುಕೂಲವನ್ನೂ ದೇವರು ಕೊಡಬಹುದಾದರೆ ಅದೇ ದ್ರವಿಣವು. ನಮಗೆ ಇಂಥ ಧನವು ಈಗ ಬೇಡವಾಗಿದೆ. ಹಾಲು ಬೇಕಾಗಿದೆಯಾದರೂ ಹಸು ಸಾಕುವದು ಬೇಡವಾಗಿದೆ. ಧೈರಿಯನ್ನೇ ನಂಬಿಕೊಂಡು ಮೂರು ದಿನಗಳ ಹಳಸಲು ಹಾಲನ್ನು ಬಯಸುವೆವು. ಅದನ್ನು

ಕಾಪಾಡಲು ರೆಫ್ರಿಜಿರೇಟರನ್ನೂ ಬಯಸುವೆವು. ಒಂದು ವೇಳೆ ದೈರಿಯ ಹಾಲೇ ಬರದೆಹೋದರೆ ಆ ಯಂತ್ರದಿಂದೇನುಪಯೋಗವಾದೀತು ? ಇದೆಂಥ ಐಶ್ವರ್ಯ ? ಹೀಗೆಯೇ ನಾವು ಕೃತಕವೂ ಪರಾಧೀನವೂ ಆಗಿರುವವುಗಳನ್ನೇ ನಂಬಿ ದೇವತಾರಾಧನಾದಿಗಳಿಂದ ವಿಮುಖರಾಗಿ ವಂಚಿತರಾಗಿದ್ದೇವೆ. ಹಾಗಾಗಬಾರದೆಂದು ಋಷಿಯು ಎಚ್ಚರಿಸಿ ನಿಮಗೆ ಬೇಕಾದ ಸಕಲ ಐಹಿಕಭೋಗಸಾಮಗ್ರಿಗಳನ್ನೂ ದೇವತೆಗಳಿಂದಲೇ ಪಡೆದುಕೊಳ್ಳಬೇಕೆಂದೂ ವಿಜ್ಞಾನರಾಕ್ಷಸನ ವರಪ್ರದಾನವು ಅಪಾಯಕರವೆಂದೂ ಅದು ಭಸ್ಮಾಸುರನ ಕುಲಕ್ಕೆ ಸೇರಿರುವದರಿಂದ ಆತ್ಮನಾಶಕವೆಂದೂ ತಿಳಿಸಿರುತ್ತಾನೆ. ಈಗಲಾದರೂ ನಾವು ಪ್ರಕೃತಿಜೀವನಕ್ಕೆ ಹಿಂದಿರುಗಿ ಕೃತಕಜೀವನದಿಂದ ಬಿಡುಗಡೆಯನ್ನು ಹೊಂದಿದರೆ ದೇವತಾರಾಧನೆಯೇ ಮುಂತಾದ ಶ್ರೇಯಸ್ಸಾಧನಗಳು ನಮಗೆ ಇಷ್ಟವಾಗುವವು.

**ಅಸ್ಮಾಕಂ ದೇವಾ ಉಭಯಾಯ ಜನ್ಮನೇ**
**ಶರ್ಮ ಯಚ್ಛತ ದ್ವಿಪದೇ ಚತುಷ್ಪದೇ ।**
**ಅದತ್ ಪಿಬದೂರ್ಜಯಮಾನಮಾಶಿತಂ ತದಸ್ಮೇ**
**ಶಂ ಯೋರರಪೋ ದಧಾತನ ॥ ೪೮ ॥**

**"ಎಲೈ ದೇವತೆಗಳಿರಾ, ಸೂರ್ಯನಿಂದ ಅನುಜ್ಞಾತರಾದ ನೀವು ಮನುಷ್ಯರಾದ ನಮಗೂ ಪ್ರಾಣಿಗಳಿಗೂ ಸುಖವುಂಟುಮಾಡಿರಿ ; ಮತ್ತು ನಮ್ಮ ಮಕ್ಕಳೇ ಮುಂತಾದ ಕಿರಿಯರೆಲ್ಲರೂ ತಿಂದು, ಕುಡಿದು ಬಲವುಳ್ಳವರಾಗಿರುವಂತೆ ಮಾಡಿರಿ. ಇನ್ನು ನಮಗೆಲ್ಲ ರೋಗನಾಶವನ್ನೂ ವಿಷಯಸಂಯೋಗಜನಿತವಾದ ಪಾಪಕ್ಕೆ ಹೊರತಾದ ಸುಖವನ್ನೂ ಕೊಡುವವರಾಗಿರಿ" ಎಂದು ಮಂತ್ರದ ಅಭಿಪ್ರಾಯ.**

ಇಲ್ಲಿ ಸೂರ್ಯನಿಂದ ಆಜ್ಞಪ್ತರಾದ ದೇವತೆಗಳು ನಮಗೆ ಸುಖವುಂಟು ಮಾಡಲೆಂದು ಕೇಳಿಕೊಂಡಿದೆ. ವೈದಿಕಪ್ರಾರ್ಥನೆಗಳೆಲ್ಲವೂ ಸರ್ವಪ್ರಾಣಿಹಿತವನ್ನು ಕೋರುವ ಭಾವಗರ್ಭಿತವಾಗಿರುವವು. ಆದ್ದರಿಂದ ಚತುಷ್ಪಾತ್ ಪ್ರಾಣಿಗಳನ್ನೂ ಸೇರಿಸಿಕೊಂಡೇ ಹಿತವನ್ನು ಕೋರಿದೆ. ದೇವತೆಗಳಲ್ಲೆಲ್ಲ ಸೂರ್ಯನು ಗಣ್ಯನಾದವನು. ಆತನ ಕಾರ್ಯವನ್ನು ಉಳಿದ ದೇವತೆಗಳಾರೂ ಮಾಡಲಾರರು. ಹಾಗೆಯೇ ಆತನನ್ನು ಆಶ್ರಯಿಸಿಕೊಂಡಿರುವ ಮಿತವಾದ ಅಧಿಕಾರವುಳ್ಳ ಅವನ ಅಧೀನರಾದ ಪೂಷ, ಅರ್ಯಮ, ಭಗ, ತ್ವಷ್ಟಾ, ಪರ್ಜನ್ಯ, ಚಂದ್ರ, ಅಗ್ನಿ, ವರುಣ - ಮುಂತಾದ ದೇವತೆಗಳಿರುವರು. ಅವರೆಲ್ಲರೂ ಒಂದೊಂದು ಬಗೆಯಲ್ಲಿ ಜಗತ್ತನ್ನು ಆಳುವವರೇ ಆಗಿರುತ್ತಾರೆ. ಅಂಥವರೆಲ್ಲರೂ ನಮಗೆ ಅನುಗ್ರಹಮಾಡಲಿ - ಎಂದರ್ಥ. ಅನಂತರ ಮತ್ತೊಂದು ಪ್ರಾರ್ಥನೆಯು ಏನೆಂದರೆ : ನಾವು ಮಾತ್ರವಲ್ಲದೆ ನಮ್ಮ ಕುಟುಂಬ

ಬಂಧುಮಿತ್ರವರ್ಗದವರೂ ಸುಖಿವಾಗಿರುವಂತೆಯೂ ಪುಷ್ಟರಾಗಿ, ಸಂತುಷ್ಟರಾಗಿ, ಐಹಿಕಭೋಗಭಾಗ್ಯಸಂಪನ್ನರಾಗಿ ಚೆನ್ನಾಗಿ ಬಾಳುತ್ತಿರುವಂತೆ ದಯಪಾಲಿಸಬೇಕೆಂದೂ ಕೇಳಿಕೊಂಡಿದೆ. ಏಕೆಂದರೆ ಕುಟುಂಬದವರೆಲ್ಲರೂ ದೇವತಾರಾಧನ ತತ್ಪರರಾಗಿರುತ್ತಾರೆಯೋ, ಇಲ್ಲವೋ ಹೇಳಲು ಬರುವದಿಲ್ಲ. ಅವರಲ್ಲಿ ಕೆಲವರು ಒಂದು ವೇಳೆ ದೇವತೆಗಳನ್ನು ಮರೆತಿದ್ದು ತಿರಸ್ಕರಿಸಬಹುದು. ಅದು ಅಪರಾಧವೇ ಸರಿ. ಅಂಥ ಅಪರಾಧಿಗಳ ಪರವಾಗಿ ಯಜಮಾನನೇ ಇಲ್ಲಿ ಕ್ಷಮೆ ಕೋರಿ ಪ್ರಾರ್ಥನೆಯನ್ನು ಸಲ್ಲಿಸಿದ್ದಾನೆ. ಇದರಿಂದ ತಿಳಿದು ಬರುವದೇನೆಂದರೆ, ಕುಟುಂಬದವರೆಲ್ಲ ದೇವತೆಗಳಿಗೆ ನಡೆದುಕೊಳ್ಳಲಾಗದಿದ್ದರೆ ಯಜಮಾನನಿಗಾದರೂ ಗೌರವ ಕೊಟ್ಟು ವಿಧೇಯರಾಗಿ ನಡೆದುಕೊಂಡಲ್ಲಿ ಅವನ ಮೂಲಕ ದೇವತಾಪರಾಧಗಳಿಂದ ಬಿಡುಗಡೆಯನ್ನು ಹೊಂದಿ ಸುಖಿಗಳಾಗಬಹುದು ಎಂದಭಿಪ್ರಾಯ. ಹೀಗೆ ಇಲ್ಲಿ ಸೂರ್ಯನನ್ನು ಪರಂಪರೆಯಿಂದ ಸ್ತುತಿಸಲಾಗಿದೆ.

**ಯದ್ವೋ ದೇವಾಶ್ಚಕೃಮ ಜಿಹ್ವಯಾ**
**ಗುರುಮನಸೋ ವಾ ಪ್ರಯುತೀ ದೇವಹೇಳನಮ್ ।**
**ಅರಾವಾ ಯೋ ನೋ ಅಭಿದುಚ್ಛುನಾಯತೇ**
**ತಸ್ಮಿನ್ ತದೇನೋ ವಸವೋ ನಿಧೇತನ ॥ ೪೯ ॥**

**"ಎಲೈ ಆಶ್ರಯದಾತರಾದ ದೇವತೆಗಳಿರಾ, ನಿಮಗೆ ನಾವು ನಾಲಗೆ, ಮಾತು, ಮನಸ್ಸುಗಳಿಂದ ಹಾಗೂ ಕರ್ಮದಿಂದ ಹೆಚ್ಚಿನದಾದ ತಿರಸ್ಕಾರ - ಅಪರಾಧಗಳನ್ನು ಮಾಡಿ ಪಾಪವಂತರಾಗಿರುವೆವೋ, ಅಂಥ ನಮ್ಮ ಪಾಪಗಳನ್ನು ಯಾವ ನಮ್ಮ ಶತ್ರುವು ದ್ವೇಷದಿಂದ ಎದುರಾಗಿ ನಮಗೆ ಕೆಟ್ಟದನ್ನುಂಟುಮಾಡಲಿರುವನೋ, ನಮಗೆ ಆತಂಕವನ್ನುಂಟುಮಾಡುತ್ತಿರುವನೋ ಅಂಥ ಶತ್ರುವಿನಲ್ಲಿ ಸೂರ್ಯನ ಅಪ್ಪಣೆಯಂತೆ ಇಡುವವರಾಗಿರಿ" ಎಂದಭಿಪ್ರಾಯ.**

ಈ ಮಂತ್ರವು ತೈತ್ತಿರೀಯಮಹಾನಾರಾಯಣೋಪನಿಷತ್ತಿನಲ್ಲಿಯೂ ಇದೆ. ಇಲ್ಲಿ ನೇರಾಗಿ ಸೂರ್ಯನನ್ನು ಸ್ತುತಿಸಿರುವದಿಲ್ಲ. ಆದರೂ ಸೂರ್ಯನ ಅಪ್ಪಣೆಯಂತೆ ನಡೆದುಕೊಳ್ಳುವ, ಸೂರ್ಯನ ಅಧೀನರಾದ ದೇವತೆಗಳನ್ನು ಕುರಿತು ಪ್ರಾರ್ಥಿಸಿರುವದರಿಂದ ಸೌರಸೂಕ್ತದಲ್ಲಿ ಸೇರಿದೆ. ವಸವಃ ಎಂದರೆ ಮನುಷ್ಯರಿಗೆಲ್ಲ ಆಶ್ರಯವನ್ನು ನೀಡಿರುವ ವಾಯು, ಆಕಾಶ, ಪೃಥಿವೀ - ಮುಂತಾದ ದೇವತೆಗಳೆಂದು ಅರ್ಥ. ಈ ದೇವತೆಗಳಿಗೆ ಗೋಚರವಾಗದಂತೆ ನಾವು ಯಾವ ಕರ್ಮವನ್ನೂ ಮಾಡಲಾಗುವಂತಿಲ್ಲ. ಆದರೆ ನಾವು ಮಾಡುತ್ತಿರುವ ಕರ್ಮಗಳಲ್ಲಿ ಹೆಚ್ಚಿನವು ದೇವತೆಗಳಿಗೆ ಕೋಪವನ್ನುಂಟುಮಾಡುವಂಥವೇ ಇರುತ್ತವೆ. ಏಕೆಂದರೆ ನಾವು

ಕಾರ್ಯಾಸಕ್ತಿಯ ನೆಪದಲ್ಲಿ ದೇವತೆಗಳನ್ನು ಮರೆತಿರುತ್ತೇವೆ ಅಥವಾ ತಿರಸ್ಕರಿಸಿರುತ್ತೇವೆ. ಒಬ್ಬ ವಿದ್ಯಾರ್ಥಿಯು ಪರೀಕ್ಷೆಗೆ ಸಕಾಲಕ್ಕೆ ಹಾಜರಾಗುವ ನೆಪದಲ್ಲಿ ದೇವರಿಗೆ ಕೈಮುಗಿಯುವದನ್ನು ಮರೆಯುವಂತೆಯೇ ನಾವೂ ಅವಸರದಲ್ಲಿ ಪ್ರಯಾಣವನ್ನು ಮಾಡುವಾಗ, ಇತರರೊಡನೆ ಮಾತನಾಡುವಾಗ, ಆಹಾರವನ್ನು ಸ್ವೀಕರಿಸುವಾಗ - ಮುಂತಾದ ಸಂದರ್ಭಗಳಲ್ಲೆಲ್ಲ ದೇವತೆಗಳನ್ನು ನೆನೆಯದೆ ಇರಬಹುದು. ಇನ್ನು ದೇವತಾರಾಧನೆಗೆಂದೇ ಗೊತ್ತಾದ ಕಾಲದಲ್ಲಿ ಕೂಡ ಬೇರೆಯ ಕೆಲಸಗಳಲ್ಲಿ ವ್ಯಾಪೃತರಾಗಿರುವೆವು. ಕೆಲವರಂತೂ ಮನೆಯ ಬಾಗಿಲಿಗೇ ರಸ್ತೆಯಲ್ಲಿ ದೇವರ ಉತ್ಸವವು ಬಂದರೂ ಎದ್ದು ನಿಲ್ಲುವದಿಲ್ಲ. ಕಾಲುಗಳನ್ನು ಹಿಂದಕ್ಕೆ ಸರಿಯಿಸುವದಿಲ್ಲ. ದೇವಾಲಯಗಳಲ್ಲಿ ಮಂತ್ರಪುಷ್ಪ, ವೇದಪಾರಾಯಣಗಳು ನಡೆಯುತ್ತಿದ್ದರೆ ಹರಟೆ ಹೊಡೆಯುತ್ತಾ ಅಡ್ಡಿಮಾಡುತ್ತಿರುವರು. ಸೂರ್ಯೋದಯವಾದರೂ ಪೂರ್ವಕ್ಕೇ ಕಾಲುಚಾಚಿ ಮಲಗಿರುತ್ತಾರೆ. ಹೀಗೆಲ್ಲ ವಿಚಾರಮಾಡುತ್ತಾ ಹೋದರೆ ನಮ್ಮ ದೇವತಾಪರಾಧಗಳ ಸಂಖ್ಯೆಗೆ ಕೊನೆಯೇ ಇರುವದಿಲ್ಲ. ಯಾವನೊಬ್ಬ ಜಾಣನೂ ದೇವತಾಭಕ್ತಿಯುಳ್ಳ ಆಸ್ತಿಕನು ಕೂಡ ತಿಳಿದೊ, ತಿಳಿಯದೆಯೊ, ದೇವತಾಪರಾಧಗಳನ್ನು ಮಾಡಿಯೇತೀರುತ್ತಾನೆ. ದೇವಾಲಯಗಳಲ್ಲಿ ದೇವರ ಮುಂದೆ ನಿಂತು ತಾನು ಹೂವಿನ ಹಾರವನ್ನು ಹಾಕಿಸಿಕೊಳ್ಳುವದು ಸಹ ದೇವತೆಯ ಅವಹೇಳನವೇ ಎನ್ನಬಹುದು. ಪ್ರಸಾದವನ್ನು ಬಾಗಿ ಕೈಯ್ಯಲ್ಲಿ ತೆಗೆದುಕೊಳ್ಳಬೇಕೇ ಹೊರತು ಕಂಠವನ್ನು ಎತ್ತಿ ಹಾರವನ್ನು ಹಾಕಿಸಿಕೊಂಡಲ್ಲಿ ದೇವತೆಗಳು ಕುಪಿತರಾಗಬಹುದು. ಇರಲಿ, ಹೀಗೆ ಮಾಡುತ್ತಿರುವ ಅಪರಾಧಗಳಿಂದ ಸಂಭವಿಸಬಹುದಾದ ಪಾಪಗಳು ಬರಬರುತ್ತಾ ಭಾರವಾಗಿ ಬಿಡುವವು. ಇಂಥವುಗಳಿಂದ ಪಾರಾಗಲು ಇಲ್ಲಿ ದೇವತೆಗಳನ್ನೇ ಬೇಡಿಕೊಳ್ಳಲಾಗಿದೆ. ಏನೆಂದರೆ : 'ದೇವತೆಗಳಿರಾ, ನಮ್ಮ ಪಾಪಗಳನ್ನು ನೀವು ಸಹಿಸಿಕೊಂಡು ಅವುಗಳನ್ನು ನಮ್ಮ ಶತ್ರುವಿಗೆ ವರ್ಗಾಯಿಸಿಬಿಡಿರಿ. ಏಕೆಂದರೆ ಆ ಶತ್ರುವು ವಿನಾಕಾರಣವಾಗಿ ನಮ್ಮನ್ನು ದ್ವೇಷಿಸುತ್ತಾ ಎದುರುಬೀಳುತ್ತಿದ್ದಾನೆ. ಆದ್ದರಿಂದ ಅವನನ್ನು ಪಾಪಯುಕ್ತನನ್ನಾಗಿ ಮಾಡಿ ಶಿಕ್ಷಿಸಿರಿ' ಎಂದು ಕೇಳಲಾಗಿದೆ. ಇದರಿಂದ ತಿಳಿದುಬರುವದೇನೆಂದರೆ : ದೇವತಾಭಕ್ತರನ್ನು ನಾವು ದ್ವೇಷಿಸಬಾರದು. ಹಾಗೆ ಮಾಡಿದರೆ ಅವರ ಪಾಪವೆಲ್ಲವೂ ನಮ್ಮನ್ನು ಸೇರಿಬಿಡುವದು. ದೇವತಾಪರಾಧದಂತೆಯೇ ಭಾಗವತಜನಾಪರಾಧವೂ ಪಾಪವೇ - ಎಂದು ತಿಳಿಯಬೇಕು. ಭಗವದ್ಭಕ್ತರೊಡನೆ ನಾವು ಇತರ ಪ್ರಾಕೃತರೊಡನೆ

ನಡೆದುಕೊಳ್ಳುವಂತೆ ನಡೆದುಕೊಳ್ಳಬಾರದು. ಅಂಥವರಿಗೆ ಸುಳ್ಳು ಹೇಳಬಾರದು. ಕೊಟ್ಟ ವಾಗ್ದಾನಕ್ಕೆ ತಪ್ಪಬಾರದು. ವಂಚನೆ ಮಾಡಬಾರದು. ಪರೋಕ್ಷವಾಗಿಯಾಗಲಿ, ಪ್ರತ್ಯಕ್ಷ ವಾಗಿಯಾಗಲಿ ನಿಂದಿಸಬಾರದು. ಇವೆಲ್ಲ ದೇವತಾಪರಾಧಗಳಿಗೇ ಸಮಾನವು - ಎಂದು ತಿಳಿಯಬೇಕು. ಹೀಗೆ ಋಷಿಯು ಇಲ್ಲಿ ಅಪರಾಧಕ್ಷಮಾಪಣೆಯನ್ನು ಕೇಳಿಕೊಂಡಿರುತ್ತಾನೆ.

**ಸೂರ್ಯೋ ನೋ ದಿವಸ್ಪಾತು ವಾತೋ ಅಂತರಿಕ್ಷಾತ್ ।**
**ಅಗ್ನಿರ್ನಃ ಪಾರ್ಥಿವೇಭ್ಯಃ ॥ ೫೦ ॥**

**"ದ್ಯುಲೋಕದಲ್ಲಿರುವ ದೇವತೆಗಳ ಕಡೆಯಿಂದ ಸೂರ್ಯನು ನಮ್ಮನ್ನು ಕಾಪಾಡಲಿ. ಹಾಗೆಯೇ ಅಂತರಿಕ್ಷದಲ್ಲಿರುವ (ಬಾಧಕ)ರಾದ ಶತ್ರುಗಳಿಂದ ವಾಯುವು ರಕ್ಷಿಸಲಿ. ಮತ್ತು ಭೂಮಿಯಲ್ಲಿರಬಹುದಾದ (ದುಷ್ಟರಿಂದ ನಮ್ಮನ್ನು) ಅಗ್ನಿಯು ಕಾಪಾಡಲಿ !" ಎಂದರ್ಥ.**

ಈ ಮಂತ್ರದಲ್ಲಿ ದ್ಯುಲೋಕ(ಸ್ವರ್ಗ) ದೇವತೆಗಳ ಕಡೆಯಿಂದ ನಮ್ಮನ್ನು ಸೂರ್ಯನು ಕಾಪಾಡಲಿ ಎಂಬ ಪ್ರಾರ್ಥನೆಯಿದೆ. ದೇವತೆಗಳು ಒಳ್ಳೆಯವರೇ ಸರಿ. ಅವರು ಯಾರಿಗೂ ಕೆಡುಕನ್ನುಂಟುಮಾಡುವದಿಲ್ಲ. ಉದಾಹರಣೆಗೆ ಪರ್ಜನ್ಯ (ಮಳೆ)ದೇವತೆಯನ್ನು ತೆಗೆದುಕೊಳ್ಳೋಣ. ಮಳೆಯು ಬರಬೇಕಾದದ್ದು ತೀರ ಅಗತ್ಯವೇ ಸರಿ. ಆದರೆ ಅತಿಯಾಗಿ ಮಳೆಯು ಸುರಿದರೆ ಅಥವಾ ಮಳೆಗಾಲವನ್ನೆದುರಿಸಲು ನಾವು ಸಿದ್ಧರಾಗದೆ ಇರುವಾಗ ಮಳೆಯುಂಟಾಗಿ ತೊಂದರೆಗೀಡಾದರೆ ದೇವತೆಗಳಿಂದಲೂ ನಮಗೆ ಅನಾನುಕೂಲವೇ ಆಗಲಿದೆ. ಹೀಗೆಯೇ ಗಾಳಿ, ಮೋಡ(ವರುಣ), ಚಂದ್ರಾದಿಗ್ರಹಗಳು ಕೂಡ ತಮ್ಮ ಚಲನಾದಿಗಳಿಂದ ಜನರಿಗೆ ಅನಿಷ್ಟರಾಗಬಹುದು. ಇದನ್ನು 'ಗ್ರಹಬಾರದೋಷ'ವೆನ್ನುವರು. ಶನಿಯೆಂಬುವನು ದೇವತೆಯೇ ಆಗಿದ್ದರೂ ಜನರಿಗೆ ಅವನಿಂದ ದುಃಖದ ಕಾಟವೇ ಹೆಚ್ಚು ಪರಿಚಿತವಾಗಿದೆ. ಆ ಸಂದರ್ಭದಲ್ಲಿ ಅವನು ದೇವತೆಯೆಂಬುದೂ ಜನರಿಗೆ ಮರೆತುಹೋಗಿರುತ್ತದೆ. ಇರಲಿ, ಹೀಗೆ ದೇವತೆಗಳ ಕಡೆಯಿಂದ ಒದಗಬಹುದಾದ ನಮ್ಮ ಪಾಪಗಳ ಫಲರೂಪವೇ ಆದ ಕಷ್ಟಗಳನ್ನೆಲ್ಲ ಸೂರ್ಯದೇವನು ಎಂದರೆ ಸರ್ವಪ್ರೇರಕನಾದ ಭಗವಂತನು ಪರಿಹರಿಸಲಿ - ಎಂದಭಿಪ್ರಾಯ. ಹಾಗೆಯೇ ಅಂತರಿಕ್ಷದೇವತೆಗಳಾದ ಸಿಡಿಲು, ಬಿಸಿಲು, ಹಿಮ, ಚಳಿ - ಮುಂತಾದದ್ದರಿಂದಲೂ ವಾತನೆಂದರೆ ವಾಯುದೇವತೆಯು ನಮ್ಮನ್ನು ರಕ್ಷಿಸಲಿ- ಎಂದೂ ಪ್ರಾರ್ಥಿಸಲಾಗಿದೆ. ಯಜುರ್ವೇದಮಂತ್ರಗಳಲ್ಲಿ ಈ ಕೆಳಗೆ ಕಂಡಂತೆ ಒಂದು ಪ್ರಾರ್ಥನೆಯಿದೆ.

**ಶಂ ನೋ ವಾತಃ ಪವತಾಂ ಮಾತರಿಶ್ವಾ ಶಂ ನಸ್ತಪತು ಸೂರ್ಯಃ ।**
**ಅಹಾನಿ ಶಂ ಭವಂತು ನಃ ಶಗ್ಂ ರಾತ್ರಿಃ ಪ್ರತಿಧೀಯತಾಮ್ ।**
**ಶಮುಷಾ ನೋ ವ್ಯುಚ್ಛತು ಶಮಾದಿತ್ಯ ಉದೇತು ನಃ ॥**

"ಗಾಳಿಯು ನಮಗೆ ಅನುಕೂಲಕರವಾಗಿ ಬೀಸಲಿ; ಸೂರ್ಯನೂ ಹಾಗೆಯೇ ಬೆಳಗಲಿ; ಹಗಲುಗಳು ನಮಗೆ ಸುಖವುಂಟುಮಾಡಲಿ; ರಾತ್ರಿಯು ಶುಭವನ್ನು ನೀಡಲಿ ! ಉಷಃಕಾಲವು ನಮಗೆ ಸುಖವನ್ನೀಯಲಿ ! ಸೂರ್ಯನು ಮಂಗಳಕರನಾಗಿ ಉದಯಿಸಲಿ" ಹೀಗೆ ವೈದಿಕಮಂತ್ರಗಳಲ್ಲಿ ದೇವತೆಗಳನ್ನು ಶುಭಕಾರಕರಾಗುವಂತೆ ಬೇಡಿಕೊಳ್ಳುವ ಪ್ರಾರ್ಥನೆಗಳಿವೆ. ಮುಂದುವರೆದು 'ಅಗ್ನಿಯು ಪಾರ್ಥಿವಜೀವಿಗಳಿಂದ ನಮ್ಮನ್ನು ಕಾಪಾಡಲಿ' ಎಂಬ ಬೇಡಿಕೆಯೂ ಇದೆ. ಭೂಮಿಯಲ್ಲಿರುವ ಸಸ್ಯಗಳು, ಪ್ರಾಣಿಗಳು, ಜನರು ಮುಂತಾದ ಎಲ್ಲ ಜೀವಿಗಳಲ್ಲಿಯೂ ನಮಗೆ ಪ್ರತಿಕೂಲರಾದವರನ್ನು ಅಗ್ನಿಯು ತಡೆದು ನಮ್ಮನ್ನು ಕಾಪಾಡಲಿ ! ಎಂದಭಿಪ್ರಾಯ. ಅಗ್ನಿಗೆ 'ರಕ್ಷೋಘ್ನ'ನೆಂಬ ಬಿರುದು ಇದೆ. ಆತನು ರಾಕ್ಷಸರನ್ನು ಹೊಡೆದೋಡಿಸುವವನಾಗಿದ್ದಾನೆ. "ರಾಕ್ಷೋಘ್ನಸೂಕ್ತ" ಗಳೆಂದೇ ಪ್ರಸಿದ್ಧವಾದ ವೇದಮಂತ್ರಗಳಿವೆ. ಹೊಸಮನೆಗೆ ಪ್ರವೇಶಿಸುವ ಮುಂಚೆ ಹಿಂದಿನ ರಾತ್ರೆಯಲ್ಲಿ "ರಾಕ್ಷೋಘ್ನಹೋಮ"ವೆಂಬ ಕರ್ಮವನ್ನು ವೈದಿಕರೂ, ತಾಂತ್ರಿಕರೂ ನೆರವೇರಿಸುವದು ಅನೇಕರಿಗೆ ಗೊತ್ತಿರಬಹುದು. ಇದರಿಂದ ನೂತನಗೃಹಕ್ಕೆ ದೇವತಾಸಂಬಂಧವಾದ ರಕ್ಷಣೆಯು ದೊರಕಿ ಅನಿಷ್ಟಗಳು ಪರಿಹಾರವಾಗುವದೆಂದು ಆಸ್ತಿಕರು ಭಾವಿಸುತ್ತಾರೆ. ಇಲ್ಲಿ ಸೂರ್ಯನು ಕಾಪಾಡಲಿ - ಎಂಬ ಸ್ಪಷ್ಟವಚನವಿರುವದರಿಂದ ಸೌರಸೂಕ್ತವೆಂದೇ ಈ ಮಂತ್ರಭಾಗವನ್ನು ಹೆಸರಿಸಲಾಗಿದೆ.

**ಜೋಷಾ ಸವಿತರ್ಯಸ್ಯ ತೇ ಹರಃ ಶತಂ ಸವಾಂ ಅರ್ಹತಿ ।**
**ಪಾಹಿ ನೋ ದಿದ್ಯುತಃ ಪತಂತ್ಯಾ ॥ ೫೧ ॥**

**"ಎಲೈ ಸವಿತೃದೇವನೆ, ನಮ್ಮ ಸ್ತುತಿಗಳನ್ನು ಕೇಳುವವನಾಗು. ನಿನ್ನ ದಿವ್ಯಕಿರಣಗಳು ನೂರು ಯಜ್ಞಗಳನ್ನಾದರೂ ಹೊಂದಲು ಯೋಗ್ಯವಾದದ್ದು. ಆ ನೀನು ನಮ್ಮನ್ನು ಶತ್ರುಗಳ ವಜ್ರಾಯುಧದಿಂದ ಕಾಪಾಡು" - ಎಂದರ್ಥ.**

ಈ ಮಂತ್ರದಲ್ಲಿ ಸೂರ್ಯನ ಆರಾಧನೆಯನ್ನು ನಾವು ಜಪ, ತಪ, ನಮಸ್ಕಾರ, ಪೂಜೆ, ಹೋಮ - ಮುಂತಾದ ನಾನಾವಿಧವಾದ ಯಜ್ಞಗಳಿಂದ ಮಾಡಿದಮೇಲೂ ಇನ್ನೂ ಹೆಚ್ಚಿನ ಪೂಜಾದಿಗಳಿಗೂ ಅವನು ಅರ್ಹನಾಗಿರುವನೆಂದು

ಹೊಗಳಲಾಗಿದೆ. ಏಕೆಂದರೆ ಸೂರ್ಯಕಿರಣಗಳಿಂದ ಮಾನವರಿಗೆ ಹೆಚ್ಚಿನ ಉಪಕಾರವಾಗುತ್ತಿದೆ. ರೋಗಪರಿಹಾರದಿಂದಾರಂಭಿಸಿ, ಆಹಾರಸೇವನೆ, ಸಂಪಾದನೆ, ಉತ್ಪತ್ತಿ, ಮಾನಸಿಕವಾದ ಬುದ್ಧಿಬಲ, ಪ್ರಜ್ಞಾಮೇಧಾದಿಗಳವರೆಗೂ ಎಲ್ಲಾ ರೀತಿಯಿಂದಲೂ ಸೂರ್ಯನೇ ಪ್ರಾಣಿಗಳಿಗೆ, ಮನುಷ್ಯರಿಗೆ ದಿಕ್ಕಾಗಿರುವನು. ಆತನಿಂದಲ್ಲದೆ ಬೇರೆ ಯಾರಿಂದ ತಾನೆ ಪ್ರಾಣಿವರ್ಗಕ್ಕೆ ಅತಿಹೆಚ್ಚಿನ ಉಪಕಾರವಿದ್ದೀತು ? ಇಂಥ ಸೂರ್ಯನನ್ನು ಎಷ್ಟು ರೀತಿಯಿಂದ ಆರಾಧಿಸಿದರೂ ಸಾಲದೆಂದೇ ಹೇಳಬಹುದು. ಮತ್ತು ಸೂರ್ಯನು ಕಾಲಾತ್ಮನಾಗಿದ್ದು, ಉದಯಾಸ್ತಮಾನಗಳಿಂದ ಪ್ರಾಣಿಗಳ ಆಯುಸ್ಸನ್ನು ಅಳೆಯುತ್ತಿರುವನು. ಅವನನ್ನು "ದೇವಮಧು" (ದೇವತೆಗಳಲ್ಲಿ ಜೇನುತುಪ್ಪ)ವೆಂದೇ ಶ್ರುತಿಯಲ್ಲಿ ಹೊಗಳಿದೆ. ಆತನ ಕಿರಣಗಳು ನಾಲ್ಕು ದಿಕ್ಕುಗಳಲ್ಲಿಯೂ ಹಾಗೂ ಊರ್ಧ್ವಮುಖವಾಗಿಯೂ ಹರಡಿಕೊಂಡು ರಸೋತ್ಪತ್ತಿಯನ್ನು ಮಾಡುತ್ತಾ ಜಗತ್ತನ್ನೆಲ್ಲ ಪೋಷಿಸುತ್ತದೆಯೆಂದು ಛಾಂದೋಗ್ಯೋಪನಿಷತ್ತಿನಲ್ಲಿ ವಿವರವಾಗಿ ತಿಳಿಸಿದೆ. ಇಂಥ ಸೂರ್ಯನು ವಜ್ರಾಯುಧದ ಹೊಡೆತದಂಥ ಮಹಾವಿಪತ್ತುಗಳಿಂದ ನಮ್ಮನ್ನು ರಕ್ಷಿಸಲಿ - ಎಂದು ಋಷಿಯು ಕೇಳಿಕೊಂಡಿರುತ್ತಾನೆ.

**ಚಕ್ಷುರ್ನೋ ದೇವಃ ಸವಿತಾ ಚಕ್ಷುರ್ನ ಉತ ಪರ್ವತಃ ।**
**ಚಕ್ಷುರ್ಧಾತಾ ದಧಾತು ನಃ ॥ ೫೨ ॥**

**"ಸವಿತೃದೇವನೂ ಪರ್ವತನೆಂಬ ದೇವತೆಯೂ ಧಾತನೆಂಬ ದ್ವಾದಶಾದಿತ್ಯರಲ್ಲೊಬ್ಬನೂ - ಈ ಮೂವರೂ ನಮಗೆ ಚಕ್ಷುಸ್ಸನ್ನು ಎಂದರೆ ಕಣ್ಣನ್ನೂ ತೇಜಸ್ಸನ್ನೂ ನೀಡಲಿ"**

ಕಣ್ಣೆಂಬ ಇಂದ್ರಿಯಾನುಗ್ರಾಹಕನೇ ಸೂರ್ಯನು. ಅವನ ಪ್ರಸಾದದಿಂದ ಕಣ್ಣುಗಳು ನೂರು ವರ್ಷಗಳವರೆಗೂ ಕಾಣಬೇಕಾಗಿದೆ. ಹಾಗೆಯೇ ಒಳಗಿನ ಜ್ಞಾನಚಕ್ಷುಸ್ಸಿಗೂ ಸೂರ್ಯನೆಂಬ ಪರಮಾತ್ಮನೇ ಒಡೆಯನು. ಅರ್ಜುನನಿಗೆ ದಿವ್ಯಚಕ್ಷುವನ್ನು ನೀಡಿದಂತೆ ನಮಗೂ ನೀಡಬೇಕಾಗಿದೆ. ಪರ್ವತ, ಧಾತಾ - ಎಂದೂ ಸ್ತುತಿಸಲ್ಪಡುವ ಈ ದೇವನು ಉಭಯವಿಧವಾದ ಬೆಳಕನ್ನೂ ನೀಡಿ ಉದ್ಧಾರಮಾಡಲಿ - ಎಂದು ಇಲ್ಲಿ ಕೇಳಿಕೊಂಡಿದೆ.

**ಚಕ್ಷುರ್ನೋ ಧೇಹಿ ಚಕ್ಷುಷೇ ಚಕ್ಷುರ್ವಿಖ್ಯೈ ತನೂಭ್ಯಃ ।**
**ಸಂಚೇದಂ ವಿ ಚ ಪಶ್ಯೇಮ ॥ ೫೩ ॥**

**ನಮಗೆ ಕಣ್ಣುಗಳನ್ನು ಕೊಡು; ಎಂದರೆ ದರ್ಶನಸಾಮರ್ಥ್ಯವನ್ನು ಅನುಗ್ರಹಿಸು. ನಮ್ಮ ಶರೀರಗಳಿಗೆ (ಕಣ್ಣೇ ಭೂಷಣವಾದ್ದರಿಂದ) ಪ್ರಕಾಶವನ್ನು ಕಾಣುವಂಥ ಶಕ್ತಿಯನ್ನು ಅದಕ್ಕೆ ನೀಡುವವನಾಗು. ಆಗ ನಾವು ಎಲ್ಲವನ್ನೂ ಸ್ಫುಟವಾಗಿ ನೋಡುವವರಾಗುವೆವು' ಎಂಬಿದು ಮಂತ್ರದ ಅಭಿಪ್ರಾಯ.**

ಮಾನವನ ಬಲಗಣ್ಣಿನಲ್ಲಿ ಪರಮಾತ್ಮನು ಇದ್ದುಕೊಂಡಿರುವನೆಂದು ಶಾಸ್ತ್ರಗಳಲ್ಲಿ ಹೇಳಿದೆ. ಅವನು ಅಮೃತವೂ ಅಭಯವೂ ಆದ ಬ್ರಹ್ಮವೆಂದು ಹೊಗಳಿರುತ್ತದೆ. ಆಧಿದೈವಿಕಪ್ರಪಂಚದಲ್ಲಿ ವಿರಾಟ್‌ಪುರುಷನಿಗೆ ಸೂರ್ಯನೇ ಬಲಗಣ್ಣಾಗಿರುವನು. ಪುರುಷಸೂಕ್ತದಲ್ಲಿ ತಿಳಿಸಿರುವಂತೆ ಆ ಪುರುಷನ ಕಣ್ಣುಗಳಿಂದಲೇ ಸೂರ್ಯನು ಹುಟ್ಟಿದನೆಂದೂ ಪ್ರಸಿದ್ಧವಾಗಿದೆ. ಹೀಗೆ ಸೂರ್ಯನಿಗೂ ನಮ್ಮ ಚಕ್ಷುರಿಂದ್ರಿಯಕ್ಕೂ ಸಂಬಂಧವಿದೆಯಾಗಿ ಒಬ್ಬ ಋಷಿಯು ಈ ಮಂತ್ರದಲ್ಲಿ ಸೂರ್ಯನನ್ನು ತನ್ನ ಕಣ್ಣುಗಳಿಗೆ ಅನುಗ್ರಹವುಂಟು ಮಾಡಬೇಕೆಂದು ಬೇಡಿಕೊಂಡಿರುತ್ತಾನೆ. ಅಧ್ಯಾತ್ಮವಾಗಿರುವ ಚಕ್ಷುರಿಂದ್ರಿಯವು ಒಂದು ಗೋಳಕವಾಗಿದ್ದು ಜಡವಾಗಿದೆ. ಆತ್ಮನ ಹಿನ್ನೆಲೆಯಲ್ಲಿ ಮಾತ್ರ ಅದು ಕೆಲಸ ಮಾಡಬಲ್ಲದು. ಹೇಗೆ ಬ್ಯಾಟರಿಯ ಪ್ರಕಾಶವೆಲ್ಲ ಷೆಲ್ಲನ್ನು ಅವಲಂಬಿಸಿದೆಯೋ ಹಾಗೆಯೇ ಕಣ್ಣುಗಳು ಸಹ ಆತ್ಮನ ಬೆಳಕನ್ನವಲಂಬಿಸಿಯೇ ತಮ್ಮ ವ್ಯಾಪಾರವನ್ನು ಮಾಡುವವು. ಈ ಆತ್ಮನೇ ಸೂರ್ಯನಲ್ಲಿಯೂ ಇದ್ದುಕೊಂಡಿರುತ್ತಾನೆ. ಹೀಗೆ ಸೂರ್ಯನು ಎಲ್ಲಾ ಪ್ರಾಣಿಗಳ ಕಣ್ಣುಗಳಿಗೂ ಅನುಗ್ರಾಹಕನೂ, ಪ್ರಕಾಶಕನೂ ಆಗಿರುತ್ತಾನೆ. ಕಣ್ಣಿಲ್ಲದವನಿಗೆ ಪ್ರಕಾಶವೆಂದರೇನು ? ಎಂಬುದು ತಿಳಿಯುವಂತೆಯೇ ಇಲ್ಲ. ಸೂರ್ಯಭಗವಂತನೇ ಕಣ್ಣಾಗಿಯೂ ಸೂರ್ಯಾದಿಜ್ಯೋತಿಯಾಗಿಯೂ ಬೆಳಗುತ್ತಿರುವದನ್ನು ಅರಿತ ಮಹರ್ಷಿಯು ಎಲ್ಲರಿಗೂ ದರ್ಶನಸಾಮರ್ಥ್ಯವನ್ನೂ ಚಿರಕಾಲ ಕಣ್ಣುಗಳು ರೂಪಾದಿಗಳನ್ನು ನೋಡುತ್ತಿರುವಂಥ ಸೌಭಾಗ್ಯವನ್ನೂ ಕರುಣಿಸುವಂತೆ ಇಲ್ಲಿ ಪ್ರಾರ್ಥಿಸಿದ್ದಾನೆ. ಇದರಿಂದ ತಿಳಿದುಬರುವದೇನೆಂದರೆ : ಮಾನವನು ನಾಸ್ತಿಕನಾಗಿದ್ದರೂ ಸರಿ; ಪ್ರತ್ಯಕ್ಷದೇವತೆಯಾದ ಸೂರ್ಯನನ್ನು ಅಲ್ಲಗಳೆಯಲಾಗುವದಿಲ್ಲ ಮತ್ತು ತನ್ನ ಕಣ್ಣುಗಳನ್ನು ಉಪಯೋಗಿಸದೆ ರೂಪಪ್ರಪಂಚವನ್ನು ಅನುಭವಿಸಲಾಗುವದಿಲ್ಲ ಹಾಗೂ ಪ್ರಕಾಶವಿಲ್ಲವಾದರೆ ಕಣ್ಣುಗಳಿದ್ದರೂ ಉಪಯೋಗವಿಲ್ಲ. ಹೀಗಿರುವಲ್ಲಿ ದರ್ಶನಶಕ್ತಿಯನ್ನೂ ತೇಜಸ್ಸನ್ನೂ ದಯಪಾಲಿಸುವ ಸೂರ್ಯನನ್ನು ಮರೆಯಲಾದೀತೆ ? ಯಾರೊಬ್ಬರೂ ಇಂಥ ಅಪಚಾರವನ್ನೆಸಗದೆ ಸೂರ್ಯನನ್ನು ಆರಾಧಿಸಬೇಕು - ಎಂದಭಿಪ್ರಾಯ.

ಈ ಮಂತ್ರವನ್ನು ಮತ್ತೊಂದು ರೀತಿಯಿಂದಲೂ ವ್ಯಾಖ್ಯಾನಮಾಡಬಹುದು. ಹೇಗೆಂದರೆ 'ದರ್ಶನ' ಎಂಬ ಶಬ್ದವನ್ನು ಹೊರಗೆ ನೋಡುವ ಕ್ರಿಯೆಗೆ

ಉಪಯೋಗಿಸುವಂತೆಯೇ ಒಳಕ್ಕೆ ನೋಡುವ ಕ್ರಿಯೆಗೂ ಬಳಸಬಹುದಾಗಿದೆ. ಈಗಿನ ಕಾಲಕ್ಕೆ ಹೊರನೋಟವೇ ಪ್ರಧಾನವಾಗಿರುವದರಿಂದ ಎಲ್ಲರೂ 'ಪ್ರದರ್ಶನ' (Exhibition)ಗಳನ್ನು ಏರ್ಪಡಿಸಲು ಹೊರಟಿರುತ್ತಾರೆ. ಇಂಥ ಪ್ರದರ್ಶನಗಳನ್ನು ನೋಡಿ ಜನರು ಬೆರಗಾಗುತ್ತಾರೆ. ನಾಟಕ, ನೃತ್ಯ, ಸಿನೆಮಗಳನ್ನು ಈ ಪಟ್ಟಿಗೆ ಸೇರಿಸಬಹುದು. ಆದರೆ ಏನನ್ನೇ ನೋಡಲಿ, ದೇವರೇ ಸೃಷ್ಟಿಮಾಡದೆ ಇರುವ ಮತ್ತು ನೋಡುವ ಶಕ್ತಿಯನ್ನೇ ನೀಡದೆ ಇರುವಂಥಲ್ಲಿಯೂ ನೋಟವೆಂಬುದು ದಕ್ಕಿರುವುದು ಎಂದಿಗೂ ನಮಗೆ ಅನುಭವದಲ್ಲಿಲ್ಲ. ಆದ್ದರಿಂದ ದೇವರ ದೃಷ್ಟಿಯಲ್ಲಿ ಮಾನವನು ಆ ದೇವನ ಲೀಲೆ - ಮಹಿಮೆಗಳನ್ನು ಪ್ರಾಕೃತಸ್ಥಿತಿಯಲ್ಲಿ ಇನ್ನೂ ನೋಡಿಲ್ಲವೆಂದೇ ಆಗುವದು. ಹೇಗೆಂದರೆ ಅರ್ಜುನನು ಕೃಷ್ಣನನ್ನು ನೋಡಿದ್ದನಾದರೂ ದಿವ್ಯಚಕ್ಷುಸ್ಸನ್ನು ಪಡೆದು ಕಂಡುಕೊಂಡ ವಿಶ್ವರೂಪವು ಹೊಸದಲ್ಲವೆ ? ಅದು ಮುಂಚೆ ಅವನಿಗೆ ಎಲ್ಲಿ ಕಂಡಿತ್ತು ? ಭಗವಂತನೇ ಅನುಗ್ರಹಿಸಿದ ಮೇಲಲ್ಲವೆ, ದೊರಕಿದ್ದು ? ಹಾಗೆಯೇ ಮಾನವರೆಲ್ಲರಿಗೂ ದಿವ್ಯಚಕ್ಷುಸ್ಸನ್ನು ತೆರೆದಾಗ ಕಾಣಬರುವ 'ಅಂತರ್ದರ್ಶನ'ವೂ ಒಂದಿರುತ್ತದೆ. ಆದರೆ ಈ ಅಂತರ್ದರ್ಶನಕ್ಕೆ ಪ್ರಯತ್ನಪಡುವವರು ಕಡಿಮೆ. ಪ್ರದರ್ಶನಗಳಿಗೆ ಇರುವಷ್ಟು ನೂಕುನುಗ್ಗಲು (Rush) ಅಂತರ್ದರ್ಶನ ಕಾರ್ಯಕ್ರಮಕ್ಕೆ ಇರುವ್ವದಿಲ್ಲ. ಕೆಲವೇ ಜ್ಞಾಣಿಗೂ, ಸಾಧಕರಿಗೂ, ಭಕ್ತರಿಗೂ ದೊರಕುವ ಈ ಅಂತರ್ದರ್ಶನವನ್ನೂ ಇದರ ಆನಂದವನ್ನೂ ದಯಪಾಲಿಸುವಂತೆಯೂ ಋಷಿಯು ಇಲ್ಲಿ ಕೇಳಿಕೊಂಡಿರುತ್ತಾನೆ. ಒಮ್ಮೆ ಅಂತರ್ದರ್ಶನವಾಯಿತೆಂದರೆ ಪ್ರದರ್ಶನಕ್ಕೆ ನಾವು ಹಾತುವರಿಯುವದೇ ನಿಂತುಹೋಗುವದು. ಏಕೆಂದರೆ ಅಲ್ಲಿರುವ ಸಹಜಾನಂದವು ಬಾಹ್ಯಪ್ರಪಂಚದಲ್ಲಿ ಇಂದ್ರಿಯ ವಿಷಯಗಳ ಚೌಕಟ್ಟಿಗೆ ಒಳಪಟ್ಟು ಕ್ಷಣಿಕವಾಗಿ, ಅನಿತ್ಯವಾಗಿ ಕಂಡುಬರುವ ಆನಂದದಂತೆ ಅಲ್ಲ. ಅದು ನಿತ್ಯವಾಗಿರುವದು. ಅದನ್ನೂ ಕೊಡಬೇಕೆಂದು ಋಷಿಯು ಕೇಳಿಕೊಂಡಿದ್ದಾನೆ. ಇನ್ನು ಕಣ್ಣಿನ ದೃಷ್ಟಿಯಿಂದಲೂ ಈ ಮಂತ್ರವು ಅರ್ಥವತ್ತಾದ ಪ್ರಾರ್ಥನೆಯಾಗಿದೆ. ಹೇಗೆಂದರೆ 'ಎಲ್ಲಾ ಇಂದ್ರಿಯಗಳ ನಡುವೆ ಕಣ್ಣೇ ಪ್ರಧಾನವು' ಎಂದು ಒಂದು ಮಾತಿದೆ. 'ಹೆಣ್ಣು ಚೆಂದ ; ಆದರೆ ಕಣ್ಣು ಕುರುಡು' ಎಂಬ ಗಾದೆಯೂ ಉಂಟು. ಕಣ್ಣು ಇಲ್ಲವಾದರೆ ಎಂಥ ನಷ್ಟವೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಕಣ್ಣನ್ನು ಚಿಕಿತ್ಸೆ ಮಾಡುವವರು, ಪರೆಯನ್ನು ತೆಗೆಯುವವರು ಕೂಡ ಹೊಸದಾಗಿ ಕಣ್ಣನ್ನೇನೂ ಕೊಡಲಾರರು. ದರ್ಶನಕ್ಕೆ ಅಡ್ಡಿಗಳಿದ್ದರೆ ಪರಿಹರಿಸಬಲ್ಲರು. ಮೂಲಭೂತವಾದ ಚಕ್ಷುರಿಂದ್ರಿಯವು ಸೂರ್ಯನ ದಯೆಯಿಂದಲೇ ದೊರಕಬೇಕು.

ಅದು ಅಂತರಂಗದಲ್ಲಿ ಕಂಡುಕೊಳ್ಳಬೇಕಾದ ಅಮೃತತತ್ತ್ವಕ್ಕೆ ಸಹಾಯವಾಗಿರುವಂಥ ಬಾಹ್ಯವ್ಯಾಪಾರಗಳನ್ನೇ ಮಾಡಬೇಕು. ಇಷ್ಟೆಲ್ಲವೂ ಸೂರ್ಯನ ಕೃಪೆಯಿಂದಲೇ ದೊರಕಬೇಕು - ಎಂದಭಿಪ್ರಾಯ.

**ಸುಸಂದೃಶಂ ತ್ವಾ ವಯಂ ಪ್ರತಿ ಪಶ್ಯೇಮ ಸೂರ್ಯ ।**
**ವಿಪಶ್ಯೇಮ ನೃಚಕ್ಷಸಃ ॥ ೫೪ ॥**

**'ಎಲೈ ಸೂರ್ಯನೆ, ನಾವುಗಳು ಸುಸಂದೃಶನಾಗಿರುವ ನಿನ್ನನ್ನು ಪ್ರತ್ಯೇಕವಾಗಿ ನೋಡುವಂತಾಗಲಿ ' ಹಾಗೂ ಮನುಷ್ಯರಿಗೆ ದರ್ಶನಯೋಗ್ಯವಾದುದೆಲ್ಲವೂ ನಿನ್ನ ದಯೆಯಿಂದ ನಮಗೆ ಕಾಣುವಂತಾಗಲಿ' - ಎಂದಭಿಪ್ರಾಯ.**

ಈ ಮಂತ್ರದಲ್ಲಿ ಸೂರ್ಯನನ್ನು ಸುಸಂದೃಶನೆಂದು ಹೊಗಳಿದೆ. ಸೂರ್ಯನು ಉದಯಾಸ್ತಮಾನಕಾಲಗಳಲ್ಲಿ ನೋಡಲು ರಮಣೀಯನಾಗಿರುತ್ತಾನೆ. ಸೂರ್ಯಾಸ್ತದ ಸೌಂದರ್ಯವನ್ನು ನೋಡುವದಕ್ಕಾಗಿಯೇ ಜನರು ಕೆಲವು ವಿಶಿಷ್ಟ ಸ್ಥಳಗಳಿಗೆ ಹೋಗುತ್ತಾರೆ. ಹಾಗೆಯೇ ಸರ್ವತ್ರವೂ ಸೂರ್ಯೋದಯವು ಮಾತ್ರ ರಮಣೀಯವಾಗಿರುವದು. ಕೆಲವು ಕವಿಗಳು ತಮ್ಮ ಕಾವ್ಯಗಳನ್ನು ಸೂರ್ಯೋದಯ ವರ್ಣನೆಯಿಂದಲೇ ಆರಂಭಿಸಿರುತ್ತಾರೆ. ಹಕ್ಕಿಪಕ್ಷಿಗಳಿಂದಾರಂಭಿಸಿ ಮನುಷ್ಯರು, ಋಷಿಗಳು, ದೇವತೆಗಳು ಕೂಡ ಸೂರ್ಯೋದಯವನ್ನು ನಿರೀಕ್ಷಿಸುತ್ತಾರೆ. ಹೊಂಬಣ್ಣದ ಕಿರಣಗಳುಳ್ಳ, ಭಗವಂತನು ಮೊದಲು ತಾಮ್ರನಾಗಿಯೂ, ಅನಂತರ ಅರುಣನಾಗಿಯೂ, ಮತ್ತೆ ಸ್ವಲ್ಪ ಕಾಲದ ಅನಂತರ ಬಭ್ರುವಾಗಿಯೂ ತೋರಿಕೊಳ್ಳುವನೆಂದು ರುದ್ರಾಧ್ಯಾಯದಲ್ಲಿ ಹೊಗಳಿದೆ. ಹೀಗೆ ಸೂರ್ಯದೇವನು ಸು ಎಂದರೆ ಶೋಭನವಾದ ಸಂದೃಶನು - ಎಂದರೆ ದರ್ಶನವುಳ್ಳವನಾಗಿರುತ್ತಾನೆ. ಇಂಥ ಜ್ಯೋತಿರಾತ್ಮನನ್ನು ನಾವು ಒಳಗೂ ಹೊರಗೂ ಕಂಡುಕೊಳ್ಳುವಂತಾಗಲಿ ಎಂದು ಋಷಿಯು ಪ್ರಾರ್ಥಿಸಿದ್ದಾನೆ. ಅಧಿದೈವಿಕವಾಗಿ ಸೂರ್ಯನನ್ನು ದೇವತೆಯೆಂದು ಕಂಡುಕೊಳ್ಳುವದು ಕೂಡ ಈಗಿನ ಜನರಿಗೆ ಕಷ್ಟವಾಗಿದೆ. ಏಕೆಂದರೆ ಆ ರೀತಿಯಾದ ತಿಳುವಳಿಕೆ, ಶ್ರದ್ಧೆ, ಸಂಸ್ಕಾರಗಳಿರುವದಿಲ್ಲ. ಇವುಗಳಿಲ್ಲದೆ ಸೂರ್ಯ ದೇವನನ್ನು ಅರಿತುಕೊಳ್ಳಲಾಗುವದಿಲ್ಲ. ಇನ್ನು ಅಧ್ಯಾತ್ಮವಾಗಿ ತನ್ನ ಆತ್ಮನೇ ಸೂರ್ಯನೆಂದು ಕಂಡುಕೊಳ್ಳಬೇಕಾದರೆ ವಾಮದೇವನಂಥ ಋಷಿಯೇ ನಾವಾಗಬೇಕು. ಇರಲಿ. ಸೂರ್ಯನು ಬ್ರಹ್ಮವೇ - ಎಂದು 'ಅಸಾವಾದಿತ್ಯೋ ಬ್ರಹ್ಮ' - ಎಂದು ತೈತ್ತಿರೀಯಾರಣ್ಯಕದಲ್ಲಿ ತಿಳಿಸಿದೆ. ಸಂಧ್ಯಾವಂದನೆಯ ಕಾಲಕ್ಕೂ ಹೀಗೆ ಹೇಳಿ ವಂದನೆಯನ್ನು ಮಾಡುವ ಪದ್ಧತಿಯಿದೆ. ಆದ್ದರಿಂದ ಸೂರ್ಯಸಂದರ್ಶನವು (Interview) ಎಲ್ಲರಿಗೂ ಲಭ್ಯವಲ್ಲ. ಅರಿತವರಿಗೆ ಮಾತ್ರ ಅದು ದಕ್ಕಲಿದೆ. ಹೀಗೆ ನಾವು ಭದ್ರವನ್ನೇ ನೋಡುತ್ತಾ ಬಾಳೋಣ - ಎಂದು ಇಲ್ಲಿ ಕೇಳಿಕೊಳ್ಳಲಾಗಿದೆ.

**ವಿಭ್ರಾಡ್ ಬೃಹತ್ ಪಿಬತು ಸೋಮ್ಯಂ**
**ಮಧ್ವಾಯುರ್ದಧದ್ ಯಜ್ಞಪತಾವವಿಹ್ರುತಮ್ ।**
**ವಾತಜೂತೋ ಯೋ ಅಭಿರಕ್ಷತಿತ್ಮನಾ ಪ್ರಜಾಃ**
**ಪುಪೋಷ ಪುರುಧಾ ವಿ ರಾಜತಿ ॥ ೫೫ ॥**

**"ವಿರಾಜಮಾನನಾದ ಸೂರ್ಯನು ಯಜಮಾನನಿಗೆ ಹುಸಿಯಲ್ಲದ ಪೂರ್ಣಾಯುಸ್ಸನ್ನು ನೀಡಿ ಸೋಮರೂಪವಾದ ಮಧುವನ್ನು ಪಾನಮಾಡಲಿ! ಮಹಾವಾಯುವಿನಿಂದ ಪ್ರೇರಿಸಲ್ಪಟ್ಟವನಾಗಿ ತಾನೇ ಜಗತ್ತನ್ನೆಲ್ಲ ಕಾಪಾಡುವವನಾಗಲಿ! ಆ ಸೂರ್ಯನು ಪ್ರಜೆಗಳನ್ನು ಮಳೆಯನ್ನು ಅನುಗ್ರಹಿಸುವ ಮೂಲಕ ರಕ್ಷಿಸಲಿ! ಹೀಗೆ ಯಾವಾಗಲೂ ವಿರಾಜಮಾನನಾಗಿರಲಿ" ಎಂದು ಈ ಮಂತ್ರದ ಅಭಿಪ್ರಾಯ.**

ಈ ಮಂತ್ರದಲ್ಲಿ ಮೊದಲಿಗೆ ಯಜ್ಞ ಮಾಡುವ ಕರ್ತೃವಾದ ಯಜಮಾನನಿಗೆ ಸೂರ್ಯನು ಪೂರ್ಣವಾದ ಆಯುಷ್ಯವನ್ನು ದಯಪಾಲಿಸಲೆಂದು ಕೇಳಿಕೊಂಡಿದೆ. ಆಯುಸ್ಸಿಗೆ ಕಾಲಾತ್ಮನಾದ ಸೂರ್ಯನೇ ಒಡೆಯನು. ಆತನ ಉದಯಾಸ್ತಗಳೇ ಕಾಲಗಣನೆಗೆ ಮೂಲಭೂತವಾದ ಆಧಾರವಾಗಿದೆ. ಸೂರ್ಯನು ಯಜಮಾನನ ಯಜ್ಞದಲ್ಲಿ ಸೋಮವೆಂಬ ಮಧುವನ್ನು ಪಾನಮಾಡಿ ಅನಂತರ ಅನುಗ್ರಹಮಾಡಲಿ - ಎಂದು ಪ್ರಾರ್ಥಿಸಿರುವದರಿಂದ ಯಜ್ಞಪತಿಯಾದ ವಿಷ್ಣುವನ್ನೇ ಇಲ್ಲಿ ಸೂರ್ಯನೆಂಬ ಶಬ್ದದಿಂದ ಹೊಗಳಿದೆ - ಎಂದೂ ತಿಳಿಯಬಹುದು. ಹೀಗೆ ಸೂರ್ಯನು ಯಜ್ಞ ಸಂಬಂಧವನ್ನು ಹೊಂದಿರುವದರ ಜೊತೆಗೆ ಯಾವಾಗ ಯಜ್ಞವನ್ನು ಕೈಗೊಳ್ಳಬೇಕೆಂಬುದನ್ನೂ ಕಾಲರೂಪದಿಂದ ಆತನೇ ಸೂಚಿಸಬೇಕಾಗಿದೆ. ಸೂರ್ಯನು ಹನ್ನೆರಡು ರಾಶಿಗಳಲ್ಲಿಯೂ ಸಂಚಾರಮಾಡುವಾಗ ಮಧು-ಮಾಧವ ಮುಂತಾದ ಹೆಸರಿನಿಂದ ಹನ್ನೆರಡು ತಿಂಗಳುಗಳು ಆಗುವವು. ಹಾಗೂ ಆತನು ಇಪ್ಪತ್ತೇಳು ನಕ್ಷತ್ರಗಳನ್ನು ದಾಟುವದರಿಂದಲೇ ಬೇಸಿಗೆ-ಮಳೆ- ಚಳಿಗಾಲಗಳಾಗುವವು. ಇವುಗಳಲ್ಲಿ ಮಳೆಗಾಲವು ಜಗತ್ತಿಗೆ ಬಹಳ ಮುಖ್ಯ. ಏಕೆಂದರೆ ನೀರಿಲ್ಲದೆ ಪ್ರಾಣಿಗಳಿಗೆ ಜೀವನವಿರುವದಿಲ್ಲ. ಜ್ಯೋತಿಷ್ಯರ ಗಣನೆಯಂತೆ ಪೂರ್ವಾಭಾದ್ರ - ನಾಲ್ಕನೆಯ ಪಾದದಿಂದಾರಂಭಿಸಿ ವಿಶಾಖಾನಕ್ಷತ್ರವನ್ನು ಸೂರ್ಯನು ದಾಟುವವರೆಗೂ ಮಳೆ ಬರುತ್ತದೆ - ಎಂದು ಸಿದ್ಧಾಂತವು. ಈ ಅವಧಿಯನ್ನು ಮುಂಗಾರು-ಹಿಂಗಾರುಗಳೆಂದೂ ವಿಂಗಡಿಸಿದ್ದಾರೆ. ಸೂರ್ಯನಿಗೂ ವಾಯುವಿಗೂ ನಿಕಟ ಸಂಬಂಧವಿದೆ. ವಾಯುವು ಸೂರ್ಯನಿಗಿಂತ ದೊಡ್ಡವನು. ಅವನನ್ನು ಎಲ್ಲಾ ದೇವತೆಗಳನ್ನೂ ನುಂಗುವ 'ಸಂವರ್ಗ'ನೆಂದೇ ಉಪನಿಷತ್ತಿನಲ್ಲಿ ಹೊಗಳಿದೆ. ಇಂಥ ವಾಯುವು ಸೂರ್ಯನನ್ನು ಪ್ರೇರಿಸಿ ಹನ್ನೆರಡು ರಾಶಿಗಳಲ್ಲಿಯೂ ಸಂಚರಿಸುವಂತೆ ಮಾಡುವನು. ಮಾರುತನೆಂಬ ವಾಯುವೇ ಬೇರೆಬೇರೆಯ ದಿಕ್ಕುಗಳಿಂದ ಬೀಸುತ್ತಾ

ಕಾಲಕಾಲಕ್ಕೆ ಸೂರ್ಯನ ಸಹಾಯದಿಂದ ಮಳೆಗೆರೆಯುವನು. ಆಗ ಸೂರ್ಯನು ಜಗದ್ರಕ್ಷಕನೆನಿಸುವನು. ಹೀಗಿರುವದರಿಂದ ಯಜ್ಞದಲ್ಲಿ ಸೂರ್ಯನೊಡನೆ ವಾಯುವೂ ಆರಾಧಿಸಲ್ಪಡುವನು. ಪ್ರಕೃತ - ಈ ಮಂತ್ರವು ಸೂರ್ಯಸ್ತುತಿ ರೂಪವಾಗಿರುವದರಿಂದ ವಾಯುಪ್ರೇರಿತನಾದ ಸೂರ್ಯನು ತನ್ನ ಸಂಚಾರಗಳಿಂದ ಮಳೆಬೆಳೆಗಳನ್ನು ಜಗತ್ತಿಗೆ ದಯಪಾಲಿಸುತ್ತಾ ಯಜಮಾನನಿಂದ ಸೋಮಪಾನ ಮಾಡಿಸಲ್ಪಡುತ್ತಾ ತಾನೇ ಎಲ್ಲವನ್ನೂ ಕೃಪಾದೃಷ್ಟಿಯಿಂದ ನೋಡುತ್ತಾ ಕಾಪಾಡಲಿ! ಎಂದು ಪ್ರಾರ್ಥಿಸಿದೆ. ಸೂರ್ಯಾರಾಧಕನಾದ ಯಜಮಾನನು ಪ್ರಪಂಚದ ಕಲ್ಯಾಣಕ್ಕೆ ಆಗತ್ಯನಾಗಿರುತ್ತಾನೆ. ದೇವತಾರಾಧಕರು ಇನ್ನೂ ಈಗಲೂ ಇರುವುದರಿಂದಲೇ ಪ್ರಪಂಚವು ಇಷ್ಟರಮಟ್ಟಿಗಾದರೂ ಬದುಕಿದೆ - ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅಂಥ ಆರಾಧಕರ ಸಂಖ್ಯೆ ಬೆಳೆದರೆ ಮಾತ್ರ "ಸ್ವಸ್ತಿ ಪ್ರಜಾಭ್ಯಃ" ಎಂಬ ಫಲವು ದೊರಕುವದು. ಇರಲಿ! ಈಗ ಇದ್ದುಕೊಂಡಿರುವ ದೇವತಾರಾಧಕರುಗಳಾದರೂ ದೀರ್ಘಾಯುಷ್ಮಂತರಾಗಿದ್ದು ಚಿರಕಾಲ ಲೋಕಕಲ್ಯಾಣಕ್ಕಾಗಿ ತಮ್ಮ ಯಜ್ಞಗಳನ್ನು ನೆರವೇರಿಸಲಿ. ಸೂರ್ಯನು ಅಂಥ ಆರಾಧಕರಿಗೆ ದೀರ್ಘಾಯುಷ್ಯವನ್ನು ದಯಪಾಲಿಸಲಿ! ಎಂದೂ ಇಲ್ಲಿ ಪ್ರಾರ್ಥಿಸಿದೆ. ಸೂರ್ಯನು ದಯಪಾಲಿಸುವ ಆಯಸ್ಸು "ಅವಿಹ್ರುತವು' ಎಂದರೆ ವಂಚನೆಯಿಲ್ಲದ್ದು - ಎಂದು ತಿಳಿಸಿದೆ. ಕಾಲಾತ್ಮನೇ ಆಯುಸ್ಸನ್ನು ಕೊಟ್ಟಾಗ ಎಂದಾದರೂ ಹುಸಿಯಾದೀತೆ? ಆದ್ದರಿಂದ ಆಯಷ್ಯಪ್ರಾಪ್ತಿಗಾಗಿ ಸೂರ್ಯನನ್ನು ಎಲ್ಲರೂ ಬೇಡಿಕೊಳ್ಳಬೇಕೆಂದು ತಿಳಿಸಿದಂತಾಗಿದೆ.

**ವಿಭ್ರಾಡ್ ಬೃಹತ್ ಸುಭೃತಂ ವಾಜಸಾತಮಂ**
**ಧರ್ಮಂ ದಿವೋ ಧರುಣೇ ಸತ್ಯಮರ್ಪಿತಮ್ ।**
**ಅಮಿತ್ರಹಾ ವೃತ್ರಹಾ ದಸ್ಯುಹಂತಮಂ**
**ಜ್ಯೋತಿರ್ಜಜ್ಞೇ ಅಸುರಹಾ ಸಪತ್ನಹಾ ॥ ೫೬ ॥**

**"ಚೆನ್ನಾಗಿ ಹೊಳೆಯುವ ದೊಡ್ಡದಾದ ಸುಪುಷ್ಟವಾದ ಬಲ-ಅನ್ನಗಳನ್ನು ಕೊಡುವ, ವಾಯುವಿನಿಂದ ಧರಿಸಲ್ಪಡುವದಾದ, ದ್ಯುಲೋಕದ ದಿವ್ಯಮಂಡಲದಲ್ಲಿ ಪ್ರತಿಷ್ಠಿತವಾಗಿರುವ ನಾಶವಿಲ್ಲದ, ಲೋಕಕ್ಕೆ ಕಂಟಕರಾದವರನ್ನು ಕೊಲ್ಲುವ, ಆವರಣಶೀಲವಾದ ತಮಸ್ಸನ್ನೂ (ಹಿಮವನ್ನೂ)ನಾಶಗೊಳಿಸುವ, ವಂಚಕರನ್ನೂ ಪರಿಹರಿಸುವ ಹಾಗೂ ಅಸುರರನ್ನೆಲ್ಲ ಹೊಡೆದೋಡಿಸುವ, ಸಹಜರಾದ ಶತ್ರುಗಳನ್ನೂ ಕೊಲ್ಲುವ ಜ್ಯೋತಿಯು ಉದಯಿಸಿರುವದು" ಎಂದು ಸರಳವಾದ ಅರ್ಥವು.**

ಈ ಮಂತ್ರದಲ್ಲಿ ಸೂರ್ಯನ ಗುಣಸಮೂಹಗಳನ್ನೆಲ್ಲ ಕೂಡಿಸಿ ಸ್ತುತಿಸಲಾಗಿದೆ. ವಿಶೇಷವಾಗಿ ಜಗತ್ತಿಗೇ ಅದು ದೊಡ್ಡಜ್ಯೋತಿಯೆಂದು ಹೊಗಳಿದೆ.

ಇದು ನಿಜ. ಸೂರ್ಯನಂಥ ಮತ್ತೊಂದು ಬೆಳಕು ಎಲ್ಲಿದ್ದೀತು ? ಹಾಗೂ ಸೂರ್ಯನಂತೆ ಏಕಕಾಲಕ್ಕೆ ಎಲ್ಲವನ್ನೂ ಬೆಳಗುವ ಬೇರೊಂದು ಬೆಳಕು ಎಲ್ಲಿದ್ದೀತು ? ಅಷ್ಟೇ ಅಲ್ಲ, ಜನರಿಗೂ ಪ್ರಾಣಿಗಳಿಗೂ ಬಲ-ಅನ್ನಗಳನ್ನು ದಯಪಾಲಿಸುವವನೇ ಆದಿತ್ಯನಾಗಿರುತ್ತಾನೆ. ಆತನು ವಾಯುವಿನ ಸಹಕಾರದಿಂದ ದ್ಯುಲೋಕದ ವಿಶೇಷ ತೇಜೋಮಂಡಲದಲ್ಲಿ ನೆಲೆಸಿರುತ್ತಾನೆ. ಸೂರ್ಯನ ವಾಸಸ್ಥಾನವು ಎಂದೆಂದೂ ತಮೋರಹಿತವೂ ನಾಶವಿಲ್ಲದ್ದೂ ಆಗಿದೆ. ಲೋಕದಲ್ಲಿ ಸೂರ್ಯನಿಲ್ಲದಾಗ ಬೆಳಕನ್ನು ನೀಡುವ ವಿದ್ಯುದಾದಿಗಳು ಆಗಾಗ ಮುಗಿದುಹೋಗಿಬಿಡುವವು. ಶಾಶ್ವತವಲ್ಲ. ಇಂಧನಸಾಮಗ್ರಿಗಳ ಉಪಯೋಗದಿಂದ ದೊರಕುವ ಶಾಖವೂ ಬೆಳಕೂ ಅಂತವುಳ್ಳದ್ದಾಗಿರುವದು. ಆದ್ದರಿಂದಲೇ ಈಗಲೇ ಜನರಿಗೆ ಇಂಧನದ ಕೊರತೆಯು ಕಾಣಿಸಿಕೊಂಡಿದ್ದು ಸೌದೆ, ಎಣ್ಣೆ, ಕಲ್ಲಿದ್ದಲು - ಇತ್ಯಾದಿಗಳು ಪೂರೈಸಿಹೋದಾಗ ಗತಿಯೇನು ? ಎಂಬ ಚಿಂತೆಯಾಗಿದೆ. ಆದರೆ ಸೂರ್ಯನು ಇನ್ನು ಮುಂದೆ ಹುಟ್ಟುವನೊ, ಇಲ್ಲವೋ ? ಎಂದಾಗಲಿ, ಅಥವಾ ಅವನು ತಣ್ಣಗಾಗಿ ಬಿಡುವನೇನೊ ಮುಗಿದು ಇಲ್ಲವಾಗುವನೇನೊ ? ಎಂದಾಗಲಿ ಯಾರಿಗೂ ಎಳ್ಳಷ್ಟೂ ಚಿಂತೆಯಿಲ್ಲ. ವಿಜ್ಞಾನಿಗಳು ಕೂಡ ಈ ವಿಷಯದಲ್ಲಿ ಧೈರ್ಯದಿಂದಿರುತ್ತಾರೆ. ಇಂಥ ಸತ್ಯವೂ ಅವಿನಾಶಿಯೂ ಆದ ತೇಜಸ್ಸೇ ಸೂರ್ಯನಾಗಿರುವನು. ಆತನ ಮಂಡಲವೆಂದರೂ ಆತನೆಂದೇ ತಿಳಿಯಬೇಕು. ಹೀಗೆ ಎಂದೆಂದೂ ನಾಶವಿಲ್ಲದ ಜ್ಯೋತಿಯಾಗಿರುವ ಸೂರ್ಯನು ಲೋಕಕಂಟಕರಾದ ಅಸುರರನ್ನೂ ದಸ್ಯುಗಳನ್ನೂ ಅಮಿತ್ರರನ್ನೂ ಸಪತ್ನರನ್ನೂ ಒಮ್ಮೆಗೇ ಹಿಮ್ಮೆಟ್ಟಿಸುವವನಾಗಿದ್ದಾನೆ. ಏಕೆಂದರೆ ಸೂರ್ಯನ ಹಾಜರಿಯಲ್ಲಿ ಅಪರಾಧಗಳು ಕಡಿಮೆ. ರಾತ್ರಿಯಷ್ಟು ಅಪಾಯವಿರುವದಿಲ್ಲ. ಅಪಘಾತಗಳು, ರೋಗಗಳ ಪ್ರಾಬಲ್ಯ, ಕಳ್ಳಕಾಕರ ಭಯ - ಎಲ್ಲವೂ ಬಹಳ ಮಟ್ಟಿಗೆ ಸೂರ್ಯನ ಬೆಳಕಿದ್ದಾಗ ಹಿಮ್ಮೆಟ್ಟಿರುವವು. ಇನ್ನೂ ವಿಚಾರ ಮಾಡಿದರೆ ತಮಸ್ಸೆಂದರೆ - ಆಧ್ಯಾತ್ಮಿಕಾರ್ಥದಲ್ಲಿ ತೆಗೆದುಕೊಂಡರೆ - ಕಾಮಕ್ರೋಧಾದಿಗಳ ರೂಪದಿಂದ ಅದು ಮಾನವನನ್ನು ಆವರಿಸಿ ಸ್ವರೂಪಜ್ಞಾನವಿಲ್ಲದಂತೆ ಮಾಡಿರುವದು. ಈ ಆವರಣನಾಶವನ್ನು - ಹೊರಗಿನ ಕತ್ತಲೆಯನ್ನು ಆದಿತ್ಯನು ಕಳೆಯುವಂತೆಯೇ ಒಳಗಿನ ಅಜ್ಞಾನವನ್ನೂ ಸೂರ್ಯನೇ ಜ್ಞಾನರೂಪದಿಂದ ಬೆಳಗಿ ಕಳೆಯಬೇಕಾಗಿರುತ್ತದೆ. ಆದ್ದರಿಂದ ಆಧ್ಯಾತ್ಮ ಸೂರ್ಯೋದಯವೂ ಸಾಧಕರ ಪ್ರಪಂಚಕ್ಕೆ ಬೇಕಾಗಿದೆ. ಇದನ್ನರಿತ ವಿಶ್ವಾಮಿತ್ರರು ಗಾಯತ್ರೀಮಂತ್ರದಲ್ಲಿ ಸೂರ್ಯನನ್ನೇ ಕುರಿತು 'ಧಿಯೋ ಯೋ ನಃ ಪ್ರಚೋದಯಾತ್' ಎಂದು

ಕೇಳಿಕೊಂಡಿದ್ದಾರೆ. ಇಲ್ಲಿ 'ಸಪತ್ನಹಾ' ಎಂಬ ಮಾತಿನಿಂದ ಈ ವಿಚಾರವನ್ನು ಸೂಚಿಸಿದೆ; ಹೇಗೆಂದರೆ ಸಹ-ಎಂದರೆ ನಮ್ಮೊಡನೆಯೇ ಹುಟ್ಟಿರುವ ಅಜ್ಞಾನವು ಸಪತ್ನವೆನಿಸುವುದು. ಅದು ನಾಶವಾಗಬೇಕು. ವಿವೇಕೋದಯವೊಂದೇ ಇದಕ್ಕೆ ಉಪಾಯವು. ಸಪತ್ನಹರನಾದ ದೇವತೆಯೇ ಸೂರ್ಯನು. ಏಕೆಂದರೆ ಆತನಲ್ಲಿ ಕತ್ತಲೆಯಿರುವದಿಲ್ಲ. ಹೀಗೆ ನಿತ್ಯಪ್ರಕಾಶನೂ ನಿತ್ಯಜ್ಞಾನಸ್ವರೂಪನೂ ಆದ ಸೂರ್ಯಭಗವಂತನನ್ನೇ ಇಲ್ಲಿ ಸ್ತುತಿಸಿರುತ್ತದೆ.

**ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿರುತ್ತಮಂ**
**ವಿಶ್ವಜಿತ್ ಧನಜಿದುಚ್ಯತೇ ಬೃಹತ್ ।**
**ವಿಶ್ವಭ್ರಾಡ್ ಭ್ರಾಜೋ ಮಹಿ ಸೂರ್ಯೋ ದೃಶ**
**ಉರು ಪಪ್ರಥೇ ಸಹ ಓಜೋ ಅಚ್ಯುತಮ್ ॥ ೫೭ ॥**

**"ಈ ಸೂರ್ಯತೇಜಸ್ಸು ಶ್ರೇಷ್ಠವೂ ಬೆಳಕುಗಳಲ್ಲಿ ಬೆಳಕೂ ಉತ್ತಮವೂ ಎಲ್ಲವನ್ನೂ ಗೆದ್ದಿರುವದೂ ಧನವನ್ನು ಜಯಿಸಿರುವದೂ ದೊಡ್ಡದೂ ಆಗಿರುವದು. ಹೀಗೆ ಜಗತ್ತನ್ನು ಬೆಳಗುತ್ತಿರುವ ಮಹಾಸೂರ್ಯನು ವಿಶಾಲವಾದ ತಮಸ್ಸನ್ನು ಹಿಮ್ಮೆಟ್ಟಿಸಿ ನಾಶವಿಲ್ಲದ್ದಾದ ತೇಜೋರೂಪವಾದ ತನ್ನ ಬಲವನ್ನು ಹರಡಿರುವನು" ಎಂದು ಮಂತ್ರಾರ್ಥ.**

ಇಲ್ಲಿಯೂ ಸೂರ್ಯನ ಬೆಳಕನ್ನೇ ವಿಶೇಷವಾಗಿ ಸ್ತುತಿಸಲಾಗಿದೆ. ಚಂದ್ರ, ಅಗ್ನಿ, ವಿದ್ಯುತ್ ಮುಂತಾದ ಬೆಳಕುಗಳಿಗೆಲ್ಲ ಸೂರ್ಯನೇ ಮೂಲನಾಗಿರುತ್ತಾನೆ. ಸೂರ್ಯನ ಬೆಳಕು ಉಳಿದ ಎಲ್ಲಾ ಬೆಳಕುಗಳಿಗಿಂತಲೂ ಅತ್ಯುತ್ತಮವೆಂದು ಹೇಳಬೇಕಾದದ್ದೇ ಇಲ್ಲ. ಏಕೆಂದರೆ ಜಗತ್ತಿನ ಬೆಳವಣಿಗೆಯೇ ಸೂರ್ಯನ ಶಾಖದ ಫಲವಾಗಿರುತ್ತದೆ. ಸೂರ್ಯನ ಕಿರಣಗಳ ಪ್ರಸಾರವು ತೀರ ಕಡಿಮೆಯಿರುವ ಪ್ರದೇಶಗಳಲ್ಲಿ ಸಸ್ಯಗಳಾಗಲಿ, ಪ್ರಾಣಿಗಳಾಗಲಿ ಹೆಚ್ಚಾಗಿರುವದಿಲ್ಲ. ಆದ್ದರಿಂದ ಸೃಷ್ಟಿಯಲ್ಲಿ ಆದಿತ್ಯನ ಬೆಳಕೇ ಉಳಿದೆಲ್ಲ ಬೆಳಕುಗಳನ್ನೂ ಮೀರಿಸಿರುತ್ತದೆ. 'ರಂಗನ ಮುಂದೆ ಸಿಂಗನೆ' ಎಂಬ ಗಾದೆಯಂತೆ ಸೂರ್ಯನ ಪ್ರಕಾಶದ ಮುಂದೆ ಹಾಯುವ ಬೆಳಕಾದರೂ ಎಲ್ಲಿದೆ ? ಇನ್ನು ಧನಜಿತ್ - ಎಂದೂ ಈ ಬೆಳಕನ್ನು ಹೊಗಳಿದೆ. ಧನವೆಂದರೆ ಲೌಕಿಕವಾದ ವಸ್ತ್ರಾಭರಣ, ಗೋಭೂಹಿರಣ್ಯಾದಿಗಳೆಲ್ಲವನ್ನೂ ಗ್ರಹಿಸಬಹುದು. ಇವೆಲ್ಲವೂ ಸೂರ್ಯನ ದಯೆಯಿಂದಲೇ ನಮಗೆ ಸಿಗಬೇಕಾಗಿದೆ. ಏಕೆಂದರೆ ಸೂರ್ಯನು ನಮ್ಮ ಬುದ್ಧಿಯನ್ನು ಹೊಕ್ಕು ಪ್ರೇರಿಸದೆ ಇದ್ದರೆ ಖನಿಜಗಳನ್ನಾಗಲಿ, ವೈರುಗಳನ್ನಾಗಲಿ ನಾವು ಭೂಮಿಯಿಂದ ಪಡೆಯಲಾಗುತ್ತಿರಲಿಲ್ಲ. ಉದಾಹರಣೆಗೆ - ನಮ್ಮಂತೆಯೇ ಅನೇಕ ಪ್ರಾಣಿಗಳೂ ಭೂಮಿಯಲ್ಲಿ ನಮ್ಮೊಡನೆಯೇ ಬಾಳುತ್ತಿದ್ದರೂ ಬುದ್ಧಿಯಿಲ್ಲದವಾದ್ದರಿಂದ ಅವು

ಧನವಂತವಾಗಿಲ್ಲ. ನಮಗೆ ಸೂರ್ಯನ ಅನುಗ್ರಹವು ಧನವಂತರಾಗಲು ಕಾರಣವಾಗಿದೆ. ಹೀಗೆ ಧನಜಿತ್ ಆಗಿರುವ ಸೂರ್ಯಜ್ಯೋತಿಯು ಶ್ರೇಷ್ಠವೂ, ಜ್ಯೋತಿಗಳಲ್ಲೆಲ್ಲ ಹೆಚ್ಚಿನ ಜ್ಯೋತಿಯೂ ಆಗಿರುತ್ತದೆ. ಇನ್ನು ಸೂರ್ಯನಂತೆ ಬೆಳಗುವಂಥ ವಸ್ತುಗಳಾದ ವಜ್ರ, ವೈಡೂರ್ಯಾದಿಗಳು ಇರಬಹುದು. ಆದರೇನು ? ಅವುಗಳ ಬೆಳಕು ಪರೋಪಕಾರಕವಲ್ಲ. ಬೆಳಕುಗಳಲ್ಲಿ ವಿಶ್ವಜಿತ್ ಎಂದರೆ ಸೂರ್ಯನ ಬೆಳಕೇ ಎಂಬುದು ಪರಮಸತ್ಯವಾಗಿದೆ. ಇಂಥ ಸೂರ್ಯನ ದಯೆಯಿಂದ ನಾವು ಯಾವಾಗಲೂ ತೇಜಸ್ವಿಗಳೂ ಓಜಸ್ವಿಗಳೂ ಭ್ರಾಜಸ್ವಿಗಳೂ ವರ್ಚಸ್ವಿಗಳೂ ಆಗಿ ಬಾಳುವಂತಾಗಲಿ - ಎಂದು ಪ್ರಾರ್ಥಿಸಿದೆ.

**ವಿಭ್ರಾಜಂ ಜ್ಯೋತಿಷಾ ಸ್ವ ಅರಗಚ್ಛೋ ರೋಚನಂ ದಿವಃ ।**
**ಯೇನೇಮಾ ವಿಶ್ವಾ ಭುವನಾನ್ಯಾಭೃತಾ ವಿಶ್ವಕರ್ಮಣಾ**
**ವಿಶ್ವದೇವ್ಯಾವತಾ ॥ ೫೮ ॥**

**"ಎಲೈ ಸೂರ್ಯನೆ, ಯಾವ ನಿನ್ನ ತೇಜಸ್ಸಿನಿಂದ ಈ ಎದುರಿಗೆ ಕಾಣುತ್ತಿರುವ ಪ್ರಪಂಚದಲ್ಲಿರುವ ಉದಕಸ್ಥಾನಗಳು ಮಳೆಗಾಲದಲ್ಲಿ ತುಂಬಲ್ಪಡುವವೋ ಅದರಿಂದ ಜಗತ್ತು ಪೋಷಿಸಲ್ಪಡುವದೋ ಅಂಥ ಎಲ್ಲಾ ಕರ್ಮಗಳಿಂದಲೂ ಎಲ್ಲಾ ದೇವತೆಗಳಿಗೂ ಹಿತವುಂಟುಮಾಡುವದರಿಂದಲೂ ಬೆಳಗುವವನಾಗಿ ನೀನು ಬರುವವನಾಗು" ಎಂದು ಅಭಿಪ್ರಾಯ.**

ಈ ಮಂತ್ರದಲ್ಲಿ ಜಲಸಮೃದ್ಧಿಯನ್ನುಂಟುಮಾಡುವ ಕಿರಣಗಳ ಪ್ರಕಾಶದಿಂದ ಸೂರ್ಯನು ಕಾಣಿಸಿಕೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ. ನೀರು ಪ್ರಾಣಿಗಳಿಗೆ ಜೀವನವೆನಿಸಿರುತ್ತದೆ. ಅದು ಮೋಡಗಳಿಂದ ಸುರಿಯಬೇಕು. ಮೋಡಗಳು ಸಂಗ್ರಹವಾಗಲು ಸೂರ್ಯನು ತನ್ನ ಕಿರಣಗಳಿಂದ ಸಮುದ್ರದ ನೀರನ್ನೆತ್ತಿ ಅಂತರಿಕ್ಷದಲ್ಲಿ ತುಂಬಬೇಕು. ಅನಂತರ ವಾಯುವಿನ ಚಲನೆಯಿಂದ ಮೋಡಗಳು ಸಂಚರಿಸಿ, ಅಗತ್ಯವಾದಲ್ಲೆಲ್ಲ ಮಳೆಯನ್ನು ಸುರಿಸಬೇಕು. ಈ ಕಾರ್ಯವು ದೈವಿಕವೇ ಆದರೂ ಮನುಷ್ಯನ ಪ್ರಯತ್ನವೂ ಸೇರಿದಲ್ಲಿ ಹೆಚ್ಚು ಉಪಯೋಗಕರವಾಗಿ ಆಗುವದು. ಮೋಡಗಳು ಎಲ್ಲಿಯಾದರೂ ಮಳೆಯನ್ನು ಸುರಿಸಿಯೇ ತೀರುವವು - ಎಂಬುದು ನಿಜ. ಆದರೆ ಅವು ಪರ್ವತಗಳಲ್ಲಿಯೋ ಸಮುದ್ರದಲ್ಲಿಯೋ ಸುರಿಸಿಬಿಟ್ಟರೆ ನಮಗೆ ಅನುಕೂಲವಾಗುವದಿಲ್ಲ. ಆದ್ದರಿಂದ ಅವುಗಳನ್ನು ನಿಯಮನ ಮಾಡುವ ದೇವತೆಗಳನ್ನು ಸಕಾಲದಲ್ಲಿ ನಾವು ಕೇಳಿಕೊಂಡರೆ ನಮಗೆ ಬೇಕಾದ ಕಡೆಯಲ್ಲಿಯೇ ಅಗತ್ಯವಿದ್ದಷ್ಟೇ ಮಳೆಯು ಬಂದು ಸುವೃಷ್ಟಿಯೆನಿಸುವದು. ಸುವೃಷ್ಟಿಯು ಸುಭಿಕ್ಷಕ್ಕೆ ಮೂಲವಾಗಿದೆ. ಸುಭಿಕ್ಷವಾದರೆ ಜನರು

ದೇವತಾರಾಧನೆಗಳನ್ನು ನಡೆಯಿಸಿ, ಪಾಪಪರಿಹಾರಮಾಡಿಕೊಂಡು ಸುಖಿಗಳಾಗಿ ಬಾಳಬಹುದು. ಹೀಗೆ ಸೂರ್ಯನ ಕಿರಣಗಳು ಪರಂಪರೆಯಿಂದ ಜನರ ಕಲ್ಯಾಣಕ್ಕೂ ದೇವತೆಗಳ ಆಳ್ವಿಕೆಗೂ ಕಾರಣವಾಗಿರುವವು. ಮತ್ತು ಮಳೆಯು ಕೇವಲ ಪೈರಿನ ಮಟ್ಟಿಗೆ ಬಿದ್ದರೂ ಸಾಲದು. ಇಡೀ ವರ್ಷವೆಲ್ಲ ಪ್ರತಿದಿನವೂ ಪ್ರಾಣಿಗಳೂ, ಮನುಷ್ಯರೂ ಬಳಸಬೇಕಾಗಿರುವ ನೀರು, ಕೆರೆ, ಭಾವಿ, ನದಿಗಳು, ಅಣೆಕಟ್ಟುಗಳ ಮೂಲಕ ಒದಗುತ್ತಿರಬೇಕು. ಹೀಗೆ ಕೆರೆಕಟ್ಟೆಗಳೆಲ್ಲ ತುಂಬಬೇಕಾದರೆ ಆಯಾ ಅಚ್ಚುಕಟ್ಟಿನ ಪ್ರದೇಶಗಳಲ್ಲಿಯೇ ಮಳೆಯಾಗಬೇಕು. ಇದನ್ನೆಲ್ಲ ಮಾನವನಿಂದ ನಿರ್ವಹಿಸಲು ಆದೀತೆ? ಇಲ್ಲವೆಂದಾದರೆ ಮಾನವನು ತನಗಿಂತಲೂ ಮಿಗಿಲಾದ ಶಕ್ತಿಸಂಪನ್ನರಾದ ದೇವತೆಗಳನ್ನು ತನ್ನ ಹಿತಕ್ಕಾಗಿಯೇ ಆರಾಧಿಸಬೇಡವೆ? ಇಂಥ ಆರಾಧನೆಗಳನ್ನೇ ಯಜ್ಞಗಳೆಂದು ಕರೆಯುತ್ತಾರೆ. ಒಬ್ಬ ಋಷಿಯು ಈ ಮಂತ್ರದಲ್ಲಿ ಯಜ್ಞದಿಂದ ಸೂರ್ಯನನ್ನು ಸಂತೋಷಗೊಳಿಸಿದಮೇಲೆ ಹೀಗೆ ಪ್ರಾರ್ಥಿಸುತ್ತಿದ್ದಾನೆ. 'ಹೇ ಸೂರ್ಯದೇವನೆ. ನಿನ್ನ ಕಿರಣಗಳ ಅನುಗ್ರಹವು ವಿಶ್ವಕ್ಕೂ ಸುಖಕರ-ವಾಗುವಂತೆಯೂ ಎಲ್ಲಾ ಜನರ ಕೆಲಸಕಾರ್ಯಗಳಿಗೂ ಉಪಯೋಗ-ವಾಗುವಂತೆಯೂ ಆಗಲಿ. ಹಾಗೆ ನೀನು ತೇಜಸ್ಸನ್ನು ದಯಪಾಲಿಸುವವನಾಗು. ಇದರಿಂದ ದೇವತೆಗಳಾದಿಯಾಗಿ ನಾವೆಲ್ಲರೂ ಸುಖದಿಂದಿರುವೆವು ; ಮತ್ತೆ ಮತ್ತೆ ನಿನ್ನನ್ನು ಆರಾಧಿಸುವೆವು' ಎಂದಿರುತ್ತಾನೆ. ಮೋಡಗಳು ಕಟ್ಟುವಂತೆ ಮಾಡುವದಂತೂ ನಮ್ಮ ಅಧೀನದಲ್ಲಿರುವದಿಲ್ಲ. ಹಾಗಾದರೆ ದೇವತೆಗಳನ್ನು ಪ್ರಾರ್ಥಿಸಿದ ಮೇಲೂ ಮಳೆ ಬಾರದಿದ್ದರೇನು ಮಾಡಬೇಕು? ಎಂಬ ಆಕ್ಷೇಪವೂ ಇದೆ. ಇದು ದೇವತೆಗಳಲ್ಲಿ ನಂಬುಗೆಯಿಲ್ಲದವರ ಬಾಯಿಂದ ಬರುವ ಮಾತೇ ಹೊರತು ಋಷಿಗಳ ಬಾಯಿಂದ ಬರುವಂಥದಲ್ಲ. ದೇವತೆಗಳು ಮಾನವರಿಗಿಂತ ಹೆಚ್ಚಿನವರೇ ಹೊರತು ಅಲ್ಪರಲ್ಲ. ಅವರು ಫಲವನ್ನು ನೀಡಬೇಕಾದರೂ ಮನುಷ್ಯರ ಕರ್ಮಾನುಗುಣವಾಗಿಯೇ ಕೊಡುತ್ತಾರೆ. ಮನುಷ್ಯರು ಸತ್ಕರ್ಮಗಳನ್ನೇ ಮಾಡಿರದಿದ್ದರೆ ದೇವತೆಗಳು ಕೊಡುವದಾದರೂ ಹೇಗೆ? ಮತ್ತು ನಾವು ಮೂರುಕಾಸಿನ ಪ್ರಾರ್ಥನೆಯನ್ನು ಸಲ್ಲಿಸಿ - ಅದು ಕೂಡ ದೇವತೆಗಳ ಪರೀಕ್ಷೆಗಾಗಿ ಎಂಬ ಭಾವನೆಯಿಂದ ಆಚರಿಸಿ - ನೂರುರೂಪಾಯಿಗಳ ಪ್ರಯೋಜನವನ್ನು ಬಯಸಿದರೆ ನ್ಯಾಯವೇನಿದೆ? ದೇವತೆಗಳೇನೂ ಮಾನವರಿಗೆ ಶತ್ರುಗಳಲ್ಲ. ಅವರಿರುವದೇ ನಮ್ಮ ಉದ್ಧಾರಕ್ಕಾಗಿ ಎಂದು ತಿಳಿಯಬೇಕು. ಅಂಥ ದೇವತೆಗಳಲ್ಲಿಯೂ ಮಾನವರಿಗೆ ನಂಬುಗೆ ಬರದೆಹೋದರೆ, ಅವರನ್ನೆಲ್ಲ

ತಿರಸ್ಕರಿಸಿಯೇ ಬಿಟ್ಟರೆ ತಪ್ಪು ಯಾರದು? ಆದ್ದರಿಂದ ನಾವು ಎಂದಿಗೂ ದೇವತೆಗಳೊಡನೆ ವಾದಮಾಡಬಾರದು. ಅವರೊಡನೆ ಸ್ಪರ್ಧಿಸಬಾರದು. ಅವರನ್ನು ಅಪಮಾನಗೊಳಿಸಬಾರದು. ಅವರುಗಳು ಇಲ್ಲವೆಂದೇ ಭಾವಿಸಬಾರದು. ಈ ತಿಳಿವಳಿಕೆಯು ಈಗ ಅಗತ್ಯವಾಗಿದೆ.

**ಆಯಂ ಗೌಃ ಪೃಶ್ನಿರಕ್ರಮೀದಸದನ್ಮಾತರಂ ಪುರಃ ।**
**ಪಿತರಂ ಚ ಪ್ರಯನ್ ಸ್ವಃ ॥ ೫೯ ॥**

**'ಗಮನಶೀಲನಾದ ತೇಜಸ್ವಿಯಾದ ಸೂರ್ಯನು (ಉದಯಾಚಲವನ್ನು) ಹೊಂದಿರುತ್ತಾನೆ. ಪೂರ್ವದಿಕ್ಕನ್ನೂ ಭೂತಗಳಿಗೆಲ್ಲ ತಾಯಿಯಾದ ಭೂಮಿಯನ್ನೂ ಮುಟ್ಟಿರುತ್ತಾನೆ ಹಾಗೂ ದ್ಯುಲೋಕ ಅಂತರಿಕ್ಷಗಳನ್ನು ಶೀಘ್ರವಾಗಿ ದಾಟುತ್ತಾ ಶೋಭಿಸುತ್ತಿರುವನು' ಎಂದರ್ಥ.**

ಇಲ್ಲಿಂದ ಮೂರುಮಂತ್ರಗಳು ಗಾಯತ್ರೀಛಂದಸ್ಸಿನಲ್ಲಿವೆ. ಸರ್ವರಾಜ್ಞೀ ಎಂಬ ಮಹಿಳಾಋಷಿಯು ಮಂತ್ರದ್ರಷ್ಟ್ರಿಯೂ ದೇವತೆಯೂ ಆಗಿರುವಳು. ಇನ್ನೊಂದು ಪಕ್ಷದಲ್ಲಿ ಸೂರ್ಯನು ದೇವತೆಯು ಎಂದು ಭಾಷ್ಯದಲ್ಲಿ ತಿಳಿಸಿದೆ. ಸೂರ್ಯದೇವತಾಪರವೆಂಬ ಪಕ್ಷದಲ್ಲಿ ಇವುಗಳನ್ನು ಸೌರಸೂಕ್ತದಲ್ಲಿ ಅಳವಡಿಸಲಾಗಿದೆ. ಹಿಂದಿನ ಮಂತ್ರಗಳಲ್ಲಿ ಸ್ತುತಿಸಿರುವಂತೆಯೇ ಇಲ್ಲಿಯೂ ಸೂರ್ಯೋದಯವನ್ನು ವರ್ಣಿಸಿ ಆ ಭಗವಂತನು ಅಂತರಿಕ್ಷದ್ಯುಲೋಕಗಳನ್ನೆಲ್ಲ ಪರಿಕ್ರಮಿಸುತ್ತಾ ಸಂಚರಿಸುತ್ತಿರುವನೆಂದು ಹೊಗಳಿದೆ.

**ಅಂತಶ್ಚರತಿ ರೋಚನಾಸ್ಯ ಪ್ರಾಣಾದಪಾನತೀ ।**
**ವ್ಯಖ್ಯನ್ಮಹಿಷೋ ದಿವಮ್ ॥ ೬೦ ॥**

**'ಅಧ್ಯಾತ್ಮವಾಗಿ ಶರೀರದೊಳಗೆ ಮುಖ್ಯಪ್ರಾಣನಾಗಿ ಈತನು ಇದ್ದುಕೊಂಡಿರುವನು. ಪ್ರಾಣಾಪಾನಗಳನ್ನು ವ್ಯಾಪಾರಮಾಡಿಸುತ್ತಿರುವನು. ಈ ಸೂರ್ಯನು ಅಂತರಿಕ್ಷವನ್ನು ತನ್ನ ಉದಯಾಸ್ತಮಯಗಳ ನಡುವಣಕಾಲದಲ್ಲಿ ಪ್ರಕಾಶಗೊಳಿಸುತ್ತಿರುವನು.**

ಈ ಮಂತ್ರದಲ್ಲಿಯೂ ಸೂರ್ಯಭಗವಂತನು ಅಧ್ಯಾತ್ಮವಾಗಿಯೂ ಪ್ರಾಣಗಳನ್ನು ಪ್ರಾಣಾಪಾನಾದಿವೃತ್ತಿಗಳಿಂದ ಅನುಗ್ರಹಿಸುತ್ತಾ ಕಾಪಾಡುತ್ತಿರುವನೆಂದು ತಿಳಿಸಿದೆ. ಅಧಿದೈವತವಾಗಿ ಅಂತರಿಕ್ಷದಲ್ಲಿ ಸಹಸ್ರಕಿರಣಗಳಿಂದ ವಿರಾಜಮಾನನಾಗಿ ಕತ್ತಲೆಯನ್ನು ಹೋಗಲಾಡಿಸುತ್ತಿರುವನು. ವಿರಾಡಾತ್ಮನನ್ನೇ ಸೂರ್ಯರೂಪದಿಂದ ಇಲ್ಲಿ ಸ್ತುತಿಸಿದೆ. ಏಕೆಂದರೆ ವಾಯುವಿನ ಕೆಲಸವನ್ನೂ ಸೂರ್ಯನೇ ಮಾಡುತ್ತಿದಾನೆ - ಎಂಬ ಸ್ತುತಿಯು ಕೇವಲ ತೇಜೋಮಯನಾದ ಆದಿತ್ಯನಿಗೆ ಹೊಂದಲಾರದು. ವಿರಾಟ್ಪುರುಷನಾದರೆ ಸರ್ವದೇವಾತ್ಮನಾದುದರಿಂದ ಎಲ್ಲಾ ಜಗದ್ವ್ಯಾಪಾರವೂ

ಆತನಿಗೆ ಹೊಂದುತ್ತದೆ. ಈ ರೀತಿಯಾಗಿ ಸೂರ್ಯನು ಪ್ರಾಣಿಗಳ ಅಂತರಾತ್ಮನಾಗಿಯೂ ಹೊರಗಡೆ ಪ್ರಕಾಶರೂಪನಾಗಿಯೂ ಕಂಡುಬರುತ್ತಿರುವನು ಎಂದಭಿಪ್ರಾಯ.

**ತ್ರಿಂಶದ್ಧಾಮ ವಿರಾಜತಿ ವಾಕ್ಪಂತಗಾಯ ಧೀಯತೇ ।**
**ಪ್ರತಿವಸ್ತೋರಹದ್ಯುಭಿಃ ॥ ೬೧ ॥**

**ಅಹೋರಾತ್ರರೂಪವಾದ ದಿನವೆಂಬುದರ ಮೂವತ್ತು (ಅವಯವ) ಗಳಲ್ಲಿಯೂ ಸೂರ್ಯನ ಬೆಳಕೇ ಬೆಳಗುತ್ತಿದೆ. ಅಂಥ ಸೂರ್ಯನಿಗೆ ವೇದವಾಕ್ಕು ಸ್ತೋತ್ರವನ್ನು ಅರ್ಪಿಸುತ್ತಿದೆ' ಎಂದಭಿಪ್ರಾಯ. ಮೂವತ್ತು ಮುಹೂರ್ತಗಳಿಗೆ ಅರವತ್ತು ಘಳಿಗೆಗಳಾಗುತ್ತವೆ. ಒಂದು ದಿನದಲ್ಲಿ ಅರವತ್ತು ಘಳಿಗೆಗಳಿರುತ್ತವೆ. ನಮಗೆ ರಾತ್ರಿಯಲ್ಲಿ ಸೂರ್ಯನು ಕಾಣದೆ ಇರುವಾಗಲೂ ಪಶ್ಚಿಮದೇಶದಲ್ಲಿರುವವರಿಗೆ ಕಾಣುತ್ತಾನಾದ್ದರಿಂದ ಸೂರ್ಯನು ಇಡಿಯ ದಿನವನ್ನೇ ವ್ಯಾಪಿಸಿದಂತಾಗಿದೆ. ಇಂಥ ಭಗವಂತನಿಗೆ ವಂದನೆಗಳು - ಎಂದಭಿಪ್ರಾಯ.**

**ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ ।**
**ತತೋರಾತ್ರ್ಯಜಾಯತ ತತಃ ಸಮುದ್ರೋ ಅರ್ಣವಃ ॥ ೬೨ ॥**

**"(ಬ್ರಹ್ಮನಿಂದ ತಪಸ್ಸು ಮಾಡಲ್ಪಟ್ಟು) ಋತವೂ ಸತ್ಯವೂ ಅನಂತರ ಹುಟ್ಟಿದವು. ಆಮೇಲೆ ರಾತ್ರಿಯೂ ಸಮುದ್ರವೂ ಅಂತರಿಕ್ಷವೂ ಉಂಟಾದವು" ಎಂದು ಅಭಿಪ್ರಾಯ.**

ಈ ಮಂತ್ರವು ಬ್ರಹ್ಮನಿಂದ ಸೃಷ್ಟಿಯ ಆರಂಭದಲ್ಲಿ ಜಗತ್ತು ಹೇಗೆ ಉಂಟಾಯಿತೆಂಬುದನ್ನು ವಿವರಿಸುತ್ತಿದೆ. ಮುಂದಿನ ಮಂತ್ರಗಳಲ್ಲಿ ಸೂರ್ಯಚಂದ್ರರೂ ಹುಟ್ಟಿದರು - ಎಂದಿರುವದರಿಂದ ಇದನ್ನು ಈ ಸೂಕ್ತದಲ್ಲಿ ಸೇರಿಸಲಾಗಿದೆ. ಸೂರ್ಯನು ಒಂದು ದೇವತೆಯಾಗಿದ್ದು, ಆತನೂ ಸಂಸಾರ ಮಂಡಲದಲ್ಲಿಯೇ ಅಡಕನಾಗಿರುವನು. ಆದ್ದರಿಂದ ಜನ್ಮವೂ ತಿರೋಧಾನವೂ ಸೂರ್ಯನಿಗೂ ಉಂಟು. ಆದರೆ ಒಂದು ಸೃಷ್ಟಿಯ ಆರಂಭದಲ್ಲಿ ಸೂರ್ಯನು ಒಮ್ಮೆ ಹುಟ್ಟಿದನಾದರೆ ಆ ಕಲ್ಪವು ಪೂರೈಸುವವರೆಗೂ ಇದ್ದುಕೊಂಡಿರುವನು. ಹಿಂದಿನ ಕಲ್ಪದಲ್ಲಿ ಯಾವ ಪುಣ್ಯಜೀವಿಯು ಎಲ್ಲಾ ಪಾಪಗಳನ್ನೂ ಸುಟ್ಟುಬೂದಿ ಮಾಡಿಕೊಂಡು ಕೇವಲ ಪುಣ್ಯವನ್ನು ಮಾತ್ರವೇ ಉಳಿಸಿಕೊಂಡು ಭಗವದರ್ಚನಾದಿಗಳಿಂದಲೇ ತನ್ನ ಅನೇಕಜನ್ಮಗಳನ್ನೆಲ್ಲ ಸವೆಯಿಸಿಕೊಂಡು ಹೊಸ ಸೃಷ್ಟಿಯ ಕಾಲಕ್ಕೆ ಹಿರಣ್ಯಗರ್ಭಬ್ರಹ್ಮನಿಗೆ ಅವನ ಚಿತ್ತದಲ್ಲಿ ನೆನಪಾಗುವನೋ ಅಂಥವನನ್ನೇ ಬ್ರಹ್ಮನು ತನ್ನ ಮಾನಸಸೃಷ್ಟಿಯಿಂದ ಹೊರಗೆಡವಿ ಸೂರ್ಯ ಪದವಿಯನ್ನು ದಯಪಾಲಿಸುವನು. ಇಂಥ ಪದವೀಧರನೇ ಇಡಿಯ ಕಲ್ಪಕಾಲವೆಲ್ಲ ಪೂರ್ಣವಾಗಿ ಆದಿತ್ಯನಾಗಿ ವಿರಾಜಿಸುವನು. ಈತನಿಗೆ ಉದಯಾಸ್ತಗಳಿಲ್ಲ. ನಮ್ಮಗಳ ದೃಷ್ಟಿಯಿಂದ ಉದಯಾಸ್ತಗಳೂ ಅಹೋರಾತ್ರಗಳೂ ಇವನಲ್ಲಿ ಕಲ್ಪಿತವಾಗಿರುವವು.

ಇವನು ಅತ್ಯಂತ ಪರಿಶುದ್ಧನು. ಚಂದ್ರನಂತೆ ಕಳಂಕವುಳ್ಳವನಲ್ಲ. ಜಗತ್ತನ್ನೆಲ್ಲ ತನ್ನ ಕಿರಣಗಳಿಂದ ಬೆಳಗುತ್ತಾ ಪೋಷಿಸುವನು. ಇಂಥ ಸೂರ್ಯನು ಉಂಟಾಗುವ ಮುಂಚೆ ಚತುರ್ಮುಖನು ಆಲೋಚನಾರೂಪವಾದ ಮಹಾತಪಸ್ಸನ್ನು ಕೈಗೊಂಡನು. ಅದರ ಫಲವಾಗಿ ಋತವೂ ಸತ್ಯವೂ ಉಂಟಾದವು. ಋತವೆಂದರೆ ಮಾನಸಿಕಸತ್ಯವು. ಸತ್ಯವೆಂದರೆ ವಾಚಿಕವಾದ ಯಥಾರ್ಥಭಾಷಣವು. ಇನ್ನೂ ಉಳಿದ ಧರ್ಮಜಾತವೆಲ್ಲವನ್ನೂ ಬ್ರಹ್ಮನು ಮೊದಲು ಸೃಷ್ಟಿ ಮಾಡಿದನು. ಅನಂತರ ಅವನೇ ಸೃಷ್ಟಿಕರ್ತನೇ ಹಗಲುರಾತ್ರಿಗಳನ್ನೂ ಅರ್ಣವ - ಎಂದರೆ ಸಾಗರಗಳನ್ನೂ ಉಂಟುಮಾಡಿದನು. ಹಾಗೆಯೇ ಮುಂದುವರೆದು ಸಮುದ್ರವೆಂದರೆ ಅಂತರಿಕ್ಷವನ್ನು ಸೃಷ್ಟಿಸಿದನು. ಅಂತರಿಕ್ಷದಲ್ಲಿಯೂ ಮೋಡರೂಪದಲ್ಲಿ ನೀರಿರುವುದರಿಂದ ಇಲ್ಲಿ ಸಮುದ್ರಶಬ್ದದಿಂದ ಆಕಾಶವನ್ನು ಗ್ರಹಿಸಬೇಕು. ಹೀಗೆ ಚತುರ್ಮುಖನು ಸೃಷ್ಟಿಯನ್ನು ಕೈಗೊಂಡನು - ಎಂದಭಿಪ್ರಾಯ.

**ಸಮುದ್ರಾದರ್ಣವಾದಧಿ ಸಂವತ್ಸರೋ ಅಜಾಯತ ।**
**ಅಹೋರಾತ್ರಾಣಿ ವಿದಧದ್ ವಿಶ್ವಸ್ಯ ಮಿಷತೋ ವಶೀ ॥ ೬೩ ॥**

**'ಅರ್ಣವ, ಅಂತರಿಕ್ಷಗಳ ಸೃಷ್ಟಿಯ ಅನಂತರ ಸಂವತ್ಸರವೇ ಮುಂತಾದ ಕಾಲವೆಲ್ಲವೂ ಉಂಟಾಯಿತು. ಹಾಗೆಯೇ ಹಗಲು-ರಾತ್ರಿಗಳಲ್ಲಿ ಜೀವಿಸುತ್ತಿರುವ ಎಲ್ಲಾ ಪ್ರಾಣಿಗಳೂ ಹುಟ್ಟಲಾಗಿ ಆ ಸೃಷ್ಟಿಕರ್ತನು ಅವೆಲ್ಲಕ್ಕೂ ಒಡೆಯನಾಗಿ ಆದನು' ಎಂದಭಿಪ್ರಾಯ.**

ಈ ಮಂತ್ರದಲ್ಲಿಯೂ ಸೃಷ್ಟಿವಿಚಾರವನ್ನು ಪ್ರಸ್ತಾಪಮಾಡಿದೆ. ಅಂತರಿಕ್ಷವು ದೇಶವೆನಿಸುವದು. ಸಂವತ್ಸರಾದಿಗಳು ಕಾಲವೆನಿಸುವವು. ಹುಟ್ಟಿರುವ ಎಲ್ಲಾ ಪ್ರಾಣಿಗಳೂ ದೇಶ-ಕಾಲಗಳಿಗೆ ಒಳಪಟ್ಟೇ ಸೃಷ್ಟವಾಗಿರುವವು. ಆದಿಸೃಷ್ಟಿಯಲ್ಲಿ ಹಿರಣ್ಯಗರ್ಭನು ತನ್ನ ತಪಸ್ಸಿನ ಬಲದಿಂದ ಎಲ್ಲವನ್ನೂ ಉಂಟುಮಾಡಿದಮೇಲೆ ಅವುಗಳೆಲ್ಲಕ್ಕೂ ತಾನೇ ಒಡೆಯನಾಗಿಬಿಟ್ಟನು. ನಿಜವೇನೆಂದರೆ : ಹಿರಣ್ಯಗರ್ಭನ ಸಂಕಲ್ಪವೇ ಸೃಷ್ಟಿಯ ಮೂಲವು. ಆತನು ಸಂಕಲ್ಪಿಸದೆ ಏನೂ ಹೊರಬರುವಂತೆ ಇಲ್ಲ. ಸೃಷ್ಟವಾದ ಮೇಲೂ ಎಲ್ಲಾ ವಸ್ತುಗಳೂ ಅದೇ ಹಿರಣ್ಯಗರ್ಭನ ಸಂಕಲ್ಪಾಧೀನವಾಗಿಯೇ ಇದ್ದುಕೊಂಡಿರುವವು. ಆದ್ದರಿಂದ ಅವನು ಎಲ್ಲಕ್ಕೂ ಪ್ರಭು ಎಂಬುದು ಸಮಂಜಸವಾಗಿದೆ. ಯಾವನ ಸಂಕಲ್ಪದಿಂದ ಯಾವದು ಉಂಟಾದರೂ ಅದು ಅವನೇ ಆಗಿರುತ್ತದೆ - ಎಂಬುದೊಂದು ನಿಯಮವು. ಅದರಂತೆ ಹಿರಣ್ಯಗರ್ಭನೇ ಎಲ್ಲವೂ ಆದನು ಎಂದರೂ ತಪ್ಪಲ್ಲ. ಪಂಚಮಹಾಭೂತಗಳೂ ಕಾಲದೇಶಗಳೂ, ಸೂರ್ಯಚಂದ್ರಾದಿಗಳೂ ಎಲ್ಲವೂ ಹಿರಣ್ಯಗರ್ಭತತ್ತ್ವವನ್ನು

ಒಳಗೊಂಡೇ ಇರುವವು. ಆದ್ದರಿಂದ ಕಾಲಕ್ಕೆ ಒಡೆಯನಾದ ಸೂರ್ಯನನ್ನು ಹಿರಣ್ಯಗರ್ಭನೆಂದೇ ಸ್ತುತಿಸಬಹುದಾಗಿದೆ. ಇಂಥ ಸೂರ್ಯನು ಹಗಲುರಾತ್ರಿಗಳಿಗೂ ಒಡೆಯನಾಗಿದ್ದಾನೆ. ಪ್ರಾಣಿಗಳ ಆಯುಷ್ಯವೆಲ್ಲವೂ ಹಗಲುರಾತ್ರಿಗಳೆಂಬ ಅಳತೆಯಿಂದಲೇ ಅಳೆಯಲ್ಪಡುತ್ತದೆ. ಕಾಲಾತೀತವಾದ ಯಾವ ವಸ್ತುವೂ ಸೃಷ್ಟಿಯಲ್ಲಿಲ್ಲ. ಕಾಲವಾದರೋ ಸೂರ್ಯನ ಚಲನೆಯನ್ನೂ ಸಂಚಾರವನ್ನೂ ಅವಲಂಬಿಸಿರುತ್ತದೆ. ಒಂದು ರೀತಿಯಲ್ಲಿ ಸೂರ್ಯನೇ ಕಾಲರೂಪದಿಂದ ಪ್ರಾಣಿಗಳನ್ನು ಪಚನಮಾಡುತ್ತಿರುವನು. ಈ ಅಭಿಪ್ರಾಯದಂತೆ ಸೂರ್ಯನನ್ನು ಯಮನೆಂದೂ ಹೆಸರಿಸಬಹುದು. ಕಾಲವೆಂಬುದು ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೆಂಬ ಪಂಚಾಂಗಗಳಿಂದ ಕೂಡಿದೆ. ಮಾನವನ ಆಯುಷ್ಯವೆಂಬುದು ಕಾಲಮಯವೇ ಆಗಿದೆ. ಒಬ್ಬ ವ್ಯಕ್ತಿಗೆ ಅರವತ್ತುವರ್ಷಗಳಾದರೆ ಇದೇ ಕಾರಣದಿಂದ ಕಾಲದೇವತೆಯ ಪ್ರೀತ್ಯರ್ಥವಾಗಿ ಶಾಂತಿಗಳನ್ನು ಆಚರಿಸುತ್ತಾರೆ. ಹೀಗೆ ಕಾಲ, ದೇಶ, ಭೂತಗಳು, ಪ್ರಾಣಿಗಳು, ದೇವತೆಗಳೆಲ್ಲರೂ ಹಿರಣ್ಯಗರ್ಭಬ್ರಹ್ಮನ ಅಂಶಗಳೇ ಆಗಿರುವರು. ಆ ಹಿರಣ್ಯಗರ್ಭನೇ ಸೂರ್ಯನೆಂದೂ ಕರೆಯಲ್ಪಡುವನು. ಇಂಥ ಮಹಾತ್ಮನಿಗೆ ನಮಸ್ಕಾರಗಳು ಎಂದಭಿಪ್ರಾಯ.

**ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್ ।**
**ದಿವಂ ಚ ಪೃಥಿವೀಂ ಚಾಂತರಿಕ್ಷಮಥೋ ಸ್ವಃ ॥ ೬೪ ॥**

**"ಧಾತನು ಹಿಂದಿನ ಕಲ್ಪದಲ್ಲಿ ಉಂಟುಮಾಡಿದ್ದಂತೆಯೇ ಈಗಲೂ ಸೂರ್ಯ ಚಂದ್ರರುಗಳನ್ನೂ ಸುಖಕರವಾದ ದ್ಯುಲೋಕವನ್ನೂ ಪೃಥಿವಿಯನ್ನೂ ಅಂತರಿಕ್ಷವನ್ನೂ ಉಂಟುಮಾಡಿದನು" ಎಂದಭಿಪ್ರಾಯ.**

ಈ ಮಂತ್ರದಲ್ಲಿ ಸೂರ್ಯಚಂದ್ರರುಗಳನ್ನು ಹಿರಣ್ಯಗರ್ಭನು ಸೃಷ್ಟಿಸಿದನೆಂದು ಸ್ಪಷ್ಟವಾಗಿ ಹೇಳಿದೆ. ಕಾಲವೆಂಬ ರಥಕ್ಕೆ ಧ್ವಜದಂತಿರುವವರು ಸೂರ್ಯಚಂದ್ರರು, ಹಿರಣ್ಯಗರ್ಭನೂ ಕಾಲಕ್ಕೆ ಒಳಪಟ್ಟವನೇ ಆದ್ದರಿಂದ ಆತನನ್ನು ಕಾಲರಥದ ಒಡೆಯ (ರಥಿ) ಎಂದಿಟ್ಟುಕೊಳ್ಳಬಹುದು. ಇಂಥ ಮಹನೀಯನು ಹಿಂದಿನ ಕಲ್ಪದಲ್ಲಿ ಪ್ರಾಣಿಗಳು ಮಾಡಿರುವ ಕರ್ಮಗಳಿಗೆ ಅನುಗುಣವಾಗಿ ಎಲ್ಲಾ ಜಗತ್ತನ್ನೂ ಉಂಟುಮಾಡುತ್ತಾನೆ. ಮುಂದೆಯೂ ಹೀಗೆಯೇ ಮಾಡಲಿದ್ದಾನೆ - ಎಂದೂ ತಿಳಿಯಬೇಕು. ಅನಾದಿಯಾದ ಸಂಸಾರಮಂಡಲದಲ್ಲಿ ಲೆಕ್ಕವಿಲ್ಲದಷ್ಟು ಹಿರಣ್ಯ ಗರ್ಭಬ್ರಹ್ಮರೂ ಇಂದ್ರರುಗಳೂ ಆಗಿಹೋಗಿರುತ್ತಾರೆ. ಹೀಗಿರುವಲ್ಲಿ ಹುಲು ಮಾನವರ ಪಾಡೇನು ? ಇರಲಿ. ಹಿರಣ್ಯಗರ್ಭನಾದರೊ, ತನ್ನ ತಪಸ್ಸಿನ ಜೊತೆಗೆ

ಪರಮಾತ್ಮನು ಅನುಗ್ರಹಿಸಿಕೊಟ್ಟ ವೇದಗಳನ್ನೂ ಸ್ವೀಕರಿಸಿ ಅವುಗಳನ್ನು ನೆನಪಿಸಿಕೊಂಡು ಹಿಂದಿನ ಕಲ್ಪದ ಸೃಷ್ಟಿಯಲ್ಲಿ ಹೇಗೆ ಹೇಗೆ ದೇವತೆಗಳು, ಋಷಿಗಳು, ಮನುಷ್ಯರು, ಪ್ರಾಣಿಗಳು, ಹಕ್ಕಿಗಳು, ಜಲಚರಗಳು, ಗಿಡಮರಗಳು - ಇತ್ಯಾದಿಗಳು ಸೃಷ್ಟವಾಗಿದ್ದವೋ ಯಾವಯಾವದಕ್ಕೆ ಏನೇನು ಸ್ವಭಾವಗಳು, ಗುಣಗಳು, ರೂಪ, ಆಕಾರ, ನಾಮಗಳಿದ್ದವೋ ಹಾಗೆ ಹಾಗೆಯೇ ಈ ಕಲ್ಪದಲ್ಲಿಯೂ ಮಾಡಿರುತ್ತಾನೆ.

ಹೀಗೆ ಹಿರಣ್ಯಗರ್ಭನ ಸೃಷ್ಟಿಯ ಆರಂಭಕಾಲಕ್ಕೇ ಆತನ ಸತ್ಸಂಕಲ್ಪದಿಂದ ಹೊರಬಂದಿರುವ ಸೂರ್ಯನು ಬ್ರಹ್ಮನಂತೆಯೇ ತೇಜೋಮಯನೂ, ಪರಿಶುದ್ಧನೂ, ಸಕಲಚರಾಚರಗಳ ಆಯುಷ್ಯಕಾರಣನೂ, ಜೀವನಕಾರಣನೂ - ಎಲ್ಲಕ್ಕಿಂತಲೂ ಮಿಗಿಲಾಗಿ ದೇವತೆಗಳಿಂದ ಮನುಷ್ಯರವರೆಗಿನ ಬುದ್ಧಿಜೀವಿಗಳ ಬುದ್ಧಿಪ್ರಚೋದಕನೂ ಆಗಿರುವನು. ಇಂಥ ಸೂರ್ಯದೇವನ ಸ್ತುತಿರೂಪವಾದ ೬೪ ಮಂತ್ರಗಳ ವ್ಯಾಖ್ಯಾನವು ಪೂರೈಸಿದೆ.

॥ ಓಂ ತತ್ಸತ್ ॥

13. ಭಗವನ್ನಾಮಚಂದ್ರಿಕೆ : (ಅಷ್ಟೋತ್ತರಗಳ ಸಂಗ್ರಹ) 52

14. ಸನತ್ಸುಜಾತೀಯಮ್ : (ಪ್ರಕರಣಗಳು ಸಂಪುಟ 7)
(ಮಹಾಭಾರತಂತರ್ಗತ ಸನತ್ಸುಜಾತೀಯ ಶಾಂಕರಭಾಷ್ಯ ಅನುವಾದ ಸಹಿತ) 254

15. ಪ್ರಬೋಧ ಸುಧಾಕರ : (ಪ್ರಕರಣಗಳು ಸಂಪುಟ 8) : ಪ್ರಬೋಧ ಸುಧಾಕರ,
ಪ್ರಶ್ನೋತ್ತರ ರತ್ನಮಾಲಿಕಾ, ಶ್ರೀರಾಮಭುಜಂಗ ಪ್ರಯಾತ, ದತ್ತಲಹರೀ ಸಹಿತ) 118

16. ದೇವೀಮಹಾತ್ಮ್ಯ : (ದುರ್ಗಾಸಪ್ತಶತೀ - ಮೂಲ, ಭಾವಾರ್ಥ ಸಹಿತ) 116

17. ಗೀತಾಮನನ : (101 ಶ್ಲೋಕಗಳಲ್ಲಿ ಗೀತೆಯ ಸಂಗ್ರಹ - ವಿವರಣೆ) 48

18. ಗೃಹಪ್ರವೇಶ : (ಹೊಸದಾಗಿ ಮನೆಯನ್ನು ಕಟ್ಟಿದವರು ಅನುಸರಿಸಬೇಕಾದ ಕ್ರಮಗಳ
ಅರ್ಥವಿವರಣೆ, ಗೃಹಸ್ಥಧರ್ಮದ ಪ್ರಾಶಸ್ತ್ಯದೊಡನೆ - ಅಧ್ಯಾತ್ಮತತ್ತ್ವವಿಚಾರ ಸಹಿತ) 42

19. ಸ್ತುತಿಪುಷ್ಪಾಂಜಲಿ : (ಭಕ್ತರೆಲ್ಲರೂ ಕಂಠಪಾಠಮಾಡಲು ಯೋಗ್ಯವಾದ
ಶ್ಲೋಕಗಳು, ಪ್ರತಿಪದಾರ್ಥಗಳ ಸಹಿತ) 72

## III. ಅಧ್ಯಾತ್ಮ ಜಿಜ್ಞಾಸುಗಳಿಗೆ (ತತ್ತ್ವಪ್ರಧಾನರಾದ ಮುಮುಕ್ಷುಗಳಿಗೆ)

20. ಮಹಾನಾರಾಯಣೋಪನಿಷತ್ತು :(ಕನ್ನಡದಲ್ಲಿ ವಿಸ್ತಾರವಾದ-ಅರ್ಥವಿವರಣೆ) 220

21. ತೈತ್ತಿರೀಯೋಪನಿಷದ್ಭಾಷ್ಯವಾರ್ತಿಕ : (ಮೂಲ - ಅನುವಾರ ಸಹಿತ) 200

22. ಆತ್ಮಪ್ರತಿಬೋಧ : (ಕೇನೋಪನಿಷತ್ತನ್ನು ಕುರಿತ ಪ್ರಬಂಧ) 48

23. ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ : (ಈ ಹೆಸರಿನ ಉಪನಿಷತ್ತಿನ ಮೇಲೆ
ಬರೆದಿರುವ ವಿವರಣೆ) 58

24. ಬೃಹದಾರಣ್ಯಕೋಪನ್ಯಾಸಮಂಜರಿ : (ಶಾಂಕರ ಭಾಷ್ಯಾನುಸಾರವಾದ
ಲಘು ವಿವರಣೆ) 340

25. ಛಾಂದೋಗ್ಯೋಪನ್ಯಾಸಮಂಜರಿ : (ಶಾಂಕರ ಭಾಷ್ಯಾನುಸಾರವಾದ
ಲಘು ವಿವರಣೆ) 338

26. ಶ್ವೇತಾಶ್ವತರೋಪನ್ಯಾಸಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 354

27. ತೈತ್ತಿರೀಯೋಪನ್ಯಾಸಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 83

28. ಐತರೇಯೋಪನ್ಯಾಸಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 28

29. ಗೀತಾಶಾಸ್ತ್ರಾರ್ಥ ವಿವೇಕ : (ಶ್ರೀಶ್ರೀಗಳವರ ಸಂಸ್ಕೃತ ಗ್ರಂಥದ ಕಿರುಪರಿಚಯ) 52

30. ತತ್ತ್ವಸಂಗ್ರಹ ರಾಮಾಯಣ : (ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ
ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ)

# ವೇ|| ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳ ಕಿರುಪರಿಚಯ



ಶ್ರೀಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತ ಪ್ರಯೋಗ ಉಭಯವಿದ್ವಾನ್ ದಿ|| ಶೃಂಗೇರಿ ಶ್ರೀಕಂಠಘನಪಾಠಿಗಳವರು ಮತ್ತು ಕಮಲಮ್ಮನವರ ಸೀಮಂತ ಪುತ್ರರಾದ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ತಾ|| 2.6.1928ರಲ್ಲಿ ಜನಿಸಿದರು. ಒಂಭತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಿಂದಲೇ ವೇದಾಧ್ಯಯನ ಕಾಲೋಚಿತಭಾಗಗಳನ್ನು ಅಭ್ಯಾಸ ಮಾಡಿದರು. 14ನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದರು. ಅದೇ ಸಂದರ್ಭದಲ್ಲಿ ಪಿತೃವಿಯೋಗವಾದ್ದರಿಂದ ಆಂಗ್ಲ ವಿದ್ಯಾಭ್ಯಾಸದಿಂದ ನಿವೃತ್ತರಾಗಿ ಬೇಲೂರಿನಲ್ಲಿ ಸಂಸ್ಕೃತ ಪಾಠಶಾಲೆಗೆ ಸೇರಿ ನಾಲ್ಕು ವರ್ಷಗಳ ಕಾಲ ಸಂಸ್ಕೃತಾಭ್ಯಾಸ ಮಾಡಿ ಚಂಪೂನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ 1947ರಲ್ಲಿ ಹೊಳೆನರಸೀಪುರಕ್ಕೆ ಬಂದು ಅಧ್ಯಾತ್ಮವಿದ್ಯಾರ್ಥಿನಿಲಯಕ್ಕೆ ಸೇರಿ ಐದು ವರ್ಷಗಳ ಕಾಲ ಶಾಂಕರವೇದಾಂತಾಧ್ಯಯನವನ್ನು ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರ ಸನ್ನಿಧಿಯಲ್ಲಿ ಅಭ್ಯಾಸಮಾಡಿ 1952ರಲ್ಲಿ ಅಧ್ಯಾತ್ಮ ವಿದ್ಯಾಪ್ರವೀಣ ಎಂಬ ಪ್ರಶಸ್ತಿಯನ್ನು ಪಡೆದರು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿಯೇ ಪಂಡಿತರಾಗಿ ನೇಮಿಸಲ್ಪಟ್ಟು ಪಾಠ ಪ್ರವಚನಗಳು ಉಪನ್ಯಾಸಗಳು ಹಾಗೂ ಸಂಸ್ಥೆಯ ಆಡಳಿತ ವಿಭಾಗದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಾ ಈಗಲೂ ಸಂಸ್ಥೆಯಲ್ಲಿ ಸೇವಾತತ್ಪರರಾಗಿದ್ದಾರೆ.

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಪೂಜ್ಯ ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಇವರು 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯ ಸಂಪಾದಕರೂ, ಲೇಖಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಧ್ಯಾತ್ಮಗ್ರಂಥಗಳ ಬರಹಗಾರರೂ ಪ್ರಕಾಶಕರೂ ಆಗಿ ಸೇವೆಸಲ್ಲಿಸುತ್ತಾ ಪ್ರಧಾನಕಾರ್ಯಾಲಯದಲ್ಲಿಯೇ ಕಳೆದ 50 ವರ್ಷಗಳಿಂದಲೂ ಸೇವಾ ನಿರತರಾಗಿದ್ದಾರೆ. ಶ್ರೀಶ್ರೀಗಳವರ ಕಾಲಾನಂತರ ಈವರೆಗೆ 30 ಅಧ್ಯಾತ್ಮ ಗ್ರಂಥಗಳನ್ನು ಹೊರತಂದಿದ್ದಾರೆ. ನಾಲ್ಕು ಪರ್ಯಾಯಗಳಲ್ಲಿ ಬ್ರಹ್ಮಸೂತ್ರಶಾಂಕರಭಾಷ್ಯದ ಮೇಲೆ 120 ಪ್ರವಚನಗಳನ್ನು ನೀಡಿದ್ದಾರೆ. ಇವು 108 ಕ್ಯಾಸೆಟ್ ಗಳಲ್ಲಿ ಅಡಕವಾಗಿದ್ದು ಜನಪ್ರಿಯವಾಗಿವೆ. ಹೀಗೆ ಪೂಜ್ಯ ಶ್ರೀಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಈಗಲೂ ತಮ್ಮ ಅಮೋಘ ಸೇವೆಯಿಂದ ಸಂಸ್ಥೆಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಎಂದು ತಿಳಿಸಲು ಸಂತೋಷಪಡುತ್ತೇವೆ.